# ಕರ್ನಾಟಕ ವಿಕಾಸ
# Karnataka Vikas

ಮೇ-ಜೂನ್ 2018 May-June 2018








**ಪಂಚಾಯತ್ ರಾಜ್ ದಿವಸ್– ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರಶಸ್ತಿಗಳ ಸರಮಾಲೆ**

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಮೇ–ಜೂನ್ 2018 | ಸಂಪುಟ : 59 | Volume : 59
May-June 2018 | ಸಂಚಿಕೆ : 6-7 | Issue : 6-7

## ಈ ಸಂಚಿಕೆಯೊಳಗೆ


| | | |
|---|---|---|
| ಮುಖ್ಯಮಂತ್ರಿ ಪರಿಚಯ | | 5 |
| ಉಪ ಮುಖ್ಯಮಂತ್ರಿ ಪರಿಚಯ | | 6 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರಿಚಯ | | 7 |
| ಸಚಿವಾಲಯದಿಂದ ಸಂದೇಶ | – ಡಾ॥ ಎನ್.ನಾಗಾಂಬಿಕಾ ದೇವಿ | 8 |
| ಲೇಖನ | – ರಾಚಯ್ಯ ಚೌಕಿಮಠ | 10 |
| ವರದಿ | – ಶೋಭಾರಾಣಿ | 14 |
| ಲೇಖನ | – ಮೋಹನ್ ರಾಜ್ | 16 |
| ವರದಿ | – ಗಾಯತ್ರಿ ಪಿ | 19 |
| | – ಡಾ॥ ಎಂ.ಆರ್.ರವಿ | 21 |
| | – ಮನೋಜ್ ಕುಮಾರ್ ಶುಕ್ಲಾ | 23 |
| | – ಸೂರ್ಯನಾರಾಯಣ ಭಟ್ಟ | 25 |
| | – ಲಕ್ಷ್ಮಣ ಕೆರಳ್ಳಿ | 27 |
| | – ಸುಬ್ಬರಾಜ ಅರಸ್ ವಿ ಆರ್ | 30 |
| | – ಜಿ. ಮಲ್ಲಿಕಾರ್ಜುನ ಸ್ವಾಮಿ | 33 |
| ಯಶೋಗಾಥೆ | – ಎಂ.ಎಸ್.ರಾಮಚಂದ್ರ | 38 |
| | – ಪ್ರಮೋದ.ಮೋ.ಚಾಂದಕವಟೆ | 41 |
| ವರದಿ | – ಡಿ.ವ್ಹಿ.ಅಂಗೂರ | 46 |
| ಕವಿಯ(ಕ್ಷ) ಪ್ರಶ್ನೆ | – ಡಾ. ಎಂ.ಎಸ್.ಮಂಜುನಾಥ | 49 |
| ಕಾವ್ಯ ವಿಕಾಸ | – ಬಾಲಕೃಷ್ಣ ಹೆಗ್ಡೆ ಬನ್ನಾ | 50 |






ಪ್ರಕಾಶಕರು
ಎಂ.ಕೆ.ಕೆಂಪೇಗೌಡ
ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
ಡಾ॥ ಬೂವನಹಳ್ಳಿ ನಾಗರಾಜ್
ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ
ಗಗನ್ ಎ.ಎಸ್.

ಸಹಾಯಕ ಸಂಪಾದಕರು
ಆಗ್ನೇಸ್ ಮೇರಿ



### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



### ಕಚೇರಿ ವಿಳಾಸ

ಸಂಪಾದಕರು ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ.309, 3ನೇ ಮಹಡಿ, ಗೇಟ್ ನಂ.1,
ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ: 080–22353857
www.rdpr.kar.nic.in
Email: kvrdpr@gmail.com




### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಏಪ್ರಿಲ್ 2018ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮುಖಪುಟವು ಬಹಳ ಚೆನ್ನಾಗಿದ್ದು, ಗ್ರಾಮೀಣ ಜನರ ಆರೋಗ್ಯ ಮತ್ತು ಜನರ ಜೀವನ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಸ್ವಚ್ಛ ಭಾರತ್ ಮಿಷನ್ ಯೋಜನೆಯನ್ನು ಜಾರಿಗೆ ತಂದು ರಾಜ್ಯದ ಹಲವಾರು ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತಗೊಳಿಸಿರುವುದು ಒಳ್ಳೆಯ ಸಾಧನೆಯೇ ಆಗಿದೆ. ಇಂತಹ ಸಾದನೆಗೆ ಶ್ರಮಿಸಿರುವ ಇಲಾಖೆಯ ಅಧಿಕಾರಿ/ನೌಕರರ ವೃಂದದವರಿಗೆ ಶುಭವಾಗಲಿ. ಅಂತೆಯೆ ಪತ್ರಿಕೆಯಲ್ಲಿನ ಲೇಖನಗಳು, ಯಶೋಗಾಥೆಗಳು, ವರದಿಗಳು, ಸುತ್ತೋಲೆಗಳು ಬಹಳ ಉಪಯುಕ್ತವಾಗಿವೆ.

**– ಶ್ರೀಮತಿ ಪದ್ಮ ನಾಗರಾಜ್**
ಮಲ್ಲಾಡಿಹಳ್ಳಿ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಏಪ್ರಿಲ್ 2018ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮುಖಪುಟದಲ್ಲಿನ 'ಹಂಗಿನ ಬದುಕಿನಿಂದ ಹಕ್ಕಿನ ಬದುಕಿನ ಕಡೆಗೆ' ಎಂಬ ಶೀರ್ಷಿಕೆಯು ಅರ್ಥಪೂರ್ಣವಾಗಿದ್ದು, ಗ್ರಾಮಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಜಾರಿಗೆ ತಂದು ಯಶಸ್ವಿಗೊಳಿಸಿರುವುದು ವಿಶಿಷ್ಟ ಸಾಧನೆಯೆ ಸರಿ. ಗ್ರಾಮ ಪಂಚಾಯತಿಗಳು ಕೈಗಾರಿಕೆಗಳಿಗೆ ವಿದಿಸುತ್ತಿರುವ ತೆರಿಗೆ ಹಾಗೂ ಫೀಜುಗಳು ಮತ್ತು ವಸೂಲಿ ಕ್ರಮದ ಬಗ್ಗೆ ಮಾರ್ಗಸೂಚಿಗಳ ಕುರಿತು ನಿರ್ದೇಶಕರು (ಪಂ.ರಾಜ್–1) ಇವರು ಹೊರಡಿಸಿರುವ ಸುತ್ತೋಲೆಯು ಬಹಳ ಉಪಯುಕ್ತವಾಗಿದೆ. ಮುಂದಿನ ವರ್ಷಗಳಲ್ಲಿ ಇಲಾಖೆಯ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತಂದು ಯಶಸ್ವಿ ಕಾಣಲೆಂದು ಹಾರೈಸುತ್ತೇವೆ.

**– ಶ್ರೀಮತಿ ಪುಷ್ಪ ರಮೇಶ್**
ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ

'ಹಂಗಿನ ಬದುಕಿನಿಂದ ಹಕ್ಕಿನ ಬದುಕಿನ ಕಡೆಗೆ' ಎಂದು ಶೀರ್ಷಿಕೆಯ ಮುಖಪುಟದೊಂದಿಗೆ ಮೂಡಿಬಂದಿರುವ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಗ್ರಾಮೀಣ ಜನರ ಬದುಕಿನಲ್ಲಿ ಬದಲಾವಣೆಯ ಮಹತ್ವದ ಹಾದಿಯನ್ನು ಎತ್ತಿ ತೋರುತ್ತಿದೆ. ಇಲಾಖೆಯು ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವು ಸಂತೋಷದ ವಿಷಯವಾಗಿದೆ. ಇಲಾಖಾ ವಿವಿಧ ಕೆಲಸಗಳೊಂದಿಗೆ ಚುನಾವಣಾ ಕಾರ್ಯಗಳಿಗಾಗಿ ಇಲಾಖೆ ವತಿಯಿಂದ ಅಧಿಕಾರಿ/ನೌಕರರನ್ನು ನಿಯೋಜಿಸಿ ಜನತೆಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಚುನಾವಣಾ ಕಾರ್ಯದಲ್ಲಿ ತೊಡಗಿರುವ ಎಲ್ಲರಿಗೂ ದನ್ಯವಾದಗಳು.

**– ರಾಜರ್**
ಟ್ಯಾನಿ ರೋಡ್, ಬೆಂಗಳೂರು.



# ಮುಖ್ಯಮಂತ್ರಿ ಪರಿಚಯ

ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ರವರು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಮಾಜಿ ಪ್ರಧಾನ ಮಂತ್ರಿಯವರಾದ ಮಾನ್ಯ ಶ್ರೀ ಹೆಚ್.ಡಿ.ದೇವೆಗೌಡ ಮತ್ತು ಶ್ರೀಮತಿ ಚೆನ್ನಮ್ಮ ಇವರ ಮಗನಾಗಿ 16 ಡಿಸೆಂಬರ್ 1959 ರಂದು ಜನಿಸಿದರು.

ಇವರು ಹಾಸನದ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು, ಬೆಂಗಳೂರಿನ ಜಯನಗರದ ಎಂ.ಇ.ಎಸ್ ಎಜುಕೇಷನ್‌ನಲ್ಲಿ ಪ್ರೌಢ ಶಾಲಾ ಶಿಕ್ಷಣವನ್ನು, ವಿಜಯ ಕಾಲೇಜಿನಲ್ಲಿ ಪಿಯುಸಿ ಮತ್ತು ಜಯನಗರ ನ್ಯಾಷನಲ್ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿಯನ್ನು ಪಡೆದಿರುತ್ತಾರೆ.

## ರಾಜಕೀಯ ಜೀವನ

1996ರಲ್ಲಿ ಮೊದಲ ಬಾರಿಗೆ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾದರು. 2004ರಲ್ಲಿ ಕರ್ನಾಟಕ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ, ಫೆಬ್ರವರಿ 2006ರಂದು ಮೊದಲ ಬಾರಿಗೆ ಕರ್ನಾಟಕ ಸರ್ಕಾರದ ನೇತೃತ್ವ ವಹಿಸಿ ಕರ್ನಾಟಕ ರಾಜ್ಯದ 18ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಅತ್ಯಂತ ಕಿರಿಯ ವಯಸ್ಸಿನಲ್ಲೇ ಮುಖ್ಯಮಂತ್ರಿಯಾಗಿ ಯಶಸ್ವಿಯಾಗಿ ಆಡಳಿತ ನಡೆಸಿದರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 2009ರಲ್ಲಿ ಲೋಕಸಭೆಗೆ ಎರಡನೇ ಬಾರಿಗೆ ಆಯ್ಕೆಗೊಂಡು 31 ಆಗಸ್ಟ್ 2009ರಂದು ಕಮಿಟಿ ಆನ್ ರೂರಲ್ ಡೆವಲಪ್‌ಮೆಂಟ್ ಸದಸ್ಯರಾಗಿಯೂ ಹಾಗೂ 15 ಅಕ್ಟೋಬರ್ 2009 ರಂದು ಕಮಿಟ್ ಆನ್ ಫುಡ್ ಮ್ಯಾನೇಜ್‌ಮೆಂಟ್ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ.ಕೆಂಗಲ್ ಹನುಮಂತಯ್ಯರವರು ಬೆಂಗಳೂರಿನಲ್ಲಿ ವಿಧಾನಸೌಧ ನಿರ್ಮಿಸಿದಂತೆ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರು ನೆಲ, ಜಲ, ಭಾಷೆಯ ಉಳಿವಿಗಾಗಿ ಬೆಳಗಾವಿಯಲ್ಲಿ ಸುವರ್ಣಸೌಧ ನಿರ್ಮಿಸಲು ಅಡಿಗಲ್ಲು ಹಾಕಿದರು. ಗ್ರಾಮೀಣ ಪ್ರದೇಶದ ಜನರ ಸಂಕಷ್ಟಗಳು, ಬಡತನ ಮತ್ತು ಬವಣೆಗಳನ್ನು ರೈತಾಪಿ ಹಿನ್ನೆಲೆಯ ಸನ್ಮಾನ್ಯ ಶ್ರೀ.ಹೆಚ್.ಡಿ.ಕುಮಾರಸ್ವಾಮಿರವರು ಬಹುವಾಗಿ ಅರಿತಿದ್ದು, ಯಾವಾಗಲೂ ಹಿಂದುಳಿದವರು, ನೊಂದವರ ಬಗ್ಗೆ ವಿಶೇಷ ಕಾಳಜಿ ವಹಿಸುವುದಲ್ಲದೇ ಅವರ ಸಮಸ್ಯೆಗಳ ಪರಿಹಾರದತ್ತ ಸದಾ ನೆರವಾಗುತ್ತಾ ಬಂದಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ಜಿಲ್ಲೆಯ ರಾಮನಗರ ಹಾಗೂ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳಿಂದ ಜಯಗಳಿಸಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ದಿನಾಂಕ:23.05.2018ರಂದು ಪ್ರಮಾಣ ವಚನ ಸ್ವೀಕರಿಸಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದರು.

ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಈ ಸುಸಂದರ್ಭದಲ್ಲಿ ಶುಭ ಮತ್ತು ಯಶಸ್ಸನ್ನು ಕೋರುತ್ತಾ. ಇವರುಗಳ ಅವಧಿಯಲ್ಲಿ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಹೊಂದಲಿ ಎಂದು ಇಲಾಖೆಯು 'ಕರ್ನಾಟಕ ವಿಕಾಸ'ದ ಮುಖಾಂತರ ಶುಭ ಹಾರೈಸುತ್ತದೆ.



# ಉಪ ಮುಖ್ಯಮಂತ್ರಿ ಪರಿಚಯ

ಸನ್ಮಾನ್ಯ ಡಾ|| ಜಿ.ಪರಮೇಶ್ವರ ರವರು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಗೊಲ್ಲಹಳ್ಳಿ ಗ್ರಾಮದಲ್ಲಿ ಶ್ರೀ ಹೆಚ್.ಎಂ.ಗಂಗಾಧರಯ್ಯ ಮತ್ತು ಶ್ರೀಮತಿ ಗಂಗಮಲ್ಲಮ್ಮ ಇವರ ಮಗನಾಗಿ ದಿನಾಂಕ: 06.08.1951 ರಂದು ಜನಿಸಿದರು.

ಇವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಿದ್ಧಾರ್ಥನಗರ ಮತ್ತು ಹೆಗ್ಗೆರೆಯಲ್ಲಿ, ಪ್ರೌಢ ಶಾಲಾ ಶಿಕ್ಷಣವನ್ನು ಸಿದ್ಧಾರ್ಥನಗರದಲ್ಲಿ, ಪಿಯುಸಿಯನ್ನು ಸರ್ಕಾರ ಪದವಿ ಪೂರ್ವ ಕಾಲೇಜು ತುಮಕೂರಿನಲ್ಲಿ, ಬಿಎಸ್ಸಿ ಮತ್ತು ಎಂ.ಎಸ್ಸಿಯನ್ನು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿದ್ದು ಹಾಗೂ ಪಿ.ಹೆಚ್‌ಡಿಯನ್ನು ಸಸ್ಯ ಶರೀರಶಾಸ್ತ್ರ ವಿಜ್ಞಾನದಲ್ಲಿ ಆಸ್ಟ್ರೇಲಿಯಾದ ವೇಯಿಟ್ ಅಗ್ರಿಕಲ್ಚರಲ್ ರಿಸರ್ಚ್ ಸೆಂಟರ್, ಅಡಿಲೇಡ್ ಯುನಿವರ್ಸಿಟಿಯಲ್ಲಿ (P.hd in Waite Agricultural Research Centre, University of Adelaide in Plant Physiology) ಪಡೆದಿರುತ್ತಾರೆ.

ಗ್ರಾಮೀಣ ಪ್ರದೇಶದ ಜನರ ಸಂಕಷ್ಟಗಳು, ಬಡತನ ಮತ್ತು ಬವಣೆಗಳನ್ನು ರೈತಾಪಿ ಹಿನ್ನೆಲೆಯ ಸನ್ಮಾನ್ಯ ಡಾ|| ಜಿ. ಪರಮೇಶ್ವರ ರವರು ಬಹುವಾಗಿ ಅರಿತಿದ್ದು, ಯಾವಾಗಲೂ ಹಿಂದುಳಿದವರು, ನೊಂದವರ ಬಗ್ಗೆ ವಿಶೇಷ ಕಾಳಜಿ ವಹಿಸುವುದಲ್ಲದೇ ಅವರ ಸಮಸ್ಯೆಗಳ ಪರಿಹಾರದತ್ತ ಸದಾ ನೆರವಾಗುತ್ತಾ ಬಂದಿದ್ದಾರೆ.


## ರಾಜಕೀಯ ಜೀವನ

ಇವರ ತಂದೆ ಮುಂಚಿನಿಂದಲೂ ರಾಜಕೀಯದಲ್ಲಿ ಸಕ್ರಿಯರಾಗಿದ್ದ ಕಾರಣ, ಇವರು ಸಹ ಚಿಕ್ಕಂದಿನಿಂದಲೇ ರಾಜಕೀಯದಲ್ಲಿ ಅಪಾರ ಅನುಭವ ಪಡೆದರು. 1993ರಲ್ಲಿ ಶ್ರೀ ವೀರಪ್ಪ ಮೊಯ್ಲಿ ಕ್ಯಾಬಿನೆಟ್‌ನಲ್ಲಿ ರೇಷ್ಮ ಇಲಾಖೆಯ ಸಚಿವರಾಗಿ, 1994 ರಿಂದ 2004ರ ಶ್ರೀ ಎಸ್.ಎಂ.ಕೃಷ್ಣ ಕ್ಯಾಬಿನೆಟ್‌ನಲ್ಲಿ ಹೈಯರ್ ಎಜುಕೇಷನ್ ಮತ್ತು ಸೈನ್ಸ್ ಅಂಡ್ ಟೆಕ್ನಾಲಜಿ ಸಚಿವರಾಗಿ, 18ನೇ ಆಗಸ್ಟ್ 2001 ರಲ್ಲಿ ಮೆಡಿಕಲ್ ಎಜುಕೇಷನ್ ಸಚಿವರಾಗಿ, 30ನೇ ಡಿಸೆಂಬರ್ 2003ರಲ್ಲಿ ಇನ್‌ಫಾರ್‌ಮೇಶನ್ & ಪಬ್ಲಿಸಿಟಿ ಸಚಿವರಾಗಿ, 24ನೇ ಜೂನ್ 2015 ರಲ್ಲಿ ಕರ್ನಾಟಕ ರಾಜ್ಯಕ್ಕೆ ಗೃಹ ಸಚಿವರಾಗಿ ಅಪಾರ ಸೇವೆ ಸಲ್ಲಿಸಿರುತ್ತಾರೆ.

ಇತ್ತೀಚೆಗೆ ನಡೆದ ವಿಧಾನಸಾ ಚುನಾವಣೆಯಲ್ಲಿ ತುಮಕೂರು ಜಿಲ್ಲೆಯ ಕೊರಟಗೊರೆ ವಿಧಾನಸಭಾ ಕ್ಷೇತ್ರದಿಂದ ಜಯಗಳಿಸಿ ಉಪ ಮುಖ್ಯಮಂತ್ರಿಯಾಗಿ ದಿನಾಂಕ:23.05.2018ರಂದು ಪ್ರಮಾಣ ವಚನ ಸ್ವೀಕರಿಸಿ ಪ್ರಸ್ತುತ ಗೃಹ ಇಲಾಖೆ ಹಾಗೂ ಯುವಜನ ಮತ್ತು ಕ್ರೀಡಾ ಇಲಾಖೆಯ ಚುಕ್ಕಾಣಿ ಹಿಡಿದಿದ್ದಾರೆ.

ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ|| ಜಿ.ಪರಮೇಶ್ವರರವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಈ ಸುಸಂದರ್ಭದಲ್ಲಿ ಶುಭ ಮತ್ತು ಯಶಸ್ಸನ್ನು ಕೋರುತ್ತಾ. ಇವರುಗಳ ಅವಧಿಯಲ್ಲಿ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಹೊಂದಲಿ ಎಂದು ಇಲಾಖೆಯು 'ಕರ್ನಾಟಕ ವಿಕಾಸ'ದ ಮುಖಾಂತರ ಶುಭ ಹಾರೈಸುತ್ತದೆ.

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರಿಚಯ



ಸನ್ಮಾನ್ಯ ಶ್ರೀ.ಕೃಷ್ಣಭೈರೇಗೌಡರವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇವರು ದಿವಂಗತ ಶ್ರೀ ಸಿ.ಬೈರೇಗೌಡ ಮತ್ತು ಶ್ರೀಮತಿ ಸಾವಿತ್ರಮ್ಮ ಇವರ ಮಗನಾಗಿ ಕೋಲಾರ ಜಿಲ್ಲೆಯ ವೇಮಗಲ್ ಗ್ರಾಮದಲ್ಲಿ ದಿನಾಂಕ:04.04.1973 ರಂದು ಜನಿಸಿದರು.

ಸನ್ಮಾನ್ಯ ಶ್ರೀ.ಕೃಷ್ಣಭೈರೇಗೌಡರವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವಿದ್ಯಾಭ್ಯಾಸವು ಸರ್ಕಾರಿ ಪ್ರೌಢಶಾಲೆ,ಕೋಲಾರ ತಾಲ್ಲೂಕು ಹಾಗೂ ಮುದ್ದೇನಹಳ್ಳಿ ಸಾಯಿ ಬಾಬಾ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿರುತ್ತಾರೆ. ನಂತರ ಪದವಿ ಪೂರ್ವ ಶಿಕ್ಷಣವನ್ನು ನ್ಯಾಷನಲ್ ಕಾಲೇಜು ಬೆಂಗಳೂರು ಹಾಗೂ ಬಿಬಿಎಂ ಪದವಿಯನ್ನು ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ತದನಂತರ MA of Arts, International Affairs, School of International Services, American University, Washington, DC. ತಮ್ಮ ಕುಟುಂಬವು ಕೃಷಿ ಅವಲಂಭಿತವಾಗಿದ್ದು, ಕೃಷಿಯಲ್ಲಿ ಹೆಚ್ಚಿನ ಅನುಭವ ಹಾಗೂ ಪರಿಣಿತಿ ಪಡೆದಿರುತ್ತಾರೆ. ಉನ್ನತ ವ್ಯಾಸಂಗದ ನಂತರ ಕೃಷಿ ಚಟುವಟಿಕೆಯಲ್ಲಿ ಭಾಗಿಯಾಗಿ ತದನಂತರ ಅಮೇರಿಕಾಕ್ಕೆ ತೆರಳಿ ಅಲ್ಲಿ ರಿಸರ್ಚ್ ಅಸೋಸಿಯೇಟ್ ಅಧಿಕಾರಿಯಾಗಿ ಅಮೇರಿಕನ್ ಹಾಗೂ ಯುತೋಪಿಯನ್ ಎಂಬೇಸ್ಸಿ ಇಲ್ಲಿ ಕಾರ್ಯನಿರ್ವಹಿಸಿರುತ್ತಾರೆ.

## ರಾಜಕೀಯ ಜೀವನ

ಸನ್ಮಾನ್ಯ ಶ್ರೀ.ಕೃಷ್ಣಭೈರೇಗೌಡರವರ ತಂದೆಯವರ ಅಕಾಲಿಕ ಮರಣದಿಂದಾಗಿ ರಾಜಕೀಯದಲ್ಲಿ ಪ್ರವೇಶ ಮಾಡಿರುತ್ತಾರೆ. ಮೊದಲ ಬಾರಿ ಹಾಗೂ ಎರಡನೇ ಬಾರಿಗೆ ವೇಮಗಲ್ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಸದರಿ ವಿಧಾನಸಭಾ ಕ್ಷೇತ್ರವು ಪುನರ್ ವಿಂಗಡನೆ ಅವಧಿಯಲ್ಲಿ ಇತರೆ ವಿಧಾನಸಭಾ ಕ್ಷೇತ್ರಗಳಲ್ಲಿ ವಿಲೀನವಾದ ನಂತರ ಬೆಂಗಳೂರು ನಗರ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ 3 ಬಾರಿ ಆಯ್ಕೆಯಾಗಿರುತ್ತಾರೆ.

ಮಾನ್ಯರು 2004 ರಿಂದ ಸತತವಾಗಿ 5 ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ 2013 ರಿಂದ 2018ರ ವರೆಗೆ ಕೃಷಿ ಸಚಿವರಾಗಿ ಕೃಷಿ ಇಲಾಖೆಯಲ್ಲಿ ಒಣ ಭೂಮಿ ಪ್ರದೇಶದ ರೈತರಿಗೆ "ಕೃಷಿ ಭಾಗ್ಯ" ಯೋಜನೆ ಅನುಷ್ಠಾನ ಮಾಡಿ ಒಣ ಬೇಸಾಯ ಪ್ರದೇಶಕ್ಕೆ ಆದ್ಯತೆ ನೀಡಿರುತ್ತಾರೆ. ಅಲ್ಲದೆ ಕೇಂದ್ರ ಸರ್ಕಾರದ ಜಿ.ಎಸ್.ಟಿ. ಕೌನ್ಸಿಲ್‌ನಲ್ಲಿ ರಾಜ್ಯದ ಹಣಕಾಸು ಮಂತ್ರಿ ಪರವಾಗಿ ಸದಸ್ಯರಾಗಿ ಕಾರ್ಯನಿರ್ವಹಿಸಿ ಉತ್ತಮ ಸೇವೆ ಸಲ್ಲಿಸಿ ಕರ್ನಾಟಕ ಜನತೆಯ ಪ್ರಶಂಸೆಗೆ ಪಾತ್ರರಾಗಿರುತ್ತಾರೆ. ಪ್ರಸಕ್ತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸನ್ಮಾನ್ಯ ಶ್ರೀ.ಕೃಷ್ಣಭೈರೇಗೌಡರವರಿಗೆ ಈ ಸುಸಂದರ್ಭದಲ್ಲಿ ಶುಭ ಮತ್ತು ಯಶಸ್ಸನ್ನು ಕೋರುತ್ತಾ, ಇವರ ಅವಧಿಯಲ್ಲಿ ಕರ್ನಾಟಕ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸರ್ವತೋಮುಖ ಅಭಿವೃದ್ಧಿ ಹೊಂದಲಿಯೆಂದು ಇಲಾಖೆಯು 'ಕರ್ನಾಟಕ ವಿಕಾಸ' ಪತ್ರಿಕೆಯ ಮೂಲಕ ಶುಭ ಕೋರುತ್ತೇವೆ.

# ಸಚಿವಾಲಯದಿಂದ ಸಂದೇಶ




**ಡಾ॥ ಎನ್.ನಾಗಾಂಬಿಕಾ ದೇವಿ**
ಭಾ.ಆ.ಸೇ.
**ಸರ್ಕಾರದ ಪ್ರಧಾನ ಕಾರ್ಯದರ್ಶಿ**


ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**

**ಪ್ರಿಯ ಬಂಧುಗಳೇ,**

## ಪಂಚಾಯತ್ ರಾಜ್ ದಿವಸ್ – ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರಶಸ್ತಿಗಳ ಸರಮಾಲೆ

ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವ ಉದ್ದೇಶದಿಂದ ಪ್ರತಿ ವರ್ಷ ಏಪ್ರಿಲ್ 24 ರಂದು ಪಂಚಾಯತ್ ರಾಜ್ ದಿನಾಚಾರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಈ ವರ್ಷದ ದಿನಾಚಾರಣೆ ಮಧ್ಯಪ್ರದೇಶ ರಾಜ್ಯದ ಮಂಡ್ಲಾ ಜಿಲ್ಲೆಯಲ್ಲಿ ನಡೆದ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗೆ ಲಭಿಸಿದ ಹೆಮ್ಮೆಯ ಇ–ಪುರಸ್ಕಾರ ಪ್ರಶಸ್ತಿಯನ್ನು ಮಾನ್ಯ ಪ್ರಧಾನ ಮಂತ್ರಿಗಳಿಂದ ನಾನು ಸ್ವೀಕರಿಸಿದ್ದನ್ನು ತಮ್ಮೆಲ್ಲರಿಗೆ ತಿಳಿಸಲು ಹರ್ಷಿಸುತ್ತೇನೆ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಶ್ರಮಕ್ಕೆ ಸಂದ ಪ್ರಶಸ್ತಿಯಾಗಿರುತ್ತದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

ಇದೇ ಸಂದರ್ಭದಲ್ಲಿ ರಾಜ್ಯದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಮಾಲಂಗಿ ಗ್ರಾಮ ಪಂಚಾಯತಿಗೆ 'ನಮ್ಮ ಗ್ರಾಮ ನಮ್ಮ ಯೋಜನೆ'ಯ ಉತ್ತಮ ಅನುಷ್ಠಾನಕ್ಕೆ ಗ್ರಾಮ ಪಂಚಾಯತ್ ವಿಕಾಸ ಯೋಜನಾ ಪುರಸ್ಕಾರ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ, ಉಡುಪಿ ತಾಲ್ಲೂಕು ಪಂಚಾಯತಿ, ಹೊಸನಗರ ತಾಲ್ಲೂಕು ಪಂಚಾಯತಿ, ರಡ್ಡೇರನಾಗನೂರು ಗ್ರಾಮ ಪಂಚಾಯತಿ, ಬಿಂಕದಕಟ್ಟೆ ಗ್ರಾಮ ಪಂಚಾಯತಿ ಮತ್ತು ಉಜಿರೆ ಗ್ರಾಮ ಪಂಚಾಯತಿಗಳಿಗೆ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ ಮತ್ತು ಬಳಂದೂರು ಗ್ರಾಮ ಪಂಚಾಯತಿಗೆ ನಾನಾಜಿ ದೇಶ್‌ಮುಖ್ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ ನೀಡಿ ಗೌರವಿಸಿದ್ದು, ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಶ್ರಮಕ್ಕೆ

ಸಂದ ಪ್ರಶಸ್ತಿಯಾಗಿರುತ್ತದೆ ಮತ್ತು ಇಲಾಖೆಗೆ ಮತ್ತಷ್ಟು ಪ್ರಗತಿ ಸಾಧಿಸಲು ಉತ್ತೇಜಿಸಿದಂತಾಗಿದೆ. ಇನ್ನು ಮುಂದೆಯು ಉಳಿದ ಎಲ್ಲಾ ಪಂಚಾಯತಿಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿವಹಿಸಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕೋರುತ್ತೇನೆ.

ಗ್ರಾಮೀಣ ಪ್ರದೇಶದ ಸರ್ವತೋಮುಖ ಏಳಿಗೆಗಾಗಿ ಬಡಜನರ ಹಿಂದುಳಿದ ವರ್ಗದವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಲವಾರು ಮಹಾತ್ವಾಕಾಂಕ್ಷಿ ಜನಪರ ಯೋಜನೆಗಳನ್ನು ರೂಪಿಸಿ ಅನುದಾನವನ್ನು ನೀಡಿ ನಿಗದಿತ ಕಾಲಮಿತಿಯಲ್ಲಿ ಯಶಸ್ವಿಯಾಗಿ ಜಾರಿಗೆ ತರುವ ಕೆಲಸವನ್ನು ಮೂರು ಹಂತದ ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗಿದೆ.

ಯೋಜನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಿ ಸಂಬಂಧಿಸಿದ ಅನುದಾನಗಳನ್ನು ಪಾರದರ್ಶಕತೆಯೊಂದಿಗೆ ಸಮರ್ಪಕವಾಗಿ ಉಪಯೋಗಿಸಿಕೊಳ್ಳಬೇಕಾಗಿರುತ್ತದೆ. ಹಾಗಾದಾಗ ಯೋಜನೆಗಳ ಫಲಶೃತಿ ನಿಜವಾದ ಫಲಾನುಭವಿಗಳಿಗೆ ತಲುಪುವಂತಾಗುತ್ತದೆ. ಇದಕ್ಕೆ ಪಂಚಾಯತ್ ರಾಜ್ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಅಧಿಕಾರಿ/ ಸಿಬ್ಬಂದಿ ವರ್ಗದವರು ಸೇವಾ ಮನೋಭಾವದಿಂದ ಹಾಗೂ ಸ್ಪಂದನಾಶೀಲರಾಗಿ ಬಡ ಗ್ರಾಮೀಣ ಜನರ ಸಂಕಷ್ಟಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಸರ್ಕಾರದ ನೀತಿ ನಿಯಮಗಳಿಗೆ ತಕ್ಕಂತೆ ಕಾರ್ಯನಿರ್ವಹಿಸುತ್ತೀರೆಂದು ಆಶಿಸುತ್ತೇನೆ.

ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಸನ್ಮಾನ್ಯ ಶ್ರೀ.ಹೆಚ್.ಡಿ.ಕುಮಾರಸ್ವಾಮಿ ರವರು, ಉಪ ಮುಖ್ಯಮಂತ್ರಿಯಾಗಿ ಸನ್ಮಾನ್ಯ ಶ್ರೀ.ಜಿ.ಪರಮೇಶ್ವರ ರವರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಚಿವರಾಗಿ ಸನ್ಮಾನ್ಯ ಶ್ರೀ.ಕೃಷ್ಣಬೈರೇಗೌಡ ರವರು ಅಧಿಕಾರ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಇವರುಗಳ ಸಂಪುಟದ ಸಹೋದ್ಯೋಗಿಗಳಿಗೆ ಮತ್ತು ರಾಜ್ಯದ ಎಲ್ಲಾ ವಿಧಾನಸಭಾ ಸದಸ್ಯರುಗಳಿಗೆ ಈ ಸುಸಂದರ್ಭದಲ್ಲಿ ಶುಭ ಕೋರುತ್ತಾ, ರಾಜ್ಯದ ಸಂಪೂರ್ಣ ಪ್ರಗತಿಗೊಳಿಸುವಲ್ಲಿ ಯಶಸ್ಸು ಕಾಣಲೆಂದು ಹಾರೈಸುತ್ತೇನೆ.

(ಡಾ॥ ಎನ್. ನಾಗಾಂಬಿಕಾ ದೇವಿ)

# ರಾಷ್ಟ್ರೀಯ ಪುರಸ್ಕಾರ ದಿವಸದಂದು ರಾಜ್ಯಕ್ಕೆ ಇ-ಪುರಸ್ಕಾರ

ಲೇಖನ




ರಾಚಯ್ಯ ಚೌಕಿಮಠ

ಸಹಾಯಕರು
ಜಿಲ್ಲಾ ಪಂಚಾಯತಿ ಶಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ
(9964024979)


"ಗ್ರಾಮ ಸ್ವರಾಜ್ಯ"ದ ಪರಿಕಲ್ಪನೆಯ ಕುರಿತು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು "ಗ್ರಾಮ ಸ್ವರಾಜ್ಯದ ಬಗ್ಗೆ ನನ್ನ ಕಲ್ಪನೆಯು ಸಂಪೂರ್ಣ ಗಣರಾಜ್ಯವಾಗಿದ್ದು, ಅದರ ಮಹತ್ವವೇನೆಂದರೆ ನೆರೆಹೊರೆಯವರನ್ನು ಸ್ವತಂತ್ರವಾಗಿಡಲು ಬಯಸುತ್ತದೆ ಹಾಗೂ ಅವಲಂಬನೆ ಅವಶ್ಯಕವಾಗಿರುವವರಿಗೆ ಇನ್ನೂ ಪರಸ್ಪರ ಸ್ವತಂತ್ರರನ್ನಾಗಿಸಲು ಪ್ರಯತ್ನ ಮಾಡುತ್ತದೆ" ಎಂದು ಉದ್ಘೋಷಿಸಿದರು. ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವ ಉದ್ದೇಶದಿಂದ ಪ್ರತಿ ವರ್ಷ ಏಪ್ರಿಲ್ 24ರಂದು ಪಂಚಾಯತ್ ರಾಜ್ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. 2018ರ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಹಾಗೂ 'ಆದಿ ಉತ್ಸವ'ವನ್ನು ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ|| ನಾಗಾಂಬಿಕಾ ದೇವಿಯವರಿಗೆ ಇ-ಪುರಸ್ಕಾರ ನೀಡಿ ಗೌರವಿಸಿದರು. ಪ್ರಥಮ ಪ್ರಶಸ್ತಿಯು ರಾಜ್ಯಕ್ಕೆ ಸತತವಾಗಿ ಮೂರನೇ ಬಾರಿ ಲಭಿಸಿದ್ದು, ಇಲಾಖೆಯ ಹಿರಿಮೆಯನ್ನು ಹೆಚ್ಚಿಸಿದೆ. ಮತ್ತು ಇಲಾಖೆಯ ಎಲ್ಲಾ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಶ್ರಮಕ್ಕೆ ಸಂದ ಪ್ರಶಸ್ತಿಯಾಗಿರುತ್ತದೆ.

ಈ ಕಾರ್ಯಕ್ರಮದ ಅಂಗವಾಗಿ "ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ" ಎಂಬ 22 ದಿನಗಳ ಅಭಿಯಾನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಳಮಟ್ಟದಿಂದಲೇ ಬಲಪಡಿಸುವುದಕ್ಕೆ ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ನವದೆಹಲಿಯ ವಿಜ್ಞಾನಭವನದಿಂದ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆಯನ್ನು ರಾಷ್ಟ್ರ ರಾಜಧಾನಿ ಸ್ಥಳದಿಂದ ಹೊರಗೆ ಮಾಡಲು ನಿರ್ಧರಿಸಿರುವುದರಿಂದ ಮಧ್ಯಪ್ರದೇಶ ರಾಜ್ಯದ ಮಂಡ್ಲಾ ಜಿಲ್ಲೆಯ ರಾಮನಗರದ ನರ್ಮದಾ ನದಿ ದಂಡೆಯ ಮೇಲೆ ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 1000 ಜನಪ್ರತಿನಿಧಿಗಳನ್ನು ಒಟ್ಟಿಗೆ ಒಂದೇ ಸ್ಥಳದಲ್ಲಿ ಸೇರಿಸಿ

ರಾಜ್ಯದಲ್ಲಿ ಅತ್ಯುತ್ತಮವಾಗಿ ಗ್ರಾಮ ಸಭೆಯನ್ನು ನಡೆಸಿದ ಒಂದು ಗ್ರಾಮ ಪಂಚಾಯತಿಗೆ ಪ್ರಶಸ್ತಿಯನ್ನು ನೀಡುತ್ತಾ ಬರಲಾಗುತ್ತಿದೆ. ಅದರಂತೆ, ಕಳೆದ ಆರ್ಥಿಕ ಸಾಲಿನಲ್ಲಿ ಉತ್ತಮವಾಗಿ ಗ್ರಾಮ ಸಭೆಯನ್ನು ನಡೆಸಿದ ಹಾಗೂ ದಾಖಲೆಗಳನ್ನು ನಿರ್ವಹಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬೋಳಂತೂರು ಗ್ರಾಮ ಪಂಚಾಯತಿಗೆ ಪ್ರಶಸ್ತಿಯು ಸಂಧಾನವಾಗಿದೆ.



"ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ" ಕಾರ್ಯಕ್ರಮದ ಅಂಗವಾಗಿ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಈ ಮೂಲಕ ಕೇಂದ್ರ ಸರ್ಕಾರದ ತನ್ನ ಆಡಳಿತವನ್ನು ರಾಷ್ಟ್ರ ರಾಜಧಾನಿ ಸ್ಥಳದಿಂದ ಸಾಮಾನ್ಯ ಜನರಿಗೆ ತಲುಪಿಸುವ ಪ್ರಯತ್ನವು ಜಾರಿಯಲ್ಲಿದೆ. ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ನೀಡುವುದನ್ನು ರೂಢಿಸಿಕೊಂಡು ಬಂದಿದೆ. ಈ ರೀತಿಯಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ದೀನ್ ದಯಾಳ್ ಉಪಾದ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ, ನಾನಾಜಿ ದೇಶಮುಖ್ ರಾಷ್ಟ್ರೀಯ ಗ್ರಾಮ ಸಭಾ ಪುರಸ್ಕಾರ ಹಾಗೂ ನಮ್ಮ ಗ್ರಾಮ ನಮ್ಮ ಯೋಜನೆ ಎಂಬ ಪುರಸ್ಕಾರಗಳನ್ನು ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರಾಜ್ಯದ ಮೂರು ಹಂತದ 7 ಪಂಚಾಯತ್ ರಾಜ್ ಸಂಸ್ಥೆಗಳಿಗೆ ದೀನ್ ದಯಾಳ್ ಉಪಾದ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ, ನಾನಾಜಿ ದೇಶಮುಖ್ ರಾಷ್ಟ್ರೀಯ ಗ್ರಾಮ ಸಭಾ ಪುರಸ್ಕಾರ ಹಾಗೂ ನಮ್ಮ ಗ್ರಾಮ ನಮ್ಮ ಯೋಜನೆ ಪುರಸ್ಕಾರ ಹಾಗೂ ರಾಜ್ಯ ಇ-ಪ್ರಶಸ್ತಿ ಒಟ್ಟಾರೆಯಾಗಿ 8 ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

## ಇ-ಪಂಚಾಯತ್ ಪ್ರಶಸ್ತಿ:

ಭಾರತ ಸರ್ಕಾರದ 11 ಪಂಚಾಯತ್ ಎಂಟರ್‌ಪ್ರೈಸಸ್ ತಂತ್ರಾಂಶಗಳನ್ನು ಸಮರ್ಪಕವಾಗಿ ಬಳಕೆ ಮಾಡುವುದು ಹಾಗೂ ಅವುಗಳನ್ನು ಬಳಸಿಕೊಂಡು ನಾವಿನ್ಯತಾ ಚಟುವಟಿಕೆಗಳಲ್ಲಿ ಅವಳವಡಿಸಿಕೊಂಡು ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ತಲುಪುವಂತೆ ಮಾಡುವುದು ಹಾಗೂ ಮಾನವ ಸಂಪನ್ಮೂಲವನ್ನು ಸರಿಯಾಗಿ ಸದ್ಬಳಕೆ ಮಾಡಿಕೊಂಡಿರುವ ಆಯಾ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಅಂಕಿ-ಅಂಶ ಗಳನ್ನು ಗಮನಿಸಿ, ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಪ್ರತಿ ವರ್ಷ ಶ್ರೇಯಾಂಕವನ್ನು ನೀಡುತ್ತಿದೆ. ಅದರಂತೆ, 2018ನೇ ಸಾಲಿನಲ್ಲಿ ಕರ್ನಾಟಕ ರಾಜ್ಯವು ವಿಭಾಗ-II ರಡಿ ಪ್ರಥಮ ಶ್ರೇಯಾಂಕ ಪಡೆದು ಪ್ರಶಸ್ತಿಯನ್ನು ಪಡೆದುಕೊಂಡಿದೆ. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೆಲವು ಉತ್ತಮವಾದ ಪಂಚತಂತ್ರ ಹಾಗೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶಗಳನ್ನು ಬಳಸುತ್ತಿದೆ. ಇದರೊಂದಿಗೆ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ನಾಗರೀಕ ಸೇವೆಗಳನ್ನು ಒದಗಿಸುತ್ತಿದೆ. ಈ




ತಂತ್ರಾಂಶಗಳು ಕೇಂದ್ರ ಸರ್ಕಾರದ ಪ್ರಶಂಸೆಗೂ ಸಹಿತ ಪಾತ್ರವಾಗಿವೆ. ಕರ್ನಾಟಕ ರಾಜ್ಯವು ಈ ಪ್ರಶಸ್ತಿಯನ್ನು ಕಳೆದ 3 ವರ್ಷಗಳಿಂದ ಸತತವಾಗಿ ಪಡೆಯುತ್ತಿರುವುದು ಇಲಾಖೆಗೆ ಹೆಮ್ಮೆಯ ವಿಷಯವಾಗಿದೆ.

## ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂದಿರುವ ಪ್ರಶಸ್ತಿಗಳು:

### ನಮ್ಮ ಗ್ರಾಮ ನಮ್ಮ ಯೋಜನೆ ರಾಷ್ಟ್ರ ಪ್ರಶಸ್ತಿ:

ಈಗಾಗಲೇ ರಾಜ್ಯ ಸರ್ಕಾರವು 2016-17ನೇ ಸಾಲಿನ ಪ್ರಗತಿಯನ್ನು ಆಧರಿಸಿ ರಾಜ್ಯದಲ್ಲಿ ಅತ್ಯುತ್ತಮವಾಗಿ ನಮ್ಮ ಗ್ರಾಮ ನಮ್ಮ ಯೋಜನೆ ಸಿದ್ಧಪಡಿಸಿ ಜಾರಿ ಮಾಡಿರುವ 100 ಗ್ರಾಮ ಪಂಚಾಯತಿಗಳಿಗೆ ತಲಾ ರೂ.10.00 ಲಕ್ಷಗಳಂತೆ ಒಟ್ಟಾರೆ ರೂ.10.00ಕೋಟಿಗಳನ್ನು ನೀಡಲು ನಿರ್ಧರಿಸಲಾಗಿದೆ. ಸದರಿ ಪ್ರಶಸ್ತಿಯನ್ನೇ ಕೇಂದ್ರವು ಸಹಿತ 2018ನೇ ಸಾಲಿನಿಂದ ನೀಡಲು ಪ್ರಾರಂಭಿಸಿದೆ. ರಾಜ್ಯದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಮಾಲಂಗಿ ಗ್ರಾಮ ಪಂಚಾಯತಿಯು ಅತ್ಯುತ್ತಮವಾಗಿ ನಮ್ಮ ಗ್ರಾಮ ನಮ್ಮ ಯೋಜನೆ ಸಿದ್ಧಪಡಿಸಿ ಜಾರಿ ಮಾಡಿರುವ ಹಿನ್ನಲೆಯಲ್ಲಿ ರಾಷ್ಟ್ರ ಮಟ್ಟದಲ್ಲಿಯೇ 2ನೇ ಶ್ರೇಣಿಯೊಂದಿಗೆ ಪ್ರಶಸ್ತಿಗೆ ಭಾಜನವಾಗಿದೆ.

### ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ್:

ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಡಿಯ ಎನ್.ಪಿ.ಟಿ.ಎ.ಯಡಿಯಲ್ಲಿ ಕಳೆದ ಆರ್ಥಿಕ ವರ್ಷ ಮಾಡಿರುವ ಸಾಧನೆ ಮತ್ತು ಅಭಿವೃದ್ಧಿಯನ್ನಾಧರಿಸಿ ರಾಜ್ಯಗಳ ಪಂಚಾಯತ್ ರಾಜ್




ಸಂಸ್ಥೆಗಳಿಗೆ ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದೆ. ಈ ಪ್ರಶಸ್ತಿಗೆ ರಾಜ್ಯದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ, ಉಡುಪಿ ಹಾಗೂ ಹೊಸನಗರ ತಾಲ್ಲೂಕು ಪಂಚಾಯತಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಉಜಿರೆ ಗ್ರಾಮ ಪಂಚಾಯತಿ, ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ರಡ್ಡೇರ ನಾಗನೂರು ಹಾಗೂ ಗದಗ ತಾಲ್ಲೂಕಿನ ಬಿಂಕದಕಟ್ಟೆ ಗ್ರಾಮ ಪಂಚಾಯತಿಗಳು ಕೊರಳೊಡ್ಡಿವೆ. ಈ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ದಕ್ಷಿಣ ಕನ್ನಡ ಪಂಚಾಯತಿಯು ಎರಡನೇ ಬಾರಿ ಪಂಚಾಯತಿ ಸಶಕ್ತೀಕರಣ ಪುರಸ್ಕಾರ/ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ ಪ್ರಶಸ್ತಿಯನ್ನು ಪಡೆಯಿತು.

### ನಾನಾಜೀ ದೇಶಮುಖ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ:

ರಾಜ್ಯದಲ್ಲಿ ಅತ್ಯುತ್ತಮವಾಗಿ ಗ್ರಾಮ ಸಭೆಯನ್ನು ನಡೆಸಿದ ಒಂದು ಗ್ರಾಮ ಪಂಚಾಯತಿಗೆ ಪ್ರಶಸ್ತಿಯನ್ನು ನೀಡುತ್ತಾ ಬರಲಾಗುತ್ತಿದೆ. ಅದರಂತೆ, ಕಳೆದ ಆರ್ಥಿಕ ಸಾಲಿನಲ್ಲಿ ಉತ್ತಮವಾಗಿ ಗ್ರಾಮ ಸಭೆಯನ್ನು ನಡೆಸಿದ ಹಾಗೂ ದಾಖಲೆಗಳನ್ನು ನಿರ್ವಹಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬೋಳಂತೂರು ಗ್ರಾಮ ಪಂಚಾಯತಿಗೆ ಪ್ರಶಸ್ತಿಯು ಸಂಧಾನವಾಗಿದೆ.

ಮಾನ್ಯ ಪ್ರಧಾನ ಮಂತ್ರಿಗಳು ರಾಷ್ಟ್ರದ ಸಮಸ್ತ ಜನತೆಯನ್ನು ಉದ್ದೇಶಿಸಿ, ರಾಷ್ಟ್ರಿಯ ಪಂಚಾಯತ್ ರಾಜ್ ಸಮಾರಂಭದಲ್ಲಿ ಈ ಕೆಳಕಂಡ ಅಂಶಗಳಿಗೆ ಒತ್ತುನೀಡಿ ಮಾತನಾಡಿದರು.

- ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯನ್ನು ಮರುನವೀಕರಿಸಿ ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ್ ಎಂಬ ನೂತನ ಯೋಜನೆಯನ್ನು ಸಿದ್ಧಪಡಿಸಿರುವುದನ್ನು ಆಧುನಿಕ ತಂತ್ರಜ್ಞಾನದ ಮೂಲಕ ರಾಷ್ಟ್ರಕ್ಕೆ ಸಮರ್ಪಿಸಲಾಯಿತು. ಇದರೊಂದಿಗೆ ರಾಷ್ಟ್ರದ ಸಾಮಾನ್ಯ ಜನತೆಗೆ ಸರ್ಕಾರದ ಯೋಜನೆಗಳಲ್ಲಿ ವಿವಿಧ ಘಟಕಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ಹಾಗೂ ವ್ಯಯಿಸಲಾಗಿದೆ ಎಂಬದರ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಹಾಗೂ ಆಧುನಿಕ ಸೌಲಭ್ಯಗಳು ಸುಲಭವಾಗಿ ದೊರೆಯುವಂತೆ ಮಾಡಲು ಡಿಜಿಟಲ್ ಇಂಡಿಯಾ ಕಾರ್ಯಕ್ರಮ ಭಾಗವಾದ ಎಲ್.ಜಿ.ಡಿ ಕೋಡ್‌ನ್ನು ದೇಶದ 2.48ಲಕ್ಷ ಗ್ರಾಮ ಪಂಚಾಯತಿಗಳಿಗೆ ಹೊಂದಾಣಿಕೆ ಮಾಡಿರುವುದನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಿದರು. ಇದಕ್ಕೆ ಸಂಬಂಧಿಸಿದ ಆ್ಯಪ್ ಬಿಡುಗಡೆ ಮಾಡಲಾಗುವುದು ಇದರ ಸಹಾಯದಿಂದ ಬೆರಳತುದಿಯಲ್ಲಿಯೇ ದೇಶದ ಎಲ್ಲಾ ಕೇಂದ್ರದ ಯೋಜನೆಗಳಡಿ ಅನುದಾನದ ಬಿಡುಗಡೆ ಹಾಗೂ ವೆಚ್ಚದ ಮಾಹಿತಿಯನ್ನು ಸಾಮಾನ್ಯ ಜನರು ಪಡೆಯುವಂತೆ ಕ್ರಮವಹಿಸಲುವಾಗುತ್ತಿದೆಂದು ತಿಳಿಸಿದರು.
- ಕೇಂದ್ರ ಸರ್ಕಾರವು ದೇಶದಲ್ಲಿ ಹೆಚ್ಚುತ್ತಿರುವ ಬಾಲಕಿಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಸುಗ್ರೀವಾಜ್ಞೆ ಜಾರಿಗೆ ತರುವುದರ ಮೂಲಕ ದೇಶದ ಬಾಲಕಿಯರನ್ನು ರಕ್ಷಿಸಲು ಸಾಮಾಜಿಕ ಚಳುವಳಿಯನ್ನು ಪ್ರಾರಂಭಿಸಲಾಗಿದೆ. 12 ವರ್ಷದೊಳಗಿನ ಹೆಣ್ಣು

ಮಗುವನ್ನು ಯಾರಾದರೂ ಬಲಾತ್ಕಾರ ಮಾಡಿರುವುದು ಸಾಬೀತಾದರೆ ಆ ವ್ಯಕ್ತಿಗೆ ಗಲ್ಲು ಶಿಕ್ಷೆ ವಿಧಿಸುವ ಹಾಗೂ 16 ವರ್ಷದೊಳಗಿನ ಹೆಣ್ಣು ಮಗುವನ್ನು ಯಾರಾದರೂ ಬಲಾತ್ಕಾರ ಮಾಡಿರುವುದು ಸಾಬೀತಾದರೆ ಆ ವ್ಯಕ್ತಿಗೆ ಜೀವಾವಧಿ ಶಿಕ್ಷೆ ವಿಧಿಸುವ ಕಠಿಣ ಕಾನೂನನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿರುತ್ತದೆ. ಈ ಮೂಲಕ ಪ್ರಧಾನಿಗಳು ಕುಟುಂಬಗಳಲ್ಲಿರುವ ಪುತ್ರಿಯರಿಗೆ ಗೌರವ ನೀಡುವುದನ್ನು ರೂಢಿಸಿಕೊಳ್ಳುವಂತೆ ಕಿವಿಮಾತನ್ನು ಹೇಳಿದರು. ಅಲ್ಲದೇ ಮನೆಗಳಲ್ಲಿರುವ ಪುತ್ರರು ಅವರುಗಳ ಜವಾಬ್ದಾರಿಯನ್ನು ನಿಭಾಯಿಸುವಂತೆ ತಂದೆ–ತಾಯಂದಿರುಗಳಿಗೆ ತಿಳಿಸಿ, ಹದ್ದುಬಸ್ತಿನಲ್ಲಿಟ್ಟು ಕೊಳ್ಳುವಂತೆ ತಿಳಿಸಿರುತ್ತಾರೆ. ಇದರಿಂದ ದೇಶದ ಹೆಣ್ಣು ಮಕ್ಕಳ ರಕ್ಷಣೆ ಸುಲಭವಾಗುತ್ತದೆ. ಯಾವ ಪುರುಷ ಹೆಣ್ಣು ಮಕ್ಕಳ ಮೇಲೆ ರಾಕ್ಷಸ ವರ್ತನೆ ತೋರಿಸಿದರೆ ಅವರಿಗೆ ನೇಣುಗಂಬ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಕೆಯನ್ನು ನೀಡಿರುತ್ತಾರೆ. ಈ ರೀತಿಯಾದ ಸಾಮಾಜಿಕ ಚಳುವಳಿಯ ಮೂಲಕ ಎಲ್ಲರೂ ಒಟ್ಟಾಗಿ ಈ ದಿಶೆಯಲ್ಲಿ ಯೋಚನೆ ಮಾಡಿದರೆ ಈ ಸಮಸ್ಯೆಯಿಂದ ಮುಕ್ತಿ ಹೊಂದಬಹುದೆಂದು ತಿಳಿಸಿದರು.

- ದೇಶದ ಗ್ರಾಮೀಣ ಆರ್ಥಿಕತೆಯು ಅಭಿವೃದ್ಧಿ ಹೊಂದಬೇಕಾದರೆ ಜನ್‌ಧನ್, ವನ್‌ಧನ್ ಹಾಗೂ ಗೋಬರ್‌ಧನ್‌ಗಳ ಕಡೆ ಹೆಚ್ಚಿನ ಒತ್ತನ್ನು ನೀಡುವಂತೆ ತಿಳಿಸಿದರು. ಈ ತಂತ್ರಗಳನ್ನು ರೈತರು ಅಳವಡಿಸಿಕೊಳ್ಳಲು ಯಾವುದೇ ರೀತಿಯ ಅನುದಾನದ ಅವಶ್ಯಕತೆ ಇರುವುದಿಲ್ಲ ಮತ್ತು ಇವುಗಳು ರೈತರ ಆರ್ಥಿಕ ಸಬಲರನ್ನಾಗಿ ಮಾಡುವುದು.

- ದೇಶದಲ್ಲಿರುವ ಪಂಚಾಯತ್ ರಾಜ್ ಸಂಸ್ಥೆಗಳ ಜನ ಪ್ರತಿನಿಧಿಗಳು ಅತ್ಯುತ್ತಮವಾದ ಗುರಿಗಳನ್ನು ಮುಟ್ಟುವ ಹಾಗೂ ಅವರುಗಳ ಮಧ್ಯದಲ್ಲಿಯೇ ಸ್ಪರ್ಧೆಯನ್ನು ಏರ್ಪಡಿಸಿಕೊಂಡು ಕಾರ್ಯನಿರ್ವಹಿಸುವಂತೆ ಸೂಚಿಸಿದರು. ಪಂಚಾಯತಿಗಳ ಸದಸ್ಯರು ಅಲ್ಲಿನ ರೈತರಿಗೆ ಶಿಕ್ಷಣ ಪಡೆಯಲು ಪ್ರೋತ್ಸಾಹಿಸುವುದು ಹಾಗೂ ಕೃಷಿಯಲ್ಲಿ ಯುರಿಯಾ ಮತ್ತು ಇನ್ನಿತರ ರಾಸಾಯನಿಕ ವಸ್ತುಗಳನ್ನು ಬಳಸದಿದ್ದರೆ ಭೂಮಿಯ ಮಣ್ಣಿನ ಸಂರಕ್ಷಣೆ ಕಾಪಾಡಿದಂತಾಗುವುದು. ಒಂದು ಹಸುವಿನ ಗಂಜಲು ಹಾಗೂ ಸಗಣಿಯಿಂದ 2 ಎಕರೆ ಕೃಷಿ ಭೂಮಿಯನ್ನು ಉತ್ತಮ ರೀತಿಯಲ್ಲಿ ಸಾಗುವಳಿ ಮಾಡಲು ಸಾಕಾಗುವುದು. ಇಲ್ಲಿಯವರೆವಿಗೂ ಬಿದಿರನ್ನು ಒಂದು ಗಿಡವೆಂದು ಪರಿಗಣಿಸಿದ್ದರಿಂದ ಅರಣ್ಯ ಕಾಯ್ದೆಯು ಅದರ ಉತ್ಪನ್ನಗಳನ್ನು ಬಳಸಲು ಅಡ್ಡಿಯಾಗಿತ್ತು. ಕೇಂದ್ರ ಸರ್ಕಾರವು ಬಿದಿರನ್ನು ಒಂದು ಹುಲ್ಲಿನ ಸಸ್ಯ ಜಾತಿಯೆಂದು ಘೋಷಿಸಿದ್ದು, ಅದನ್ನು ಕೃಷಿ ಭೂಮಿಗಳಲ್ಲಿ ನೆಡುವುದು ಹಾಗೂ ಕೊಯ್ಲು ಮಾಡುವುದರ ಮೂಲಕ ರೈತರ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವಂತೆ ಸೂಚಿಸಿದರು. ಈ ರೀತಿಯಾಗಿ ಕೃಷಿ ಭೂಮಿಯಲ್ಲಿ ಬಿದಿರನ್ನು ಬೆಳೆಯುವುದರಿಂದ ಭಾರತ ದೇಶವು ಇತರೆ ದೇಶಗಳಿಗೆ ಪ್ರತಿ ವರ್ಷ ನೀಡಲಾಗುತ್ತಿದ್ದ ರೂ.12,000 ರಿಂದ ರೂ.15,000 ಕೋಟಿಗಳನ್ನು ಉಳಿಸಿದಂತಾಗುವುದು. ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಕಾರ್ಯಗಳನ್ನು ಏಪ್ರಿಲ್ ಮಾಹೆಯಿಂದ ಜೂನ್ ಮಾಹೆಯವರೆಗೂ ಹಮ್ಮಿಕೊಳ್ಳುವುದರಿಂದ ನಾಗರೀಕರಿಗೆ ಉದ್ಯೋಗವನ್ನು ಒದಗಿಸಿದಂತಾಗುವುದಲ್ಲದೇ ಮುಂದೆ ಬರುವ ಮಳೆ ನೀರನ್ನು ಸಂರಕ್ಷಿಸಿದಂತಾಗುವುದು ಎಂದು ತಿಳಿಸಿದರು.

- ದೇಶದ ಪಂಚಾಯತ್ ರಾಜ್ ಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗದವರು ಜನ–ಧನ್ ಹಾಗೂ ಭೀಮಾ ಯೋಜನೆಗಳ ಬಗ್ಗೆ ಅವಶ್ಯಕವಿರುವ ವ್ಯಕ್ತಿಗಳಿಗೆ ಹಾಗೂ ಬಡವರಿಗೆ ಇವುಗಳ ಲಾಭವನ್ನು ಪಡೆಯಲು ಪ್ರೋತ್ಸಾಹಿಸುವಂತೆ ತಿಳಿಸಿದರು. ಇದರೊಂದಿಗೆ ಗ್ರಾಮದಲ್ಲಿರುವ ಪ್ರತಿಯೊಂದು ಮಗು ಶಿಕ್ಷಣವನ್ನು ಪಡೆಯುವುದರೊಂದಿಗೆ ಭಾರತದ ಭಾವಿ ಉತ್ತಮ ನಾಗರೀಕನ್ನಾಗಿ ಮಾರ್ಪಡಿಸುವಂತೆ ಕರೆ ನೀಡಿದರು.

ಈ ಅದ್ಭುತವಾದ ಕಾರ್ಯಕ್ರಮವನ್ನು ವೀಕ್ಷಿಸಲು ರಾಜ್ಯದ 22 ಜನಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗದವರು ಕರ್ನಾಟಕ ರಾಜ್ಯದಿಂದ ತೆರಳಿದ್ದೆವು. ಈ ರೀತಿಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಸರಿಯಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಂಡಲ್ಲಿ ದೇಶವು 2022ರ ಹೊತ್ತಿಗೆ ಅಂದರೆ, ಸ್ವಾತಂತ್ರ್ಯ ದೊರೆತು 75ನೇ ವರ್ಷ ಹಾಗೂ ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ನವಭಾರತವನ್ನು ನಿರ್ಮಿಸುವ ಸಂಕಲ್ಪವನ್ನು ಕೈಗೆತ್ತಿಕೊಳ್ಳುವುದರ ಮೂಲಕ ಭಾರತವನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸಿ ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಬೇಕಾಗಿದೆ.

ಈ ಮೂಲಕ 'ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸು ಸಾಕಾರಗೊಂಡು 21ನೇ ಶತಮಾನದಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳು ಭಾರತವನ್ನು ಅನುಕರಿಸುವಂತಾಗಲಿ' ಎಂದು ಆಶಿಸುತ್ತೇನೆ. ■

# ನಮ್ಮ ಗ್ರಾಮ ನಮ್ಮ ಯೋಜನೆ ರಾಷ್ಟ್ರೀಯ ಪುರಸ್ಕಾರ

ವರದಿ



**ಶೋಭಾರಾಣಿ**

ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಮಾಲಂಗಿ ಗ್ರಾಮ ಪಂಚಾಯಿತಿ

**ಆರೋಗ್ಯ, ಶಿಕ್ಷಣ ಸಾಮಾಜಿಕ ಭದ್ರತಾ ಯೋಜನೆಗಳು ಹೆಚ್ಚು ಆಧ್ಯತೆ ನೀಡಿ ಅನುಷ್ಠಾನ ಮಾಡಲಾಗಿದೆ. ಒಟ್ಟಾರೆ 847 ಕಾರ್ಯಕ್ರಮಗಳಲ್ಲಿ 2016-17ನೇ ಸಾಲಿನಲ್ಲಿ 378 ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗಿದೆ.**

ಮಾಲಂಗಿ ಗ್ರಾಮ ಪಂಚಾಯಿತಿಯು ಸಾಂಸ್ಕೃತಿಕ ನೆಲೆವೀಡು ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿದೆ. ಜಿಲ್ಲಾ ಕೇಂದ್ರದಿಂದ 78 ಕಿ.ಮೀ ಹಾಗೂ ತಾಲ್ಲೂಕು ಕೇಂದ್ರದಿಂದ 9 ಕಿ.ಮೀ ದೂರದಲ್ಲಿದೆ. ಗ್ರಾಮ ಪಂಚಾಯತಿಯು ಒಂಭತ್ತು ವಾರ್ಡ್‌ಗಳನ್ನು ಹೊಂದಿದ್ದು, 6069 ಜನಸಂಖ್ಯೆಯನ್ನು ಹೊಂದಿದೆ. ಹೆಚ್ಚಾಗಿ ಕೆಳ ಮಧ್ಯಮ ವರ್ಗದವರಿಂದ ಕೂಡಿದ್ದು, ಮೂರು ಜೇನು ಕುರು ಹಾಡಿಗಳನ್ನು ಹೊಂದಿದೆ. ಒಂಭತ್ತು ವಾರ್ಡ್‌ಗಳಿಂದ 15 ಜನ ಚುನಾಯಿತ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಕೃಷಿ ಇಲ್ಲಿನ ಪ್ರಮುಖ ಬೆಳೆಯಾಗಿದೆ. ಗ್ರಾಮ ಪಂಚಾಯಿತಿಯು ಎಂಟು ಅಂಗನವಾಡಿ, ಎಂಟು ಹಿರಿಯ ಪ್ರಾಥಮಿಕ ಶಾಲೆಗಳನ್ನು ಹೊಂದಿದ್ದು, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತಾಲ್ಲೂಕು ಕೇಂದ್ರಕ್ಕೆ ತೆರಳಬೇಕಾಗಿರುತ್ತದೆ.

ಗ್ರಾಮ ಪಂಚಾಯತಿ ಸರ್ವಾಂಗೀಣ ಅಭಿವೃದ್ಧಿ ಯೋಜನೆ, ದುಡ್ಡಿಲ್ಲದೆ ಹಾಗೂ ಕಡಿಮೆ ದುಡ್ಡಿನಲ್ಲಿ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ಭದ್ರತಾ ಯೋಜನೆಗಳು, ಮಹಿಳಾ ಸಬಲೀಕರಣ ಕಾರ್ಯಕ್ರಮಗಳು ಜಲ ಸಂರಕ್ಷಣೆ, ಸಾಂಪ್ರದಾಯಿಕ ನೀರಿನ ಮೂಲಗಳ ಅಭಿವೃದ್ಧಿ, ಮಳೆ ನೀರು ಕೊಯ್ಲು ಮುಂತಾದ ಉತ್ತಮ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2016-17ನೇ ಸಾಲಿನ ಗ್ರಾಮ ಪಂಚಾಯತ್ ವಿಕಾಸ ಯೋಜನಾ ಪುರಸ್ಕಾರ ದೊರೆತಿದ್ದು, ಗ್ರಾಮ ವಿಕಾಸ ಯೋಜನಾ ಪುರಸ್ಕಾರ-18 ರಾಷ್ಟ್ರ ಪ್ರಶಸ್ತಿಯನ್ನು 24 ಏಪ್ರಿಲ್ 2018 ರಂದು ಸನ್ಮಾನ್ಯ ಪ್ರಧಾನ ಮಂತ್ರಿಯವರಿಂದ ಸ್ವೀಕರಿಸಲಾಗಿದೆ. ಈ ಸಮಯದಲ್ಲಿ ಕಾಲಕಾಲಕ್ಕೂ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿ ನನ್ನ ಕೆಲಸಕ್ಕೆ ಬೆನ್ನೆಲುಬಾಗಿ ನಿಂತ ಮೈಸೂರು ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಶಿವಶಂಕರ್, ತಾಲ್ಲೂಕು ನೋಡಲ್ ಅಧಿಕಾರಿಯಾದ ಶ್ರೀ.ಮನೋಜ್ ಕುಮಾರ್, ANSIRD ಉಪ ನಿರ್ದೇಶಕರಾದ ಶ್ರೀ.ಗಣೇಶ್‌ರವರಿಗೆ ಗ್ರಾಮ ಪಂಚಾಯತಿ ಆಡಳಿತ ಮಂಡಳಿ ಆಭಾರಿಯಾಗಿರುತ್ತದೆ.

## ಗ್ರಾಮ ಪಂಚಾಯಿತಿಯ ವೈಶಿಷ್ಟ್ಯ:




ಗ್ರಾಮ ಪಂಚಾಯಿತಿಯು ಮೈಸೂರು ಕೊಡಗು ಗಡಿ ಪ್ರದೇಶದಲ್ಲಿದ್ದು, ವಾಹನ ಸೌಕರ್ಯ ಹೊಂದಿಲ್ಲದ ಪಂಚಾಯಿತಿ ಆಗಿರುತ್ತದೆ. ಕಡಿಮೆ ಆದಾಯ ಹೊಂದಿದ ಪಂಚಾಯಿತಿ ಆಗಿದ್ದರೂ ಸಹ ವಿನೂತನ ವಿಶಿಷ್ಟ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಅಭಿವೃದ್ಧಿಯಿಂದ ಸಾರ್ವಜನಿಕರ ನಂಬಿಕೆಗೆ ಪಾತ್ರವಾಗಿದೆ. ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯ ಪಾರದರ್ಶಕ ಮತ್ತು ಉತ್ತರದಾಹಿತ್ವ ಆಡಳಿತಕ್ಕಾಗಿ ಈಗಾಗಲೇ ರಾಜ್ಯ ಸರ್ಕಾರದಿಂದ ಎರಡು ಬಾರಿ ಗಾಂಧಿ ಗ್ರಾಮ ಪುರಸ್ಕಾರ, ನಿರ್ಮಲ ಗ್ರಾಮ ಪುರಸ್ಕಾರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ ಪುರಸ್ಕಾರ, ಮತ್ತು ಕೇಂದ್ರ ಸರ್ಕಾರದಿಂದ ಗ್ರಾಮ ಪಂಚಾಯಿತಿ ವಿಕಾಸ್ ಯೋಜನಾ ಪುರಸ್ಕಾರ ಲಭಿಸಿರುತ್ತದೆ.

## ನಮ್ಮ ಗ್ರಾಮ ನಮ್ಮ ಯೋಜನೆ:

ರಾಜ್ಯ ಸರ್ಕಾರದ ಮಹತ್ವಾ ಕಾಂಕ್ಷಿ ಕಾರ್ಯಕ್ರಮವಾಗಿದ್ದು ಗ್ರಾಮ ಪಂಚಾಯಿತಿಗಳು

ಮುಂದಿನ ಐದು ವರ್ಷಗಳಲ್ಲಿ ಆಗಬೇಕಾದ ಸರ್ವಾಂಗೀಣ ಅಭಿವೃದ್ಧಿಗೆ ಯೋಜನೆ ಸಿದ್ದಪಡಿಸಲು ಆದೇಶ ಹೊರಡಿಸಲಾಯಿತು. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರದ 14ನೇ ಹಣಕಾಸು ಯೋಜನೆ ಧನ ಸಹಾಯ ಪಡೆಯಲು ಗ್ರಾಮ ಪಂಚಾಯಿತಿಯು ಐದು ವರ್ಷಗಳ ಕ್ರಿಯಾ ಯೋಜನೆ ತಯಾರಿಸುವ ಜರೂರತ್ತು ಸೃಷ್ಟಿಯಾಯಿತು. ಈ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಿದ ರಾಜ್ಯ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆ 66 ಅಂಶಗಳನ್ನು ಒಳಗೊಂಡ ನಿಗಧಿತ ನಮೂನೆಯನ್ನು ಸಿದ್ದಪಡಿಸಿ, ಯೋಜನೆ ತಯಾರಿಸಲು ಅನುಸರಿಸಬೇಕಾದ ಕ್ರಮಗಳನ್ನು ಮತ್ತು ನಿಯಮಗಳನ್ನು ತರಬೇತಿಯ ಮೂಲಕ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಲಾಯಿತು.

## ಯೋಜನೆಯ ತಯಾರಿ:

ಮಾಲಂಗಿ ಗ್ರಾಮ ಪಂಚಾಯಿತಿಯು ಆಡಳಿತ ಮಂಡಳಿಯ ಸಭೆ ಕರೆದು ಯೋಜನೆಯ ರೂಪು ರೇಷೆಗಳ ಕುರಿತು ಚರ್ಚಿಸಲಾಯಿತು. ಆಡಳಿತ ಮಂಡಳಿಯು ಗ್ರಾಮ ಪಂಚಾಯಿತಿ ಮಟ್ಟದ ಕೋರ್ ಕಮಿಟಿಯನ್ನು ರಚಿಸಿ ಸದರಿ ಕಮಿಟಿಯಲ್ಲಿ ಎಲ್ಲಾ ವಾರ್ಡ್‌ನ ಚುನಾಯಿತ ಸದಸ್ಯರು ಕ್ಷೇತ್ರ ಮಟ್ಟದ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಶಾಲಾ ಮುಖ್ಯಸ್ಥರು, ಗ್ರಾಮದ ಮುಖ್ಯಸ್ಥರು, ಸ್ತ್ರೀ ಶಕ್ತಿ ಸಂಘದ ಅಧಿಕಾರಿಗಳು, ವಿದ್ಯಾವಂತ ಯುವಕರನ್ನು ಸೇರಿಸಲಾಯಿತು.

1. **ಗ್ರಾಮ ಪಂಚಾಯಿತಿ ಸಿಬ್ಬಂದಿಯು ಮನೆ ಮನೆಗೆ ತೆರಳಿ ಪ್ರತಿ ಕುಟುಂಬದ ಮಾಹಿತಿಯನ್ನು ಕಲೆ ಹಾಕಲಾಯಿತು.**
2. **66 ಅಂಶಗಳ ನಿಗದಿತ ನಮೂನೆಯಲ್ಲಿ ವಾರ್ಡ್ ಸಭೆ ನಡೆಸಿ ಕಾರ್ಯಕ್ರಮಗಳ ಪಟ್ಟಿ ತಯಾರಿಸಲಾಯಿತು.**
3. **ವಾರ್ಡ್ ಸಭೆಯಲ್ಲಿ ಸಂಗ್ರಹಿಸಲಾದ 1574 ಕಾರ್ಯಕ್ರಮಗಳ Sitmation analysis ನಡೆಸಲಾಯಿತು. ಗ್ರಾಮ ಪಂಚಾಯಿತಿ ಮಟ್ಟದ ಕೋರ್ ಕಮಿಟಿ ಸಭೆಯಲ್ಲಿಟ್ಟು ಚರ್ಚಿಸಲಾಯಿತು.**
4. **1574 ಕಾರ್ಯಕ್ರಮಗಳನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ಆದ್ಯತೀಕರಣಗೊಳಿಸಿ 847 ಕಾರ್ಯಕ್ರಮಗಳನ್ನು ಅಂತಿಮ ಗೊಳಿಸಿ ಅನುಮೋದನೆ ಪಡೆಯಲಾಯಿತು.**
5. **ಅಂತಿಮಗೊಳಿಸಿದ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಕಾರ್ಯಕ್ರಮಗಳನ್ನು ವರ್ಗೀಕರಿಸಿ ತಾಲ್ಲೂಕು ಮಟ್ಟದ ಕೊರ್ ಕಮಿಟಿ, ಜಿಲ್ಲಾ ಮಟ್ಟದ ಕೊರ್ ಕಮಿಟಿಗೆ ಕಳುಹಿಸಲಾಯಿತು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಡಬಹುದಾದ ಕಾರ್ಯಕ್ರಮಗಳ ಐದು ವರ್ಷದ ಯೋಜನೆ ತಯಾರಿಸಲಾಯಿತು.**

## ಯೋಜನೆಯ ಅನುಷ್ಠಾನ:

ಗ್ರಾಮ ಪಂಚಾಯತಿಯ ಆರ್ಥಿಕ ಸ್ಥಿತಿ ಗತಿಗಳನ್ನು ಕೇಂದ್ರಿಕರಿಸಿಕೊಂಡು ಯೋಜನೆ ತಯಾರಿಸಿ, ಹೆಚ್ಚಾಗಿ ಕಡಿಮೆ ದುಡ್ಡಿನಲ್ಲಿ ಮಾಡಬಹುದಾದ ಅಭಿವೃದ್ಧಿ ಹಾಗೂ ದುಡ್ಡಿಲ್ಲದೆ ಮಾಡಬಹುದಾದ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು, ಕಾರ್ಪೋರೇಟ್ ಹಾಗೂ ಎನ್‌ಜಿಒ ಗಳ ಧನ ಸಹಾಯ (ಸಿಎಸ್‌ಆರ್ ಫಂಡ್ಸ್) ಪಡೆಯಲಾಯಿತು. 2016-17ನೇ ಸಾಲಿನಲ್ಲಿ ಈ ಕೆಳಕಂಡ ಯಶಸ್ವಿ ಕಾರ್ಯಕ್ರಮಗಳ ಅನುಷ್ಠಾನ ಮಾಡಲಾಯಿತು.

1. **ಐ.ಟಿ.ಸಿ ಸಂಸ್ಥೆಯ ಸಿಎಸ್‌ಆರ್ ಹಣ ಬಳಸಿ ಗ್ರಾಮ ಪಂಚಾಯಿತಿಯ ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದ್ದು, ಕೆರೆ ಅಭಿವೃದ್ಧಿ ಸಮಿತಿ ರಚಿಸಿ ನಿರ್ವಹಣೆ ಮಾಡಲಾಗುತ್ತಿದೆ.**
2. **ಮೆಂಡಾ ಎನ್‌ಜಿಒ ಸಂಸ್ಥೆಯೊಡಗೂಡಿ ಕಡಿಮೆ ಖರ್ಚಿನಲ್ಲಿ ಐದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ** Smart Class **ಅಳವಡಿಸಲಾಗಿದೆ.**
3. **ಜೇನು ಕುರುಬ ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹಿಸಲು ಶಿಕ್ಷಣಕ್ಕಾಗಿ ಬೆಳಕು ಎಂಬ ವಿನೂತನ ಕಾರ್ಯಕ್ರಮ ತರಲಾಗಿದೆ.**
4. **ಐಟಿಸಿ ಸಂಸ್ಥೆಯ ಸಹಯೋಗದೊಂದಿಗೆ ಹಾಡಿಗಳಲ್ಲಿ ಸೋಲಾರ್ ಬೀದಿ ದೀಪಗಳನ್ನು ಅಳವಡಿಸಲಾಗಿದೆ.**
5. **ಆರು ಸ್ಮಶಾನ ಒತ್ತುವರಿಗಳನ್ನು ತೆರವುಗೊಳಿಸಿ ಅಭಿವೃದ್ಧಿ ಗೊಳಿಸಲಾಗಿದೆ.**
6. **ಜಲಸಂರಕ್ಷಣೆ ಮಳೆ ನೀರು ಕೊಯ್ಲುಗೆ ಆದ್ಯತೆ ನೀಡಿ ಗ್ರಾಮ ಪಂಚಾಯಿತಿ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಿಗೆ ನೀರು ಮರುಪೂರ್ಣ ಘಟಕಗಳನ್ನು ನಿರ್ಮಿಸಲಾಗಿದೆ.**
7. **ಎಲ್ಲಾ ಶಾಲೆ, ಅಂಗನವಾಡಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಊಟದ ತಟ್ಟೆಗಳು, ಕ್ರೀಡಾ ಸಾಮಾಗ್ರಿಗಳನ್ನು ಗ್ರಾಮ ಪಂಚಾಯಿತಿಯು ಒದಗಿಸಿದ್ದು ದಾನಿಗಳ ನೆರವಿನಿಂದ ಶಾಲಾ ಸಮವಸ್ತ್ರ, ಚಪ್ಪಲಿ, ಸ್ವೆಟರ್, ಬ್ಯಾಡ್ಜ್, ಬ್ಯಾಗ್ ಪುಸ್ತಕಗಳನ್ನು ವಿತರಿಸಲಾಗಿದೆ.**
8. **ಸುಸಜ್ಜಿತವಾದ ಗ್ರಾಮ ಪಂಚಾಯಿತಿ ಕಛೇರಿಯನ್ನು ನಿರ್ಮಿಸಿ ರಾಜೀವ್ ಗಾಂಧಿ ಸೇವಾ ಕೇಂದ್ರ ಸಕಾಲದಲ್ಲಿ ಸಾರ್ವಜನಿಕರಿಗೆ ಸೇವೆ ದೊರೆಯುವ ಹಾಗೆ ಮಾಡಲಾಗಿದೆ.**
9. **ಮಹಿಳೆಗಾಗಿ ವಿಶೇಷ ಗ್ರಾಮ ಸಭೆ ನಡೆಸಿ ಆರೋಗ್ಯ ಶಿಬಿರ, ಕಾನೂನು ಶಿಬಿರಗಳ ಮೂಲಕ ಅರಿವು ಮೂಡಿಸಲಾಗಿದೆ.**
10. **600 ಕುಟುಂಬಗಳಿಗೆ ಬ್ಯಾಂಕಿನಲ್ಲಿ ಖಾತೆ ತೆರೆದು ಮ.ಗಾಂ. ರಾ.ಗ್ರಾ.ಉ.ಖಾತ್ರಿ ಯೋಜನೆಯಡಿ ನೊಂದಾಯಿಸಲಾಗಿದೆ.**
11. **ಹೊಗೆ ಮುಕ್ತ ಅಡುಗೆ ಮನೆ ಎಂಬ ಕಾರ್ಯಕ್ರಮ ಅಳವಡಿಸಿ ಬಯೋಗ್ಯಾಸ್ ಘಟಕಗಳನ್ನು ನಿರ್ಮಿಸಲಾಗಿದೆ.**

ಆರೋಗ್ಯ, ಶಿಕ್ಷಣ ಸಾಮಾಜಿಕ ಭದ್ರತಾ ಯೋಜನೆಗಳು ಹೆಚ್ಚು ಆದ್ಯತೆ ನೀಡಿ ಅನುಷ್ಠಾನ ಮಾಡಲಾಗಿದೆ. ಒಟ್ಟಾರೆ 847 ಕಾರ್ಯಕ್ರಮಗಳಲ್ಲಿ 2016-17ನೇ ಸಾಲಿನಲ್ಲಿ 378 ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗಿದೆ. ■

ಲೇಖನ




**ಮೋಹನ್ ರಾಜ್**

ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯಿತಿ ಉಡುಪಿ
ಮೊ: 8277932515


# "ಸಂಘಟಿತ ಸಾಧನೆಗೆ ಪ್ರಶಸ್ತಿಯ ಗರಿ"

ದೇವಾಲಯಗಳು, ಸುಂದರವಾದ ಕರಾವಳಿ ತೀರ, ವಿಶಿಷ್ಟ ಆಚಾರ – ವಿಚಾರ, ಸಂಸ್ಕೃತಿ, ಆಹಾರ ಪದ್ಧತಿಯನ್ನು ಹೊಂದಿರುವ ಉಡುಪಿ ಜಿಲ್ಲೆ ಪ್ರವಾಸಿಗರ ಸ್ವರ್ಗವೆನಿಸಿದೆ. ಶಿಕ್ಷಣ, ಆರೋಗ್ಯ ಹಾಗೂ ಮಾನವಾಭಿವೃದ್ಧಿ ಸೂಚ್ಯಂಕಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿರುವ ಜಿಲ್ಲೆಯ ಜನರು ತಮ್ಮ ಉದ್ಯಮಸಾಹಸಿತನ, ಚಿಂತನೆಗಳಿಂದ ವಿಭಿನ್ನವಾಗಿ ಗುರುತಿಸಲ್ಪಡುತ್ತಾರೆ, ಪರಶುರಾಮ ಸೃಷ್ಟಿಯೆಂಬ ಪ್ರತೀತಿ ಹೊಂದಿರುವ ಈ ಪ್ರದೇಶ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದ್ದು ಪ್ರಾಕೃತಿಕವಾಗಿಯೂ ಸಮೃದ್ಧಿಯನ್ನು ಹೊಂದಿದೆ.

ಯೋಜನೆಗಳ ಸಮರ್ಪಕ ಅನುಷ್ಠಾನ ಹಾಗೂ ಪರಿಣಾಮಕಾರಿಯಾದ ಆಡಳಿತ ನಿರ್ವಹಣೆ ಮೂಲಕ ಉಡುಪಿ ತಾಲೂಕು ಪಂಚಾಯತಿ 2016–17ನೇ ಸಾಲಿನ "ದೀನ್‌ದಯಾಳ್ ಉಪಾಧ್ಯ ಪಂಚಾಯತ್ ಸಶಕ್ತೀಕರಣ" ಪುರಸ್ಕಾರಕ್ಕೆ ಪಾತ್ರವಾಗಿದೆ. ಸಂಘಟಿತ ಪ್ರಯತ್ನಗಳು, ಯೋಜಿತ ನಿರ್ವಹಣೆ, ಜನ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಡುವಣ ಸಮನ್ವಯದ ಕಾರ್ಯಶೈಲಿ ರಾಷ್ಟ್ರೀಯ ಮಟ್ಟದ ಪುರಸ್ಕಾರ ಪಡೆಯಲು ಕಾರಣ ಎಂದರೆ ತಪ್ಪಾಗಲಾರದು. ಈ ಹಿನ್ನಲೆಯಲ್ಲಿ ಪುರಸ್ಕಾರ ಪಡೆಯುವ ದಿಸೆಯಲ್ಲಿ ಪರಿಗಣಿಸಲಾದ ಸಾಧನೆಯ ಕ್ಷೇತ್ರಗಳ ಇಣುಕು ನೋಟ ಈ ಲೇಖನದ ಉದ್ದೇಶವಾಗಿದೆ.

**ಉಡುಪಿ ತಾಲ್ಲೂಕು ಪಂಚಾಯತಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ನಿರಂತರ ಹಾಗೂ ವ್ಯವಸ್ಥಿತ ಪ್ರಗತಿ ಪರಿಶೀಲನೆಯ ವಿಧಾನವನ್ನು ಅಳವಡಿಸಿಕೊಂಡಿರುವುದು ಯಶಸ್ಸಿಗೆ ಬಹು ಪ್ರಮುಖ ಕಾರಣವಾಗಿದೆ.**

## ಸಭಾ ನಿರ್ವಹಣೆ:

ಯೋಜನೆಗಳ ರೂಪುರೇಷೆ ಹಾಗೂ ಯಶಸ್ವಿ ಅನುಷ್ಠಾನದ ಹಂತದಲ್ಲಿ ಸಭಾ ನಿರ್ವಹಣೆ ಹಾಗೂ ಅನುಪಾಲನೆ ಬಹು ಮುಖ್ಯವಾಗಿದ್ದು ವಿವಿಧ ಸ್ವರೂಪದ ಸಭೆಗಳನ್ನು ವ್ಯವಸ್ಥಿತವಾಗಿ ಜರುಗಿಸಿರುವುದು ಗಮನಾರ್ಹವಾಗಿದೆ.

| ಕ್ರ.ಸಂ | ಸಭೆಯ ವಿಧ | ಜರುಗಿಸಲಾದ ಸಭೆಗಳು |
|---|---|---|
| 1 | ಸ್ಥಾಯಿ ಸಮಿತಿ ಸಭೆ | 05 |
| 2 | ಸಾಮಾನ್ಯ ಸಭೆಗಳು | 07 |
| 3 | ವಿಶೇಷ ಸಭೆಗಳು | 01 |

ಈ ಸಭೆಗಳಲ್ಲಿ ಸದಸ್ಯರ ಹಾಜರಾತಿಯ ಪ್ರಮಾಣವು 99% ರಷ್ಟು ಇರುವುದು ಉಲ್ಲೇಖನೀಯ ಅಂಶವಾಗಿದೆ. ವಿವಿಧ ಇಲಾಖಾಧಿಕಾರಿಗಳು ಪ್ರತಿ ಸಭೆಗೂ ತಪ್ಪದೇ ಹಾಜರಾಗಿ ಮಾಹಿತಿ ನೀಡುತ್ತಿರುವುದು ಹಾಗೂ ಪರಾಮರ್ಶೆಗೆ ಅನುಕೂಲ ಮಾಡುತ್ತಿರುವುದು ಸಮನ್ವಯ ಹಾಗೂ ಸಹಭಾಗಿತ್ವಕ್ಕೆ ಉದಾಹರಣೆಯಾಗಿದೆ.

## ಸ್ವಚ್ಛತೆಯ ನಿರ್ವಹಣೆ:

ಉಡುಪಿ ಜಿಲ್ಲೆಯು ಈಗಾಗಲೇ **"ಬಯಲು ಶೌಚ ಮುಕ್ತ"** ಜಿಲ್ಲೆ ಎಂಬುದಾಗಿ ಘೋಷಣೆಯಾಗಿದ್ದು, ಪ್ರಶಸ್ತಿಯನ್ನು ಪಡೆದಿದೆ. ಉಡುಪಿ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತಿಗಳು ನಿರಂತರತೆಗಾಗಿ ಕ್ರಮ ಕೈಗೊಂಡಿರುವುದನ್ನು ಪರಿಗಣಿಸಲಾಗಿದೆ. ಅಲ್ಲದೆ ಜಿಲ್ಲಾಡಳಿತದ ಮಾರ್ಗದರ್ಶನದಲ್ಲಿ ರೂಪಿಸಲಾಗಿರುವ ವೆಲ್ಲೂರು ಶ್ರೀನಿವಾಸನ್ ಪರಿಕಲ್ಪನೆಯ **"ಘನತ್ಯಾಜ್ಯ ಸಂಪನ್ಮೂಲ ನಿರ್ವಹಣೆ (SLRM)"** ಯೋಜನೆಯು ಮಾದರಿಯಾಗಿದ್ದು, ವಾರಂಬಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈಗಾಗಲೇ



ಕಾರ್ಯಾರಂಭ ಮಾಡಿದೆ. ಕಸವನ್ನು ಸಂಪನ್ಮೂಲ ಎಂದು ಪರಿಗಣಿಸಿ, ವೈಜ್ಞಾನಿಕ ವಿಧಾನದ ನಿರ್ವಹಣೆ ಮೂಲಕ ಆದಾಯಗಳಿಸುವುದು ಈ ಯೋಜನೆಯ ವೈಶಿಷ್ಟ್ಯವಾಗಿದ್ದು **"ತ್ಯಾಜ್ಯ ಮುಕ್ತ ತಾಲ್ಲೂಕು"** ಆಗುವ ನಿಟ್ಟಿನಲ್ಲಿ ದೃಢವಾದ ಹೆಜ್ಜೆಯನ್ನಿರಿಸಲಾಗಿದೆ.

## ಪ್ರಗತಿ ಪರಿಶೀಲನೆಯ ಮಾದರಿ:

ಉಡುಪಿ ತಾಲ್ಲೂಕು ಪಂಚಾಯತಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ನಿರಂತರ ಹಾಗೂ ವ್ಯವಸ್ಥಿತ ಪ್ರಗತಿ ಪರಿಶೀಲನೆಯ ವಿಧಾನವನ್ನು ಅಳವಡಿಸಿಕೊಂಡಿರುವುದು ಯಶಸ್ಸಿಗೆ ಬಹು ಪ್ರಮುಖ ಕಾರಣವಾಗಿದೆ. 'ನಮ್ಮ ಗ್ರಾಮ ನಮ್ಮ ಯೋಜನೆ'ಯನ್ನು ಮಾದರಿ ಎಂದು ಪರಿಗಣಿಸಿದ ಪಂಚಾಯತಿಗಳು ಈ ತಾಲೂಕಿನ ವ್ಯಾಪ್ತಿಯಲ್ಲಿರುವುದು ಮತ್ತು ಸಕಾರಾತ್ಮಕ ಮೇಲ್ವಿಚಾರಣೆ ಕೈಗೊಂಡಿರುವುದು ನಿರೀಕ್ಷಿತ ಪ್ರಗತಿಗೆ ಕಾರಣವಾಗಿದೆ. 87% ರಷ್ಟು ಮನೆ ತೆರಿಗೆ ವಸೂಲಾತಿಯನ್ನು ಸಾಧಿಸಲು ಪಂಚಾಯತಿಗಳು ನಿರಂತರ ಒತ್ತುಕೊಡಲು ತಾಲ್ಲೂಕು ಪಂಚಾಯತಿಯ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಮುಖ್ಯ ಕಾರಣವಾಗಿದೆ.

## ಉದ್ಯೋಗ ಮತ್ತು ತರಬೇತಿ:

ವಿವಿಧ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಸಿಂಡ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ ಮಣಿಪಾಲ ಮತ್ತು ರುಡ್‌ಸೆಟ್ ಬ್ರಹ್ಮಾವರ ಸಂಸ್ಥೆಯೊಂದಿಗಿನ ಸಹಭಾಗಿತ್ವದೊಂದಿಗೆ ಕೋಳಿ ಸಾಕಣೆ, ಹೈನುಗಾರಿಕೆ, ಪೇಪರ್ ಬ್ಯಾಗ್ ತಯಾರಿ, ಲಘು ವಾಹನ ಚಾಲನೆ, ಬ್ಯೂಟಿಪಾರ್ಲರ್, ಕೃಷಿ ಹಾಗೂ ತೋಟಗಾರಿಕೆ ಆಧಾರಿತ ತರಬೇತಿಗಳು, ವಾಹನ ರಿಪೇರಿ ಸೇರಿದಂತೆ ಯುವ ಜನತೆಗೆ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿಗೆ ಪೂರಕವಾಗಿ ತರಬೇತಿಯನ್ನು ನೀಡಲಾಗಿದೆ.

| ಕ್ರ.ಸಂ | ತರಬೇತಿ ಸ್ವರೂಪ | ಪ್ರಯೋಜನ ಪಡೆದವರು |
|---|---|---|
| 1 | ಕೃಷಿ- ತೋಟಗಾರಿಕೆ ಆಧಾರಿತ ತರಬೇತಿ | 907 |
| 2 | ಕೌಶಲ್ಯಾಭಿವೃದ್ಧಿ ತರಬೇತಿ | 1310 |
| 3 | ಉದ್ಯೋಗಾಧಾರಿತ ತರಬೇತಿಗಳು | 705 |

## ಶೈಕ್ಷಣಿಕ ಪ್ರಗತಿ:

ಉಡುಪಿ ತಾಲ್ಲೂಕು ಶೈಕ್ಷಣಿಕವಾಗಿ ಮುಂಚೂಣಿ ಯಲ್ಲಿರಲು ವ್ಯವಸ್ಥಿತ ಕಾರ್ಯಚಟುವಟಿಕೆಗಳು ಕಾರಣ. ಇದರ ನಿರಂತರತೆಗಾಗಿ ಮತ್ತು ವಲಸೆ ಕಾರ್ಮಿಕರ ಮಕ್ಕಳು ಶೈಕ್ಷಣಿಕವಾಗಿ ಅವಕಾಶ ವಂಚಿತರಾಗುವುದನ್ನು ತಡೆಯಲು ವಿಶೇಷ ಸಮೀಕ್ಷೆ, ಉತ್ತೇಜಕಗಳು, ಪ್ರೋತ್ಸಾಹಕಗಳು, ತರಬೇತಿ ಮತ್ತು ಆರೋಗ್ಯ ತಪಾಸಣೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ತಾಲ್ಲೂಕು ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ 23 ವಿದ್ಯಾರ್ಥಿಗಳನ್ನು ಗುರುತಿಸಿ ಮುಖ್ಯ ವಾಹಿನಿಗೆ ಕರೆತಂದಿರುವುದು ಉಲ್ಲೇಖನೀಯವಾಗಿದೆ.





### ಆರ್ಥಿಕ ನಿರ್ವಹಣೆ:

| ಕ್ರ.ಸಂ | ಯೋಜನೆ/ ಅನುದಾನದ ವಿವರ | ತಾ.ಪಂ ಪಾತ್ರ | ಲಭ್ಯವಾದ ಅನುದಾನದ ವಿವರ | ಅನುಷ್ಠಾನ ಬಳಕೆಯ ವಿವರ |
|---|---|---|---|---|
| 1 | ಸಂಯುಕ್ತ ಅನುದಾನ | ಗ್ರಾಮೀಣ ಪ್ರದೇಶ ಮೂಲ ಸೌಕರ್ಯ ಸುಧಾರಣೆ | 99,99,000.00 | 98,97,000.00 |
| 2 | ಸ್ಟಾಂಪ್ ಡ್ಯೂಟಿ | ಮೂಲ ಸೌಕರ್ಯ ಸುಧಾರಣೆ | 40,62,000.00 | 38,89,000.00 |
| 3 | ರಸ್ತೆ – ಮೂಲ ಸೌಕರ್ಯ ಅಭಿವೃದ್ಧಿ | ರಸ್ತೆ ಕಾಲುಸಂಕ ಸೇತುವೆ ನಿರ್ಮಾಣ ನಿರ್ವಹಣೆ | 3,50,000.00 | 3,49,000.00 |
| 4 | ತಾ. ಪಂ ಅಭಿವೃದ್ಧಿ ಅನುದಾನ | ನೀರು ಪೂರೈಕೆ ಸೇತುವೆ ರಸ್ತೆ ಸಂಪರ್ಕ ನಿರ್ವಹಣೆ | 5,99,000.00 | 5,91,000.00 |

ಅನುದಾನದ ಬಳಕೆಯಲ್ಲಿ ಇಲಾಖಾವಾರು ಹಂತದಲ್ಲಿಯೂ ಗರಿಷ್ಠ ಸಾಧನೆ ಮಾಡಲಾಗಿದೆ. ಅನುದಾನ ಬಳಕೆಯೊಂದಿಗೆ ವ್ಯವಸ್ಥಿತವಾದ ಲೆಕ್ಕ ಪತ್ರ ನಿರ್ವಹಣೆಯನ್ನು ನಿಯಮಗಳನುಸಾರ ಮಾಡಲಾಗಿದೆ. ಪಾರದರ್ಶಕ ಆಡಳಿತ ನೀಡುವಿಕೆಯಲ್ಲಿ ತಾಲ್ಲೂಕು ಪಂಚಾಯತಿ ಹಂತದಲ್ಲಿ ಪೂರಕವಾಗಿ ಕ್ರಮಕೈಗೊಳ್ಳಲಾಗಿದೆ.

ಮಾಹಿತಿ ಹಕ್ಕು ಕಾಯ್ದೆ ಅನುಷ್ಠಾನದಲ್ಲಿ 100% ಪ್ರಗತಿ ನಿರ್ವಹಿಸಿದ್ದು, ಈ ಅವಧಿಯಲ್ಲಿ ಸಲ್ಲಿಕೆಯಾದ 53 ಅರ್ಜಿಗಳಿಗೆ ಅಗತ್ಯ ಕ್ರಮಕೈಗೊಳ್ಳಲಾಗಿದೆ. ಸಮಗ್ರ ಪ್ರಗತಿಯ ನಿಟ್ಟಿನಲ್ಲಿ ಸಂಘಟನಾತ್ಮಕವಾಗಿ ಕಾರ್ಯನಿರ್ವಹಿಸಿರುವುದು ಪ್ರತಿಷ್ಠಿತ ಪ್ರಶಸ್ತಿ ಮುಡಿಗೇರಲು ಕಾರಣವಾಗಿದೆ. ■



ವರದಿ



ಗಾಯತ್ರಿ ಪಿ


ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತು ಉಜಿರೆ
ದಕ್ಷಿಣ ಕನ್ನಡ ಜಿಲ್ಲೆ


# ಉಜಿರೆ ಗ್ರಾಮ ಪಂಚಾಯತಿಗೆ ರಾಷ್ಟ್ರೀಯ ಪುರಸ್ಕಾರ

ಉಜಿರೆ ಗ್ರಾಮ ಪಂಚಾಯತಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಅತಿದೊಡ್ಡ ಗ್ರಾಮ ಪಂಚಾಯತಿಯಾಗಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳದಿಂದ 10ಕಿ.ಮೀ ದೂರದಲ್ಲಿರುವ ಈ ಗ್ರಾಮವು ಮೂರು ದೊಡ್ಡ ನಗರಗಳಿಗೆ ಸಂಪರ್ಕ ಕಲ್ಪಿಸುವ ಜಾಗವಾಗಿದೆ. 2011ರ ಜನಗಣತಿಯ ಪ್ರಕಾರ ಇಲ್ಲಿನ ಜನಸಂಖ್ಯೆ 13429 ಆಗಿದ್ದು, ದಿನನಿತ್ಯ ಓಡಾಡುವ ಜನರ ಸಂಖ್ಯೆ ಹಾಗೂ ಪರ ಊರಿನಿಂದ ವಿವಿಧ ಉದ್ದೇಶಗಳಿಗಾಗಿ ಇಲ್ಲಿ ವಾಸ್ತವ್ಯವಿರುವ ಜನರ ಸಂಖ್ಯೆ 25000ಕ್ಕೂ ಅಧಿಕವಾಗಿದೆ. ಶಿಶು ವಿಹಾರ ಕೇಂದ್ರದಿಂದ ಮೊದಲ್ಗೊಂಡು ವಿವಿಧ ಸ್ನಾತಕೋತ್ತರ ಪದವಿಯವರೆಗೆ ವಿದ್ಯಾ ಸಂಸ್ಥೆಗಳು, ನ್ಯಾಚುರೋಪತಿ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಹೀಗೆ ವಿವಿಧ ಶಿಕ್ಷಣ ಕೇಂದ್ರಗಳಿದ್ದು, ಶೈಕ್ಷಣಿಕ ತಾಣವೆಂದೇ ಈ ಊರು ಪ್ರಸಿದ್ಧಿಯಾಗಿದೆ. ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, ಅಂಚೆ ಕಛೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಧಾರ್ಮಿಕ ಕೇಂದ್ರಗಳು, ಖಾಸಗಿ ಆಸ್ಪತ್ರೆಗಳು ಹೀಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಈ ಗ್ರಾಮವು ಹೊಂದಿರುತ್ತದೆ.

34 ಸದಸ್ಯರನ್ನು ಹೊಂದಿರುವ ಈ ಗ್ರಾಮ ಪಂಚಾಯತಿ ಸಂಪನ್ಮೂಲ ಕ್ರೋಢೀಕರಣ, ಘನತ್ಯಾಜ್ಯ ವಿಲೇವಾರಿ, ಹಿಂದೂ ರುದ್ರಭೂಮಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹೀಗೆ ಹಲವಾರು ವಿಷಯಗಳಲ್ಲಿ ಗಣನೀಯ ಸಾಧನೆ ಮಾಡಿದೆ. 2016–17ನೇ ಸಾಲಿನಲ್ಲಿ ಸಂಪನ್ಮೂಲ ಕ್ರೋಢೀಕರಣದಲ್ಲಿ ಮಾಡಿದ ವಿಶೇಷ ಸಾಧನೆಗಾಗಿ ಈ ಬಾರಿಯ ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರವನ್ನು ಉಜಿರೆ ಗ್ರಾಮ ಪಂಚಾಯತಿ ತನ್ನದಾಗಿಸಿಕೊಂಡಿದೆ.

**ಉಜಿರೆ ಗ್ರಾಮ ಪಂಚಾಯತಿ ತನ್ನ ಸ್ವಂತ ಸಂಪನ್ಮೂಲ ಕ್ರೋಢೀಕರಣದಿಂದ ವಾರ್ಷಿಕ ರೂ. 1.00 ಕೋಟಿ ಆದಾಯ ಹೊಂದಿದ್ದು, ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದು, ಗ್ರಾಮ ಪಂಚಾಯತಿನ ಎಲ್ಲಾ ರಸ್ತೆಗಳು ಕಾಂಕ್ರೀಟಿಕರಣಗೊಂಡಿದೆ.**

## ಸಂಪನ್ಮೂಲ ಕ್ರೋಢೀಕರಣ

ಉಜಿರೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 3878 ಕುಟುಂಬಗಳಿದ್ದು, ಇಲ್ಲಿನ ಕಟ್ಟಡಗಳ ಸಂಖ್ಯೆ 4991 ಇದ್ದು, ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿ ತಿಳಿಸಿರುವಂತೆ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಎಲ್ಲಾ ಕಟ್ಟಡಗಳ ಸಮೀಕ್ಷೆ ನಡೆಸಿ, ಕಟ್ಟಡದ ಮೌಲ್ಯದ ಆಧಾರದ ಮೇಲೆ ತೆರಿಗೆ ವಿಧಿಸುವಂತೆ ನಿರ್ಣಯಿಸಲಾಗಿದ್ದು, ಅದರಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗಳ ಮೂಲಕ ಎಲ್ಲಾ ಕಟ್ಟಡಗಳನ್ನು ಅಳತೆ ಮಾಡಿ ಅದರ ಮೂಲ ಮೌಲ್ಯದ ಆಧಾರದಲ್ಲಿ ತೆರಿಗೆ ವಿಧಿಸಲಾಗಿದೆ. ಸದಸ್ಯರಿಂದ ಹಾಗೂ ಜನರಿಂದ ಸಾಕಷ್ಟು ವಿರೋಧಗಳು ಬಂದಿದ್ದು, ಗ್ರಾಮ ಸಭೆಗಳಲ್ಲಿ ಜನರಿಗೆ ತೆರಿಗೆ ಸಂಗ್ರಹಣೆಯಿಂದ ಗ್ರಾಮದ ಅಭಿವೃದ್ಧಿಯ ಬಗ್ಗೆ ಅರಿವು ಮೂಡಿಸಿ ಜನರ ಸಹಕಾರವನ್ನು ಕೋರಲಾಯಿತು. ನಿಧಾನವಾಗಿ ಜನ ಸಾಮಾನ್ಯರು ಈ ಬದಲಾವಣೆಗೆ ಒಗ್ಗಿಕೊಂಡರು. ಗ್ರಾಮ ಪಂಚಾಯತಿ ಸಿಬ್ಬಂದಿಗಳು ಪ್ರತಿದಿನ ಬೆಳಗ್ಗೆ 8 ಗಂಟೆಗೆ ಗ್ರಾಮದ ಮನೆಗಳಿಗೆ ತೆರಳಿ ತೆರಿಗೆ ಸಂಗ್ರಹಣೆ ಮಾಡುವ ಮೂಲಕ ಜನರಿಗೆ ತೆರಿಗೆ ಪಾವತಿಸಲು ಸುಲಭವಾಗುವಂತೆ ಮಾಡಿ ತೆರಿಗೆ ಸಂಗ್ರಹಣೆಯಲ್ಲಿ ಹೆಚ್ಚಳವಾಗುವಂತೆ ಮಾಡಿದರು. ತೆರಿಗೆ ಪಾವತಿಸದೇ ಇರುವ ಬಾಕಿದಾರರಿಗೆ ತಿಳುವಳಿಕೆ ಪತ್ರವನ್ನು ನೀಡುವ ಮೂಲಕ ಅರಿವು ಮೂಡಿಸಲಾಯಿತು. ಇದರಿಂದ ಒಟ್ಟಾರೆಯಾಗಿ ಶೇ.95ಕ್ಕಿಂತ ಅಧಿಕ ತೆರಿಗೆ ಸಂಗ್ರಹವಾಗುವಂತೆ ಕ್ರಮಕೈಗೊಳ್ಳಲಾಯಿತು.



ಗ್ರಾಮ ಪಂಚಾಯತಿ ತನ್ನದೇ ಆದ 50 ವಾಣಿಜ್ಯ ಕಟ್ಟಡಗಳನ್ನು ಹೊಂದಿದ್ದು, ಈ

ಕಟ್ಟಡಗಳನ್ನು ಬಹಿರಂಗ ಹರಾಜಿನ ಮೂಲಕ ಬಾಡಿಗೆಗೆ ನೀಡಲಾಗಿದ್ದು, ಈ ಕಟ್ಟಡಗಳಿಂದ ವಾರ್ಷಿಕವಾಗಿ ರೂ.3,463,202/- ಆದಾಯ ಪಂಚಾಯತಿಗೆ ಬರುತ್ತಿದೆ. ಇದಲ್ಲದೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಳವಡಿಲಾಗುವ ಬ್ಯಾನರ್ ಶುಲ್ಕ, ಕಾರ್ಯಕ್ರಮಗಳಿಗೆ ಅನುಮತಿ ಶುಲ್ಕ, ಸ್ವಚ್ಚತಾ ಶುಲ್ಕ, ವಾಣಿಜ್ಯ/ವ್ಯಾಪಾರ ಪರವಾನಿಗೆ/ನವೀಕರಣ ಶುಲ್ಕ ಹೀಗೆ ಗ್ರಾಮ ಪಂಚಾಯತಿಗೆ ಬೇರೆ ಬೇರೆ ಮೂಲಗಳಿಂದ ಸಂಪನ್ಮೂಲ ಕ್ರೋಢೀಕರಣದಲ್ಲಿ ಉಜಿರೆ ಗ್ರಾಮ ಪಂಚಾಯತಿ ತಾಲ್ಲೂಕಿನಲ್ಲಿಯೇ ಪ್ರಥಮ ಸ್ಥಾನದಲ್ಲಿರುತ್ತದೆ.

## ಕುಡಿಯುವ ನೀರು

ಗ್ರಾಮದಲ್ಲಿ ಹೆಚ್ಚಿನ ಮನೆಗಳಲ್ಲಿ ಕುಡಿಯುವ ನೀರಿಗಾಗಿ ತೆರೆದ ಬಾವಿ, ಕೊಳವೆ ಬಾವಿಗಳಿದ್ದು, ಅಗತ್ಯವಿರುವ ಎಲ್ಲಾ ಮನೆಗಳಿಗೆ ಗ್ರಾಮ ಪಂಚಾಯತಿನಿಂದ ಕುಡಿಯುವ ನೀರಿನ ಸಂಪರ್ಕವನ್ನು ಒದಗಿಸಲಾಗಿದೆ. ಎಲ್ಲಾ ಕುಡಿಯುವ ನೀರಿನ ಸಂಪರ್ಕಗಳಿಗೆ ಕಡ್ಡಾಯವಾಗಿ ಮೀಟರ್ ಅಳವಡಿಸಲಾಗಿದ್ದು, ಮೀಟರ್ ಅಳವಡಿಸದೇ ಇರುವ ಮನೆಗಳಿಗೆ ಪ್ರತಿ ತಿಂಗಳು ದಂಡನೆಯನ್ನು ವಿಧಿಸಲಾಗುತ್ತಿದೆ. ನೀರಿನ ನಿರ್ವಹಣೆಗೆ ಹಾಗೂ ಪಂಪು ಚಾಲಕರ ವೇತನಕ್ಕೆ ಬೇಕಾಗುವ ಸಂಪನ್ಮೂಲವು ಕುಡಿಯುವ ನೀರಿನ ಸಂಪರ್ಕಗಳ ಶುಲ್ಕ ಹಾಗೂ ನೀರಿನ ತೆರಿಗೆಯಿಂದ ಕ್ರೋಢೀಕೃತವಾಗುತ್ತಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿನ ಕೊಳವೆ ಬಾವಿಗಳಿಗೆ ಜಲ ಮರುಪೂರಣ ಮಾಡಿದ್ದು, ಗ್ರಾಮ ಪಂಚಾಯತಿ ಕಟ್ಟಡಕ್ಕೆ ಮಳೆ ನೀರು ಕೊಯ್ಲು ಅಳವಡಿಸಲಾಗಿದೆ. ಪ್ರತಿ ತಿಂಗಳು ಪಂಪು ಚಾಲಕರು ಮೀಟರ್ ರೀಡಿಂಗ್ ಮಾಡಿ ಕುಡಿಯುವ ನೀರಿನ ತಗಾದೆಯನ್ನು ನೀಡುತ್ತಿದ್ದು, ಬಳಕೆದಾರರು ಪಂಚಾಯತಿಗೆ ಈ ಶುಲ್ಕವನ್ನು ಪಾವತಿಸುತ್ತಾರೆ.

## ಘನತ್ಯಾಜ್ಯ ವಿಲೇವಾರಿ

ಗ್ರಾಮದ ನೈರ್ಮಲೀಕರಣವು ಗ್ರಾಮ ಪಂಚಾಯತಿಗೆ ಬಹು ದೊಡ್ಡ ಸವಾಲಾಗಿದ್ದು, ದಿನಕ್ಕೆ 3ರಿಂದ 4ಟನ್‌ಗಳಷ್ಟು ತ್ಯಾಜ್ಯ ಸಂಗ್ರಹವಾಗುತ್ತಿದೆ. ತ್ಯಾಜ್ಯ ವಿಲೇವಾರಿಯನ್ನು ಟೆಂಡರು ಮೂಲಕ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ತ್ಯಾಜ್ಯ ನಿರ್ವಹಣೆಗಾಗಿ ಮಾಸಿಕ ರೂ.1.50ಲಕ್ಷ ಪಂಚಾಯತಿಗೆ ಹೊರೆ ಬೀಳುತ್ತಿದೆ. ಇದನ್ನು ಸರಿದೂಗಿಸಲು ಗ್ರಾಮ ಪಂಚಾಯತಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ವರ್ತಕರು ಹಾಗೂ ಮನೆಗಳಿಂದ ಮೂಲದಲ್ಲಿಯೇ ಬೇರ್ಪಡಿಸಿದ ತ್ಯಾಜ್ಯಗಳನ್ನು ಸಂಗ್ರಹಿಸಲಾಗುತ್ತಿದೆ. ಆರು ಜನ ಸ್ವಚ್ಛತಾಗಾರರು ಹಾಗೂ ಎರಡು ಗಾಡಿಗಳನ್ನು ತ್ಯಾಜ್ಯ ವಿಲೇವಾರಿಗಾಗಿ ಬಳಸಲಾಗುತ್ತಿದ್ದು, ಗ್ರಾಮದಿಂದ 2ಕಿ.ಮೀ ದೂರದಲ್ಲಿರುವ ಘನತ್ಯಾಜ್ಯ ಘಟಕಕ್ಕೆ ತ್ಯಾಜ್ಯವನ್ನು ಸಾಗಿಸಿ ಅಲ್ಲಿ ಗೊಬ್ಬರ ಮಾಡುವ ಮೂಲಕ ನಿರ್ವಹಣೆಯನ್ನು ಮಾಡಲಾಗುತ್ತಿದೆ. ಘನತ್ಯಾಜ್ಯ ನಿರ್ವಹಣೆಗಾಗಿ ಪ್ರತಿ ಅಂಗಡಿಗಳಿಂದ ಹಾಗೂ ಮನೆಗಳಿಂದ ಮಾಸಿಕವಾಗಿ ನಿಗದಿತ ಶುಲ್ಕವನ್ನು ಸಂಗ್ರಹಿಸಿ, ಈ ಮೂಲಕ ಘನತ್ಯಾಜ್ಯ ನಿರ್ವಹಣೆಯನ್ನು ಮಾಡಲಾಗುತ್ತಿದೆ.

## "ಮೋಕ್ಷಧಾಮ": ಮಾದರಿ ಹಿಂದೂ ರುದ್ರಭೂಮಿ



ಉಜಿರೆ ಗ್ರಾಮ ಪಂಚಾಯತಿನ ಹಿಂದೂ ರುದ್ರಭೂಮಿಯು ರಾಜ್ಯಕ್ಕೆ ಮಾದರಿಯಾಗಿದ್ದು, ಹಲವಾರು ಜಿಲ್ಲೆಗಳಿಂದ ಇದನ್ನು ವೀಕ್ಷಿಸಲು ಹಾಗೂ ತಮ್ಮ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನ ಮಾಡಲು ತಂಡಗಳು ಆಗಮಿಸಿದೆ. ಉಜಿರೆ ಹಿಂದೂ ರುದ್ರಭೂಮಿ ವ್ಯವಸ್ಥಾಪನಾ ಸಮಿತಿಯನ್ನು ಹೊಂದಿದ್ದು, ಈ ಸಮಿತಿಯು ಮೂಲಕ ಕಾರ್ಯನಿರ್ವಹಿಸುತ್ತಿದೆ. ಈ ರುದ್ರಭೂಮಿಯು ಸ್ಮಶಾನದಂತೆ ಕಾಣದೆ ಒಂದು ಸುಂದರವಾದ ನಿಸರ್ಗಧಾಮದಂತೆ ಭಾಸವಾಗುತ್ತಿದೆ. ಪ್ರತಿ ಶವ ಸಂಸ್ಕಾರಕ್ಕೆ ಗ್ರಾಮ ಪಂಚಾಯತಿನಲ್ಲಿ ರೂ.100/- ರ ರಶೀದಿ ಮಾಡಲಾಗುತ್ತಿದೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜಯಡಿಯಲ್ಲಿ ಈ ರುದ್ರಭೂಮಿಯಲ್ಲಿ ಅಡಿಕೆ ಸಸಿಗಳನ್ನು ನಡೆಸಲಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ ಇದರಿಂದ ಆದಾಯವನ್ನು ನಿರೀಕ್ಷೆ ಮಾಡಬಹುದಾಗಿದೆ.

ಹೀಗೆ ಉಜಿರೆ ಗ್ರಾಮ ಪಂಚಾಯತಿ ತನ್ನ ಸ್ವಂತ ಸಂಪನ್ಮೂಲ ಕ್ರೋಢೀಕರಣದಿಂದ ವಾರ್ಷಿಕ ರೂ. 1.00 ಕೋಟಿ ಆದಾಯ ಹೊಂದಿದ್ದು, ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದು, ಗ್ರಾಮ ಪಂಚಾಯತಿನ ಎಲ್ಲಾ ರಸ್ತೆಗಳು ಕಾಂಕ್ರೀಟಿಕರಣಗೊಂಡಿದೆ. ಅಗತ್ಯವಿರುವ ಎಲ್ಲಾ ಕಡೆ ಕಾಂಕ್ರೀಟಿಕರಣ, ಕಿರು ಸೇತುವೆಗಳು, ತಡೆ ಗೋಡೆಗಳು, ನಿರ್ಮಾಣಗೊಂಡಿದೆ. ಪಂಚಾಯತಿ ಅಧ್ಯಕ್ಷರಾದ ಶ್ರೀ ಕೆ. ಶ್ರೀಧರ ಪೂಜಾರಿ ಹಾಗೂ ಸದಸ್ಯರು ಸಾಕಷ್ಟು ಮುತುವರ್ಜಿ ವಹಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಕಾರ ನೀಡುತ್ತಿದ್ದಾರೆ. ■

ವರದಿ



ಡಾ|| ಎಂ.ಆರ್.ರವಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್,
ಮಂಗಳೂರು

**ಜಿಲ್ಲಾ ಪಂಚಾಯತಿಗೆ ಒಲಿದು ಬಂದ ಪ್ರಶಸ್ತಿಯ ಹಾದಿಯು ಸುಗಮವಾಗಿರಲಿಲ್ಲ. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮಾರ್ಗದರ್ಶನ, ಜಿಲ್ಲಾ ಪಂಚಾಯತಿ ಅಂದಿನ ಉಪ ಕಾರ್ಯದರ್ಶಿಯವರಾದ ಶ್ರೀ ಎನ್. ಆರ್. ಉಮೇಶ್‌ರವರ ಸಹಕಾರ ಹಾಗೂ ಜಿಲ್ಲಾ ಪಂಚಾಯತಿಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಜೊತೆಗೂಡಿ ಪ್ರಶಸ್ತಿಗೆ ಸಂಬಂಧಿಸಿ ಸಮಗ್ರ ಮಾಹಿತಿಯನ್ನು ತಯಾರಿಸಿರುತ್ತಾರೆ.**

# ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗೆ ದೀನ್ ದಯಾಳ್ ಉಪಾಧ್ಯಾಯ ಸಶಕ್ತೀಕರಣ ಪುರಸ್ಕಾರ

2016-17 ನೇ ಸಾಲಿನ ಪ್ರಗತಿ ಆಧರಿಸಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ "ದೀನ್ ದಯಾಳ್ ಉಪಾಧ್ಯಾಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರಕ್ಕೆ" ಆಯ್ಕೆಯಾಗಿರುತ್ತದೆ. ಪಂಚಾಯತ್ ರಾಜ್ ಮಂತ್ರಾಲಯ ಸಿದ್ಧಪಡಿಸಿರುವ ಅಂತರ್ಜಾಲದಲ್ಲಿ (http://panchayataward.gov.in) ಅಳವಡಿಸಲಾಗಿರುವ ಪ್ರಶ್ನಾವಳಿಗೆ ಮಾಹಿತಿಯನ್ನು ಸಿದ್ಧಪಡಿಸಿ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರಕ್ಕೆ ಆನ್‌ಲೈನ್ ಮುಖಾಂತರ ಪ್ರಶ್ನಾವಳಿಗಳನ್ನು ಭರ್ತಿಗೊಳಿಸಿ ಪ್ರಸ್ತಾವನೆಯನ್ನು ಸಲ್ಲಿಸಲಾಯಿತು.

- ಜಿಲ್ಲಾ ಪಂಚಾಯತಿಯಲ್ಲಿ ಜರುಗಿದ ಸಾಮಾನ್ಯ ಸಭೆ ಹಾಗೂ ಸಾಮಾನ್ಯ ಸ್ಥಾಯಿ ಸಮಿತಿಗಳ ಸಭೆಯನ್ನು ನಡೆಸಿರುವ ಬಗ್ಗೆ ಹಾಜರಾತಿ, ವಿಶೇಷವಾಗಿ ಮಹಿಳೆಯರ, ಪ.ಜಾತಿ & ಪ.ಪಂಗಡ ಸದಸ್ಯರ ಹಾಜರಾತಿ ಮತ್ತು ಸಹಭಾಗಿತ್ವ, ಸಭೆಗಳಲ್ಲಿ ಕುಡಿಯುವ ನೀರು, ನೀರಾವರಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಪ.ಜಾತಿ/ಪ.ಪಂಗಡ ಸಂಬಂಧಿಸಿದ ವಿಷಯಗಳು, ಗ್ರಾಮೀಣ ರಸ್ತೆ, ಬೀದಿ ದೀಪ, ಗ್ರಾಮೀಣ ಜನತೆಯ ಜೀವನೋಪಾಯವನ್ನು ಸುಧಾರಿಸುವ ಕುರಿತ ವಿಷಯಗಳ ಬಗ್ಗೆ ಚರ್ಚೆ.
- ಜಿಲ್ಲಾ ಪಂಚಾಯತಿಯಲ್ಲಿ ವಿವಿಧ ಪ್ರಗತಿ ಪರಿಶೀಲನಾ ಸಭೆಗಳ ಕುರಿತು ಉದಾ: ದಿಶಾ, ಕೆಡಿಪಿ ಇತ್ಯಾದಿ
- ವಾರ್ಷಿಕ ಕ್ರಿಯಾ ಯೋಜನೆ ತಯಾರಿಕೆ, ವಿವಿಧ ಮೂಲಗಳಿಂದ ಆದಾಯ ಹಾಗೂ ಆಸ್ತಿ ಸೃಜನೆ, ಸಿಎಸ್‌ಆರ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳು
- 2016-17 ನೇ ಸಾಲಿನ ಜಿಲ್ಲಾ ಪಂಚಾಯತಿಯ ವಿವಿಧ ಯೋಜನೆಗಳಡಿ ಸಾಧಿಸಿರುವ ಪ್ರಗತಿ ಉದಾ: ಎಂಜಿಎನ್‌ಆರ್‌ಜಿಎ, ಆರ್‌ಡಬ್ಲ್ಯೂಎಸ್, ಎನ್‌ಆರ್‌ಎಲ್‌ಎಂ, ಪಿಎಂಜಿಎಸ್‌ವೈ, ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ, ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ, ಸ್ವಚ್ಛ ಭಾರತ್ ಮಿಷನ್, ವಸತಿ ಯೋಜನೆ ಇತ್ಯಾದಿ.
- ಗ್ರಾಮೀಣ ಜನತೆಯ ಜೀವನೋಪಾಯವನ್ನು ಸುಧಾರಿಸಲು ಕೈಗೊಂಡಿರುವ ಕ್ರಮಗಳ ಕುರಿತು. ಜೈವಾನಿಲ ಸ್ಥಾವರ, ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಬಾವಿ ನಿರ್ಮಾಣ, ದನದ ಹಟ್ಟಿ, ರಸ್ತೆ ಬದಿ ನೆಡುತೋಪು, ಕೊಳವೆ ಬಾವಿ ಮರುಪೂರಣ, ವಸತಿ ಯೋಜನೆ, ಎನ್‌ಆರ್‌ಎಲ್‌ಎಂ ಯೋಜನೆಯಡಿ ಸ್ವಸಹಾಯ ಸಂಘಗಳ ರಚನೆ, ಆರ್‌ಜಿಸಿವೈ ಯೋಜನೆ ಮುಖಾಂತರ ನಿರುದ್ಯೋಗ ಗಾಮೀಣ ಯುವಕ/ಯುವತಿಯರಿಗೆ ಸ್ವದ್ಯೋಗ ತರಬೇತಿ, ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ, ಪೈಪ್ ಕಾಂಪೋಸ್ಟ್ ಇತ್ಯಾದಿ
- ಲೆಕ್ಕಪತ್ರ ನಿರ್ವಹಣೆ, ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಬಂದಿರುವ ಅರ್ಜಿಗಳ ವಿಲೇವಾರಿ, ಸಾರ್ವಜನಿಕ ಕುಂದು ಕೊರತೆ ಅರ್ಜಿಗಳ ವಿಲೇವಾರಿ.
- ವಿವಿಧ ಇಲಾಖೆಗಳಿಂದ ಫಲಾನುಭವಿಗಳಿಗೆ ದೊರಕಿರುವ ಸೌಲಭ್ಯದ ಕುರಿತು.
- ಸ್ವಚ್ಛತೆ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ, ಪ.ಜಾತಿ & ಪ.ಪಂಗಡದ ಶ್ರೇಯೊಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳ ಕುರಿತು.

- ಇ– ಆಡಳಿತಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ತಂತ್ರಾಂಶಗಳಾದ LGD (Local Government Directory), Panchatantra (Accounting Software) Work-Soft (Works Monitoring and Implementation) E-Swathu Online Property Generating Software), Bapuji Seva Kendra Online Services (101 Services Including G2C, G2B, B2C), MGNREGA Applications and Geo-tagging Mobile Applications ಹಾಗೂ ಇತರೆ ತಂತ್ರಾಂಶಗಳ ಸಂಪೂರ್ಣ ಅಳವಡಿಕೆ.
- ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳ ಯೋಜನೆಗಳು, ಪಂಚಾಯತಿ ಪ್ರೋಫೈಲ್, ಸಭೆಗಳ ನಡವಳಿಗಳು, ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ವಿವರ, ತಂತ್ರಾಂಶದಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಪಂಚಮಿತ್ರ ತಂತ್ರಾಂಶದಲ್ಲಿ ಕಾಲಕಾಲಕ್ಕೆ ಇಂಧೀಕರಿಸಲಾಗಿದೆ.

ಆನ್‌ಲೈನ್ ಮೂಲಕ ಪ್ರಶ್ನಾವಳಿಗಳನ್ನು ಉತ್ತರಿಸಿದ ಬಳಿಕ ದಿ: 24–10–2017 ರಂದು ರಾಜ್ಯ ಸರ್ಕಾರದಿಂದ ನಿಯೋಜಿಸಲ್ಪಟ್ಟ ರಾಜ್ಯ ತಂಡದ ಶ್ರೀ ಎಂ.ಕೆ ಕೆಂಪೇಗೌಡ ನಿರ್ದೇಶಕರು (ಪಂ.ರಾಜ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಇವರ ನೇತೃತ್ವದಲ್ಲಿ ದ.ಕ. ಜಿಲ್ಲೆಗೆ ಭೇಟಿ ಮಾಡಿ ದಾಖಲೆಗಳನ್ನು ಪರಿಶೀಲನೆ ನಡೆಸಿತು.

ದಿ: 23–01–2018 ರಿಂದ 25–01–2018 ರವರೆಗೆ ಕೇಂದ್ರ ಸರ್ಕಾರದಿಂದ ನಿಯೋಜಿಸಲ್ಪಟ್ಟ ಕೇಂದ್ರ ತಂಡ ಶ್ರೀ ವಿ. ಜಿ. ರಾಮಚಂದ್ರ ನಾಯರ್ Center for Rural Management ಕೊಟ್ಟಾಯಂ, ಕೇರಳ ಇವರ ನೇತೃತ್ವದ ತಂಡ ಜಿಲ್ಲಾ ಪಂಚಾಯತಿಗೆ ಭೇಟಿ ನೀಡಿ ಅಧ್ಯಕ್ಷರು ಮತ್ತು ಸದಸ್ಯರೊಂದಿಗೆ ಸಮಲೋಚನೆಯನ್ನು ನಡೆಸಿತು. ತದನಂತರ ಜಿಲ್ಲಾ ಪಂಚಾಯತಿನ ಎಲ್ಲಾ ಅಧೀನ ಇಲಾಖಾಧಿಕಾರಿಗಳೊಂದಿಗೆ ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು. ಪ್ರಶಸ್ತಿಗೆ ಸಂಬಂಧಿಸಿದ ಆನ್‌ಲೈನ್ ಪ್ರಶ್ನಾವಳಿಗಳಿಗೆ ಸಲ್ಲಿಸಿರುವ ಎಲ್ಲಾ ಮಾಹಿತಿಗಳನ್ನು ಕೂಲಂಕುಷವಾಗಿ ಪರಿಶೀಲನೆ ನಡೆಸಿದರು.

ಜಿಲ್ಲಾ ಪಂಚಾಯತಿಯಿಂದ ನೇಮಿಸಿದ ನೋಡಲ್ ಅಧಿಕಾರಿಗಳು ಕ್ಷೇತ್ರ ಭೇಟಿ ನಡೆಸಿದರು. ಭೇಟಿ ಮಾಡಿದ ಪ್ರಮುಖ ಸ್ಥಳಗಳಾದ ಮಳವೂರು ಬಹುಗ್ರಾಮ ಕುಡಿಯುವ ನೀರು ಯೋಜನೆ, CSR ಯೋಜನೆಯಡಿ ಎಕ್ಕಾರು



ಗ್ರಾಮ ಪಂಚಾಯತಿ ವ್ಯಾಪ್ತಿಯ ಅಂಗನವಾಡಿಯಲ್ಲಿ ಹವಾನಿಯಂತ್ರಣ ಅಳವಡಿಕೆ, ಸಂಗಬೆಟ್ಟು ಘನ ತ್ಯಾಜ್ಯ ವಿಲೇವಾರಿ ಘಟಕ, ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ನಿರ್ಮಾಣಗೊಂಡ ಇಡ್ಕಿದು ಗ್ರಾಮ ಪಂಚಾಯತಿ ವ್ಯಾಪ್ತಿಯ ಸ್ಮಶಾನ, ಇರಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ. ಕ್ಷೇತ್ರ ಭೇಟಿ ಮಾಡಿದ ಕೇಂದ್ರ ತಂಡವು ಬಳಿಕ ಜಿಲ್ಲಾ ಪಂಚಾಯತಿಯ ವಿನೂತನ ಯೋಜನೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ ಜಿಲ್ಲಾ ಪಂಚಾಯತಿಯನ್ನು ದೀನ್ ದಯಾಳ್ ಪಂಚಾಯತ್ ಸಶಕ್ತೀಕರಣ ಪುರಸ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ಜಿಲ್ಲಾ ಪಂಚಾಯತಿಗೆ ಒಲಿದು ಬಂದ ಪ್ರಶಸ್ತಿಯ ಹಾದಿಯು ಸುಗಮವಾಗಿರಲ್ಲಿಲ್ಲ. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮಾರ್ಗದರ್ಶನ, ಜಿಲ್ಲಾ ಪಂಚಾಯತಿ ಅಂದಿನ ಉಪ ಕಾರ್ಯದರ್ಶಿಯವರಾದ ಶ್ರೀ ಎನ್. ಆರ್. ಉಮೇಶ್‌ರವರ ಸಹಕಾರ ಹಾಗೂ ಜಿಲ್ಲಾ ಪಂಚಾಯತಿಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಜೊತೆಗೂಡಿ ಪ್ರಶಸ್ತಿಗೆ ಸಂಬಂಧಿಸಿ ಸಮಗ್ರ ಮಾಹಿತಿಯನ್ನು ತಯಾರಿಸಿರುತ್ತಾರೆ. ಇದರ ಫಲವಾಗಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗೆ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರ ದೊರೆತಿದೆ. ■



ವರದಿ




ಮನೋಜ್ ಕುಮಾರ್ ಶುಕ್ಲಾ
ಭಾ.ಅ.ಸೇ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಶ್ರೀರಾಂಪುರ ಕ್ರಾಸ್, ಜಕ್ಕೂರು, ಬೆಂಗಳೂರು


ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ತಾವುಗಳು ಪ್ರದರ್ಶನಕ್ಕಾಗಿ ವಿಶೇಷ ತಂತ್ರಜ್ಞಾನ ಬಳಸಿ ತಂದಿರುವ ಯೋಜನಾ ಮಾದರಿಗಳನ್ನು ಪ್ರದರ್ಶಿಸಿದರು ಹಾಗೂ ತಮ್ಮ ಯೋಜನೆಗಳನ್ನು ತೀರ್ಪುಗಾರರಿಗೆ ಪಿ.ಪಿ.ಟಿ ಮುಖಾಂತರ ವಿವರಿಸಿ ಸಲಹೆಗಳನ್ನು ಸಹ ಪಡೆದರು. ಅಲ್ಲದೇ ಕೆಲವು ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಪ್ರದರ್ಶನ ಕಾರ್ಯಕ್ರಮವನ್ನು ವೀಕ್ಷಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

# ಹಸಿರು ಶಕ್ತಿ ತಾಂತ್ರಿಕತೆಯ ಪ್ರತಿಬಿಂಬ

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಒಂದು ತರಬೇತಿ ಸಂಸ್ಥೆಯಾಗಿದ್ದು, ಈ ಸಂಸ್ಥೆಯ ಮೂಲ ಉದ್ದೇಶ ಗ್ರಾಮೀಣಾಭಿವೃದ್ಧಿಗಾಗಿ ನವೀಕರಿಸಬಹುದಾದ ಇಂಧನ ಮೂಲಗಳ ಬಗ್ಗೆ ಗ್ರಾಮ ಮಟ್ಟದಲ್ಲಿ ತಿಳುವಳಿಕೆ ಮೂಡಿಸುವುದರೊಂದಿಗೆ ಅನುಷ್ಠಾನ ಮಾಡುವಲ್ಲಿ ಸಹಾಯಕವಾಗುವ ನಿಟ್ಟಿನಲ್ಲಿ ಅನೇಕ ರೀತಿಯ ವೈವಿಧ್ಯಮಯ ತರಬೇತಿಗಳನ್ನು ಆಯೋಜಿಸುತ್ತಾ ಬಂದಿರುತ್ತದೆ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಡಾ.ನಾಗಾಂಬಿಕಾದೇವಿರವರು ಸಂಸ್ಥೆಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ತಂತ್ರಜ್ಞಾನದ ವಿಷಯವಾಗಿ ರಾಜ್ಯದ ಇಂಜಿನಿಯರಿಂಗ್ ಮತ್ತು ಡಿಪ್ಲೋಮಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ವಸ್ತು ಪ್ರದರ್ಶನ ಮತ್ತು ಸ್ಪರ್ಧಾ ಕಾರ್ಯಕ್ರಮವನ್ನು ಏರ್ಪಡಿಸಿ, ನವೀಕರಿಸಬಹುದಾದ ಇಂಧನ ಮೂಲಗಳ ತಂತ್ರಜ್ಞಾನದ ಬೆಳವಣಿಗೆ ಬಗ್ಗೆ ಸಲಹೆ ನೀಡಿದರು.

ಸಂಸ್ಥೆಯು ರಾಜ್ಯದ ಇಂಜಿನಿಯರಿಂಗ್ ಮತ್ತು ಡಿಪ್ಲೊಮಾ ಕಾಲೇಜು ವಿದ್ಯಾರ್ಥಿಗಳಿಗೆ ಎರಡು ದಿನಗಳ ರಾಜ್ಯ ಮಟ್ಟದ ನವೀಕರಿಸಬಹುದಾದ ಇಂಧನ, ಇಂಧನ ಸಂರಕ್ಷಣೆ, ಇಂಧನ ಪರಿವರ್ತನೆ ತಂತ್ರಜ್ಞಾನದ ಬಗ್ಗೆ ವಸ್ತು ಪ್ರದರ್ಶನ ಮತ್ತು ಸ್ಪರ್ಧಾ ಕಾರ್ಯಕ್ರಮದಲ್ಲಿ (NAVITANTRIKS – 2018) ಭಾಗವಹಿಸಲು ಆಹ್ವಾನ ನೀಡಲಾಗಿತ್ತು. ಅದರಲ್ಲಿ ಅಂತಿಮವಾಗಿ 17 ಇಂಜಿನಿಯರಿಂಗ್ ಮತ್ತು 2 ಡಿಪ್ಲೋಮಾ ಕಾಲೇಜುಗಳ ತಂಡಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವು.

ದಿನಾಂಕ 27 ಮತ್ತು 28 ಏಪ್ರಿಲ್ 2018 ರಂದು ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಸೌರ ತಂತ್ರಜ್ಞಾನ, ಗಾಳಿ ತಂತ್ರಜ್ಞಾನ, ತ್ಯಾಜ್ಯದಿಂದ ಇಂಧನ, ಸುಧಾರಿತ ಕೃಷಿ ಯಂತ್ರ ಹಾಗೂ ಜೈವಿಕ ತಂತ್ರಜ್ಞಾನಗಳನ್ನೊಳಗೊಂಡ ಅನೇಕ ಮಾದರಿಗಳನ್ನು ಸಂಸ್ಥೆಯ ಆವರಣದಲ್ಲಿ





ಪ್ರದರ್ಶನ ಮಾಡಿದರು. ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಡಾ. ನಾಗಾಂಬಿಕಾದೇವಿ, ಭಾಆಸೇ., ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆರವರು ಆಗಮಿಸಿ ಕಾರ್ಯಕ್ರಮ ಉದ್ಘಾಟನೆ ಮಾಡುವುದರ ಮುಖಾಂತರ ವಸ್ತು ಪ್ರದರ್ಶನ ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ ಇಂಜಿನಿಯರಿಂಗ್, ಡಿಪ್ಲೊಮಾ ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಾ ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ನವೀಕರಿಸಬಹುದಾದ ಇಂಧನ ತಂತ್ರಜ್ಞಾನ ಮತ್ತು ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳನ್ನು ಕೇವಲ ರಾಜ್ಯ ಮಟ್ಟದಲ್ಲಿ ಅಲ್ಲದೇ, ರಾಷ್ಟ್ರಮಟ್ಟದಲ್ಲಿ ಆಯೋಜಿಸುತ್ತಾ ತನ್ನ ಛಾಪನ್ನು ರಾಷ್ಟ್ರದಾದ್ಯಂತ ಮೂಡಿಸುತ್ತಿರುವುದು ಒಂದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು. ಅಲ್ಲದೇ, ಭಾಗವಹಿಸಿದ ವಿದ್ಯಾರ್ಥಿಗಳಿಗೆ ನವೀಕರಿಸಬಹುದಾದ ಇಂಧನ ತಂತ್ರಜ್ಞಾನ ಬರೀ ನಗರ ಮಟ್ಟಕ್ಕೆ ಮಾತ್ರ ಸೀಮಿತವಾಗದೇ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಹೆಚ್ಚು ಪರಿಣಾಮ ಬೀರುವಂತಿರಬೇಕು, ಈ ನಿಟ್ಟಿನಲ್ಲಿ ಭವಿಷ್ಯದ ತಂತ್ರಜ್ಞರಾದ ನೀವುಗಳು ಯೋಚನೆ ಮಾಡಬೇಕೆಂದು ಹೇಳಿದರು.

ಮತ್ತೊಬ್ಬ ಅತಿಥಿ ಶ್ರೀ ಸೀತಾರಾಮು ನಿವೃತ್ತ ನಿರ್ದೇಶಕರು, ಸಿ.ಪಿ.ಆರ್.ಐ., ಬೆಂಗಳೂರುರವರು ಭಾಗವಹಿಸಿದ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಇಂಧನ ಕ್ಷೇತ್ರದಲ್ಲಿ ತುಂಬಾ ಬದಲಾವಣೆಯಾಗಿದೆ ಹಿಂದೆ ಕಲ್ಲಿದ್ದಲಿನಿಂದ ವಿದ್ಯುತ್ ತಯಾರಿಕೆಯಲ್ಲಿ ಸೋರಿಕೆ, ತಂತ್ರಜ್ಞಾನದಲ್ಲಿ ಕೊರತೆ ಇತ್ತು ಆದರೆ ಇತ್ತೀಚಿಗೆ ತಂತ್ರಜ್ಞಾನ ತುಂಬಾ ಮುಂದುವರೆದಿದೆ. ಬೇಡಿಕೆ ಮತ್ತು ಪೂರೈಕೆಯಲ್ಲಿ ವ್ಯತ್ಯಾಸವನ್ನು ಕಡಿಮೆ ಮಾಡಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ತಾವುಗಳು ಪ್ರದರ್ಶನಕ್ಕಾಗಿ ವಿಶೇಷ ತಂತ್ರಜ್ಞಾನ ಬಳಸಿ ತಂದಿರುವ ಯೋಜನಾ ಮಾದರಿಗಳನ್ನು ಪ್ರದರ್ಶಿಸಿದರು ಹಾಗೂ ತಮ್ಮ ಯೋಜನೆಗಳನ್ನು ತೀರ್ಪುಗಾರರಿಗೆ ಪಿ.ಪಿ.ಟಿ ಮುಖಾಂತರ ವಿವರಿಸಿ ಸಲಹೆಗಳನ್ನು ಸಹ ಪಡೆದರು. ಅಲ್ಲದೇ ಕೆಲವು ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಪ್ರದರ್ಶನ ಕಾರ್ಯಕ್ರಮವನ್ನು ವೀಕ್ಷಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಎರಡನೇ ದಿನ ತೀರ್ಪುಗಾರರು ವಿಜೇತರಾದ ತಂಡಗಳನ್ನು ಘೋಷಿಸಿದರು. ಕೊನೆಯಲ್ಲಿ ಡಾ. ಹೆಚ್. ನಾಗನಗೌಡ, ನಿರ್ದೇಶಕರು, ನ್ಯಾಷನಲ್ ಸೆಂಟರ್ ಫಾರ್ ಸೋಲಾರ್ ಟೆಕ್ನಾಲಜಿ, ಕೆ.ಪಿ.ಸಿ.ಎಲ್. ಮತ್ತು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರು ಇಂಜಿನಿಯರಿಂಗ್ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ವಿತರಿಸಿದರು.

ಈ NAVITANTRIKS ಕಾರ್ಯಕ್ರಮದ ಆಯೋಜನೆಯ ಮುಖ್ಯ ಉದ್ದೇಶ ನವೀಕರಿಸಬಹುದಾದ ಇಂಧನ ಹಾಗೂ ಇಂಧನ ಸಂರಕ್ಷಣೆ ತಂತ್ರಜ್ಞಾನಗಳನ್ನು ವಿದ್ಯಾರ್ಥಿಗಳು ಅವಿಷ್ಕಾರ ಮಾಡುವುದನ್ನು ಪ್ರೋತ್ಸಾಹಿಸುವುದಾಗಿದೆ ಹಾಗೂ ಇದು ಸಂಸ್ಥೆಯ ಕನಸು ಸಹ ಹೌದು. ■



ವರದಿ



**ಸೂರ್ಯನಾರಾಯಣ ಭಟ್ಟ**

ಜಿಲ್ಲಾ ಸಮಾಲೋಚಕರು
ಜಿಲ್ಲಾಪಂಚಾಯತ ಉತ್ತರ ಕನ್ನಡ

# ಶೌಚಾಲಯದ ಗುರಿ ಸಾಧನೆಗೆ ವಿನೂತನ ಲಾಟರಿ

**ಶೌಚಾಲಯ ನಿರ್ಮಾಣ ಮಾಡದ ಫಲಾನುಭವಿಗಳ ಮನವೊಲಿಸಲು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಕಂದಾಯ ಇಲಾಖೆ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಯಿತು. ಶೌಚಾಲಯ ರಹಿತರ ಹೆಸರುಗಳನ್ನು ಬರೆದಿರುವ ಚೀಟಿಗಳನ್ನು ಈ ಅಧಿಕಾರಿಗಳು ಎತ್ತುತ್ತಾರೆ. ಪ್ರತಿ ಅಧಿಕಾರಿಯು ಅಥವಾ ಸಿಬ್ಬಂದಿಯು ಎತ್ತಿರುವ ಚೀಟಿಯಲ್ಲಿನ ಹೆಸರಿರುವ ಫಲಾನುಭವಿಯ ಮನವೊಲಿಸುವುದು ಆಯಾ ಅಧಿಕಾರಿಯ ಕರ್ತವ್ಯವಾಗಿರುತ್ತದೆ.**

ಉತ್ತರ ಕನ್ನಡ ಜಿಲ್ಲೆಯ ನೈಸರ್ಗಿಕ ಸೊಬಗು ಶಬ್ದಗಳ ಬಂಧನಕ್ಕೆ ನಿಲುಕದ್ದು. ಒಂದೆಡೆ ಅರಬ್ಬೀ ಸಮುದ್ರದ ಭೋರ್ಗರೆತ, ಇನ್ನೊಂದೆಡೆ ಅನಂತ ಸಾಗರಕ್ಕೆ ಸೆಡ್ಡುಹೊಡೆದು ನಿಂತ ಸಹ್ಯಾದ್ರಿಯ ಶಿಖರಮಾಲೆ, ನಡುವೆ ಹಳ್ಳ-ತೊರೆಗಳು, ದಟ್ಟ ಅರಣ್ಯ ಪ್ರದೇಶ, ಜಿಲ್ಲೆಯ ಅಂಚಿನ ಭಾಗಗಳಲ್ಲಿ ಮೈಚಾಚಿರುವ ಬಯಲು ಸೀಮೆ. ಹೀಗೆ ಊರಿಂದೂರಿಗೆ ಬದಲಾವಣೆಗೊಳ್ಳುವ ಭೌಗೋಳಿಕ ಪ್ರದೇಶವನ್ನೊಳಗೊಂಡ ವಿಶಿಷ್ಟ ಜಿಲ್ಲೆ ಉತ್ತರ ಕನ್ನಡ ಜಿಲ್ಲೆ. ಕರುನಾಡಿನ ಹೆಮ್ಮೆಯ ಕದಂಬರ ಆಡಳಿತದ ಇತಿಹಾಸ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ ಜನಜೀವನದಲ್ಲಿ ಇಂದಿಗೂ ಅವ್ಯಕ್ತವಾಗಿ ಗೋಚರವಾಗುತ್ತದೆ.

ಆದರೆ ಹಲವು ವರ್ಷಗಳಿಂದೀಚೆಗೆ ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಈ ಪರಿಶುದ್ಧ ಪ್ರಕೃತಿ ಕಲುಷಿತಗೊಳ್ಳತೊಡಗಿತು. ಜನಜೀವನವು ಆಧುನಿಕ ಜೀವನ ಶೈಲಿಗೆ ಬದಲಾವಣೆಗೊಳಪಟ್ಟಿದ್ದರೂ, ದೈನಂದಿನ ಜೀವನದಲ್ಲಿ ಮೂಲಭೂತ ರೂಢಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಹಿನ್ನಡೆ ಕಂಡು ಬರುತ್ತಿದ್ದು, ತಲೆತಲಾಂತರದಿಂದ ನಡೆದುಕೊಂಡು ಬಂದಿದ್ದ ಬಯಲು ಶೌಚ ಅಭ್ಯಾಸಕ್ಕೆ ಒಗ್ಗಿಕೊಂಡಿದ್ದ ಜಿಲ್ಲೆಯ ಜನತೆ ಸ್ವಚ್ಛ ಪರಿಸರ ನಿರ್ಮಾಣದ ಕುರಿತು ಅಸಡ್ಡೆ ತೋರುತ್ತಿದ್ದರು. ಪರಿಣಾಮವಾಗಿ ಹಲವು ರೋಗಗಳು ಹರಡತೊಡಗಿತು. ಬಯಲು ಮಲವಿಸರ್ಜನೆಗೆ ಹೋದ ಜನರು ಕ್ರೂರಮೃಗಗಳ ದಾಳಿಗೆ, ಘಾತುಕ ವ್ಯಕ್ತಿಗಳ ದೌರ್ಜನ್ಯಕ್ಕೆ ಮತ್ತು ನದಿ-ಹೊಳೆಗಳ ಪ್ರವಾಹಕ್ಕೆ ಬಲಿಯಾದದ್ದೂ ಉಂಟು.



**ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಾರ್ಯಕ್ರಮದ ಒಂದು ನೋಟ**



**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಒಂದು ನೋಟ**

ಜಿಲ್ಲಾ ಪಂಚಾಯಿತಿ ಶೌಚಾಲಯ ನಿರ್ಮಾಣದ ಗುರಿ ತಲುಪಲು ಶೌಚಾಲಯ ನಿರ್ಮಾಣದ ಬೇಡಿಕೆ ಅಭಿಯಾನ, ಮಕ್ಕಳಲ್ಲಿ ಸ್ವಚ್ಚತೆಯ ಅರಿವು ಮೂಡಿಸುವ ಕಾರ್ಯಕ್ರಮ, ಶೌಚಾಲಯ ನಿರ್ಮಾಣಕ್ಕೆ ಮುಂಗಡ ಸಾಲ ಒದಗಿಸುವ ಮಹತ್ವದ ಕಾರ್ಯಕ್ರಮ, ಸಿ.ಎಲ್.ಟಿ.ಎಸ್. ಇಷ್ಟೆಲ್ಲ ಶ್ರಮದ ಹೊರತಾಗಿಯೂ ಹಲವು ಕಡೆಗಳಲ್ಲಿ ರೂಢಿಗತವಾಗಿ ಬಂದ ಬಯಲು ಬಹಿರ್ದೆಸೆ ಪದ್ಧತಿಯಿಂದ ಹೊರಬರಲು ಜನರ ಮನವೊಲಿಸುವುದು ಕಷ್ಟಕರವಾಗಿತ್ತು. ಕೆಲವು ಗ್ರಾಮಗಳಲ್ಲಿ ಗ್ರಾಮಸ್ಥರು, ಯುವಕರು ಶೌಚಾಲಯ ನಿರ್ಮಾಣಕ್ಕೆ ಪ್ರತಿರೋಧ ಒಡ್ಡುತ್ತಿದ್ದು. ಅವರ ಮನವೊಲಿಸುವ ಜವಾಬ್ದಾರಿಯ ಹಂಚಿಕೆಗೆ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಗಳನ್ನು ನೇಮಿಸಲು ಫಲಾನುಭವಿಗಳ ಹೆಸರನ್ನು ಲಾಟರಿ ಮೂಲಕ ಆಯ್ಕೆ ಮಾಡುವುದು ಈ ಯೋಜನೆಯ ತಾತ್ಪರ್ಯ.

## ಲಾಟರಿ ಮೂಲಕ ಅಧಿಕಾರಿಗಳಿಗೆ ಗುರಿ ನಿಗಧಿ ಪಡಿಸುತ್ತಿರುವುದು

ಶೌಚಾಲಯ ನಿರ್ಮಾಣ ಮಾಡದ ಫಲಾನುಭವಿಗಳ ಮನವೊಲಿಸಲು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಕಂದಾಯ ಇಲಾಖೆ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಯಿತು. ಶೌಚಾಲಯ ರಹಿತರ ಹೆಸರುಗಳನ್ನು ಬರೆದಿರುವ ಚೀಟಿಗಳನ್ನು ಈ ಅಧಿಕಾರಿಗಳು ಎತ್ತುತ್ತಾರೆ. ಪ್ರತಿ ಅಧಿಕಾರಿಯು ಅಥವಾ ಸಿಬ್ಬಂದಿಯು ಎತ್ತಿರುವ ಚೀಟಿಯಲ್ಲಿನ ಹೆಸರಿರುವ ಫಲಾನುಭವಿಯ ಮನವೊಲಿಸುವುದು ಆಯಾ ಅಧಿಕಾರಿಯ ಕರ್ತವ್ಯವಾಗಿರುತ್ತದೆ. ಫಲಾನುಭವಿಯ ಮನೆಗೆ ತೆರಳಿ ಶೌಚಾಲಯದ ಮಹತ್ವ, ನಿರ್ಮಾಣಕ್ಕೆ ಸರ್ಕಾರದ ಸಹಾಯಧನ ಇತ್ಯಾದಿ ಸಮಗ್ರ ಮಾಹಿತಿ ನೀಡಿ ಫಲಾನಿಭವಿಗಳನ್ನು ಉತ್ತೇಜಿಸುವ ಜಿಲ್ಲಾ ಪಂಚಾಯಿತಿಯ ಕಲ್ಪನೆಯ ಈ ವಿಭಿನ್ನ ಪ್ರಯೋಗದ ಲಾಟರಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು. ಈ ಮೂಲಕ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮುಂದಾಳತ್ವದಲ್ಲಿ ಎಲ್ಲ ಹಂತದ ಅಧಿಕಾರಿಗಳ, ಜನಪ್ರತಿನಿಧಿಗಳ ಹಾಗೂ ಸಂಘಸಂಸ್ಥೆಗಳ ಪರಿಶ್ರಮಕ್ಕೆ ಸೂಕ್ತ ಗೌರವ ಲಭಿಸಿದಂತಾಯಿತು.

■



ವರದಿ



ಲಕ್ಷ್ಮಣ ಕೆರಳ್ಳಿ

ತಾಲ್ಲೂಕು ಐ.ಇ.ಸಿ ಸಂಯೋಜಕ
ತಾಲೂಕ ಪಂಚಾಯತ, ಯಲಬುರ್ಗಾ

**ಕೃಷಿ ಹೊಂಡ ಮರುಭೂಮಿಯಲ್ಲಿ ನೀರು ಅತ್ಯಮೂಲ್ಯವಾಗಿದ್ದು ಮಿತವಾಗಿ ಬಳಸುವ ನೀರಿನ ಮಹತ್ವ ಅರಿತುಕೊಳ್ಳಬೇಕು. ಹರಿಯುವ ನೀರು ಜಮೀನಿನ ಮೇಲೆ ಹರಿದು ನಂತರ ಮುಂದಿನ ಭಾಗಕ್ಕೆ ಸೇರುತ್ತದೆ. ಹಾಗೆ ಹರಿಯುವ ನೀರು ಭೂಮಿಯಲ್ಲಿ ಇಂಗಿ, ಭೂಗರ್ಭದ ಶಿಥಿಲ ಪದರದಲ್ಲಿ ಸಂಗ್ರಹವಾಗಿದೆ. ಇಳಿಜಾರಿಗೆ ಅಡ್ಡಲಾಗಿ ಕೃಷಿ ಹೊಂಡ ನಿರ್ಮಿಸಿರುವುದರಿಂದ ನೀರಿನ ಸೆಲೆ ಕಾಣಬಹುದು.**

# ವೈಯಕ್ತಿಕ ಕೃಷಿಹೊಂಡ ನಿರ್ಮಾಣ

ಯಲಬುರ್ಗಾ ತಾಲ್ಲೂಕಿನ ಮುದೋಳ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಪ್ರದೇಶಗಳು ಕಡಿಮೆ ಮಳೆ ಆಗುವ ಪ್ರದೇಶವಾಗಿದ್ದು ಕಪ್ಪು ಮತ್ತು ಕೆಂಪು ಮಣ್ಣಿನ ಭೂಮಿಯನ್ನು ಹೊಂದಿದ್ದು ಮಳೆಯಾಶ್ರಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಕೊಳವೆ ಬಾವಿ ಹೆಚ್ಚಾದ ನಂತರ ಜಲ ಮೂಲಗಳು ಬತ್ತಿ ಬಾವಿಗಳು ಮುಚ್ಚಿಹೋದವು. ಹೊಲದಲ್ಲಿ ನೀರಿನ ಸೆಲೆ ಇಲ್ಲದಂತಾಗಿ ಭೂಮಿಯು ಬರಡಾಗಿ ಎಲ್ಲೆಡೆಯೂ ಹಸಿರಿಲ್ಲದೆ ಕಾಡು ಪ್ರಾಣಿಗಳಿಗೆ ಹೊಲಗಳಿಗೆ ಹೊದ ರೈತರಿಗೆ ನೀರಿಲ್ಲದೆ ಪರಿತಪಿಸುವಂತಾಗಿತ್ತು. ಹಳೆಯ ಸಾಂಪ್ರದಾಯಿಕ ಕೃಷಿ ಜತೆಗೆ ನೀರಿನ ಮೂಲಗಳನ್ನು ರಕ್ಷಿಸಿಕೊಳ್ಳುವುದು ಪಾರಂಪರಿಕ ಪದ್ದತಿಗಳಾದ ಬದು ನಿರ್ಮಾಣ, ಇಂಗು ಗುಂಡಿ ನಿರ್ಮಾಣ, ನೆಡುತೋಪು ನಿರ್ಮಾಣ, ಕೃಷಿ ಹೊಂಡ, ಟ್ರಂಚಿಂಗ್, ಚೆಕ್ ಡ್ಯಾಮ್ ನಿರ್ಮಾಣ, ಕೆರೆ ಹೂಳೆತ್ತುವುದು ಕಾಮಗಾರಿಗಳಲ್ಲಿ ರೈತರು ಮುಂದಾಗಬೇಕಾಗಿತ್ತು.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಮಳೆಯಾಶ್ರಿತ ಜಮೀನಿನ ರೈತರು ತಮ್ಮ ಬೆಳೆಗಳನ್ನು ಮಳೆ ಕೈಕೊಟ್ಟಾಗ ರಕ್ಷಿಸಿಕೊಳ್ಳಲು ಕೃಷಿಹೊಂಡ ಕಾಮಗಾರಿಗಳು ನೆರವಾಗಬಹುದೆಂದು ಮತ್ತು ಸುತ್ತ ಮುತ್ತಲಿನ ವಾತಾವರಣವನ್ನು ತಂಪಾಗಿಡುವುದಲ್ಲದೆ ಅಂತರ್ಜಲ ಹೆಚ್ಚಿಸಲು ಕೃಷಿ ಹೊಂಡಗಳು ಅನುಕೂಲವಾಗಬಹುದೆಂದು ಗ್ರಾಮ ಸಭೆಯಲ್ಲಿ ಕೃಷಿ ಹೊಂಡ ನಿರ್ಮಾಣಕ್ಕೆ ಹೆಚ್ಚಿನ ಬೇಡಿಕೆ ಬಂದವು ಕೃಷಿ ಹೊಂಡ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಸ್ಥಳೀಯ ಗ್ರಾಮ ಪಂಚಾಯತಿಯ ಸಹಾಯದಿಂದ ಕಾಮಗಾರಿಗಳು ಕೃಷಿ ಕೂಲಿ ಕಾರ್ಮಿಕರ ನೆರವಿನಿಂದ ಕೂಲಿ ಬೇಡಿಕೆ ಅನುಸಾರ ಕಾಮಗಾರಿಗಳು ಚಾಲನೆಗೊಂಡವು.

## ಅನುಷ್ಠಾನದ ವಿವರ:–

**ಫಲಾನುಭವಿಗಳ ಆಯ್ಕೆ:–** ಮುಧೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜರುಗಿದ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಜರುಗಿದ ಸಂದರ್ಭದಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡಲು ಆಯ್ಕೆ ಮಾಡಿದ ಫಲಾನುಭವಿಗಳ ಕ್ರಿಯಾ ಯೋಜನೆ ತಯಾರಿಸಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರ ಸಹಿಯೊಂದಿಗೆ ತಾಲ್ಲೂಕು, ಜಿಲ್ಲಾ ಪಂಚಾಯತಿಯ ಅನುಮೋದನೆ ಪಡೆದ ನಂತರ ಗ್ರಾಮ ಸಂಬಂಧಿಸಿದ ಕಾಮಗಾರಿಗಳೆ



2017–18 ರ ಕೂಲಿ ವೆಚ್ಚದ ಅನುಸಾರ(ದಿನಕ್ಕೆ 234ರೂ.) ತಾಂತ್ರಿಕ ಸಹಾಯಕರು ನಿಗದಿತ ಮಾನದಂಡದ ಅನುಸಾರ ಎಸ್ಟಿಮೇಟ್ ಮಾಡುತ್ತಾರೆ.

ಗ್ರಾಮಗಳಲ್ಲಿ ಕೂಲಿ ಬೇಡಿಕೆಗೆ ನೀಡಿರುವ ಕೂಲಿಕಾರರಿಗನುಗುಣವಾಗಿ ಕಾಮಗಾರಿಗಳನ್ನು ಹಂಚಿಕೆ ಮಾಡಿ ಸಮುದಾಯ ತಾಂತ್ರಿಕ ಸಹಾಯಕರ ಮುಖಾಂತರ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಗ್ರಾಮ ಪಂಚಾಯತಿಯು ತಾಲ್ಲೂಕು ಪಂಚಾಯತಿಯ ಪೂರ್ವಾನುಮೋದನೆಯೊಂದಿಗೆ ಖಾಲಿ ಎನ್.ಎಮ್.ಆರ್ ತೆಗೆದುಕೊಂಡು ತಾಂತ್ರಿಕ ಸಹಾಯಕರ ನಿರ್ಣಯದಂತೆ




ಫಲಾನುಭವಿಯ ಹೊಲದ ತಗ್ಗಾದ ಪ್ರದೇಶದಲ್ಲಿ (Catchment Area) ಕೃಷಿ ಹೊಂಡ ಮಾಡಲು 12 ಮೀಟರ್ ಉದ್ದ, 12 ಮೀಟರ್ ಅಗಲ, 3 ಮೀಟರ್ ಆಳದ ಹಂತ ಹಂತವಾಗಿ ಕೃಷಿ ಹೊಂಡ ನಿರ್ಮಾಣ ಮಾಡಲು ಕೂಲಿಕಾರಿಗೆ ತಿಳಿಸಲಾಗುತ್ತದೆ. ಅದರಂತೆ ಕೂಲಿಕಾರರ ಕೂಲಿ ಕೆಲಸಕ್ಕೆ ಅನುಗುಣವಾಗಿ ದಿನಾಂಕ ಮುಕ್ತಾಯವಾದ ಎನ್.ಎಮ್.ಆರ್ ಗಳಿಗೆ ಕೆಲಸಕ್ಕೆ ಅನುಗುಣವಾಗಿ ತಾಂತ್ರಿಕ ಸಹಾಯಕರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕೂಲಿ ಪಾವತಿಸಬೇಕಾಗುತ್ತದೆ.

## ಕೃಷಿ ಹೊಂಡ ಅನುಷ್ಠಾನದ ಪೂರ್ವಸ್ಥಿತಿ:

ಕಳೆದ 2 ವರ್ಷಗಳಿಂದ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ ಜಮೀನಿನಲ್ಲಿ ತರಕಾರಿ ಹಾಗೂ ಇತರೆ ಬೆಳೆಗಳನ್ನು ಬೆಳೆಯಲು ದುಸ್ಥರವಾಗಿತ್ತು. 6 ತಿಂಗಳ ಕಾಲ ಮಳೆಗಾಲ ಇರುವುದರಿಂದ ಅಷ್ಟೇನು ತೊಂದರೆಯಾಗಿರುವುದಿಲ್ಲ. ಆದರೆ ಉಳಿದ 6 ತಿಂಗಳು ಕಾಲ ಮಳೆ ಬೇಸಿಗೆ ಮತ್ತು ಚಳಿಗಾಲ ಇರುವುದರಿಂದ ವಿವಿಧ ತರಕಾರಿ ಹಾಗೂ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಹಾಲಿ ಇರುವ ಕೊಳವೆ ಬಾವಿಯ ನೀರಿನ ಅಂತರ್‌ಜಲ ಪ್ರಮಾಣವು ಸಹ ಕಡಿಮೆ ಆಗಿದ್ದು, ಇನ್ನು 1 ವರ್ಷ ಕಳೆದರೆ ಇದ್ದ ಕೊಳವೆ ಬಾವಿಯ ನೀರು ಇಲ್ಲದಂತಾಗುತ್ತದೆ. ಇದನ್ನು ಮನಗಂಡು ಫಲಾನುಭವಿಯು ತನ್ನ ಸ್ವಂತ ಜಮೀನಿನಲ್ಲಿ ಕೃಷಿಹೊಂಡ ನಿರ್ಮಿಸಲು ಆಸಕ್ತಿ ತೋರಿಸಿರುತ್ತಾನೆ.

## ಕೃಷಿ ಹೊಂಡದ ಪ್ರಯೋಜನಗಳು:

**ಮಳೆಯಾಶ್ರಿತ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಿಸಿದರೆ ಹಲವು ಲಾಭಗಳಿವೆ. ಹೊಂಡದಲ್ಲಿ ಮಳೆ ನೀರು ಸಂಗ್ರಹ ಆಗುವುದು.**

* ಅಂತರಜಲ ಮಟ್ಟ ಹೆಚ್ಚುವುದು.
* ಮಣ್ಣಿನ ತೇವಾಂಶ ಕಾಯ್ದುಕೊಂಡು ಬೆಳೆಗಳ ಸಮೃದ್ಧ ಇಳುವರಿಗೆ ಅನುಕೂಲವಾಗುವದು.
* ಸಂಕಷ್ಟದಲ್ಲಿ ಕೃಷಿಹೊಂಡ ರೈತರನ್ನು ಕೈ ಹಿಡಿಯುವದು ಹಾಗೂ ಒಂದೇ ತಿಂಗಳಲ್ಲಿ 80 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ.
  - ಜಾನುವಾರುಗಳಿಗೆ ಕುಡಿಯುವ ನೀರಿನ ಸೌಲಭ್ಯ.
  - ಕೃಷಿ ಹೊಂಡ ಮರುಭೂಮಿಯಲ್ಲಿ ನೀರು ಅತ್ಯಮೂಲ್ಯವಾಗಿದ್ದು ಮಿತವಾಗಿ ಬಳಸುವ ನೀರಿನ



ಮಹತ್ವ ಅರಿತುಕೊಳ್ಳಬೇಕು. ಹರಿಯುವ ನೀರು ಜಮೀನಿನ ಮೇಲೆ ಹರಿದು ನಂತರ ಮುಂದಿನ ಭಾಗಕ್ಕೆ ಸೇರುತ್ತದೆ. ಹಾಗೆ ಹರಿಯುವ ನೀರು ಭೂಮಿಯಲ್ಲಿ ಇಂಗಿ, ಭೂಗರ್ಭದ ಶಿಥಿಲ ಪದರದಲ್ಲಿ ಸಂಗ್ರಹವಾಗಿದೆ. ಇಳಿಜಾರಿಗೆ ಅಡ್ಡಲಾಗಿ ಕೃಷಿ ಹೊಂಡ ನಿರ್ಮಿಸಿರುವುದರಿಂದ ನೀರಿನ ಸೆಲೆ ಕಾಣಬಹುದು. ಭೂಗರ್ಭದಲ್ಲಿ ಶಿಥಿಲ ವಲಯದಲ್ಲಿ ನೀರಿನ ಪ್ರಮಾಣ ಉತ್ತಮವಾಗಿರುವದೇ

ಹೊಂಡದಲ್ಲಿ ನೀರಿನ ಒರತೆ ಗೋಚರಿಸಲು ಸಾಧ್ಯವಾಗಿದೆ. ಜಮೀನಿನಲ್ಲಿ ಮಳೆ ನೀರು ಇಂಗಿದರೆ ಇಂತಹ ಅಚ್ಚರಿಗಳು ಕಾಣಿಸಲು ಸಾಧ್ಯವಿದೆ. ಕೊಳವೆ ಬಾವಿಗೆ ವೈಪಲ್ಯದಿಂದ ಇಳಿಜಾರಿನ ಜಮೀನಿಗೆ ವಿದ್ಯುತ್ ಪೂರೈಕೆ ಸಮಸ್ಯೆಗಳಿಂದಾಗಿ ಬೆಳೆಗಳಿಗೆ ನೀರುಣಿಸುವುದು ಕಷ್ಟವಾಗಿತ್ತು. ಇದರಿಂದ ಬೆಳೆ ನಷ್ಟವಾಗಿ ಕೃಷಿ ಬದುಕು ದುಸ್ತರ ಎನಿಸುತ್ತದೆ.

2008 ರಿಂದ ಮಹಾತ್ಮಗಾಂಧಿ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಗ್ರಾಮ ಪಂಚಾಯಿತಿ ಹಂತದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಅನುಷ್ಠಾನಗೊಳಿಸುತ್ತಾ ಬರಲಾಗಿದ್ದು, 2017–18ನೇ ಸಾಲಿನಿಂದ ವೈಯಕ್ತಿಕ ಕೃಷಿ ಹೊಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಮಾಹಿತಿ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಕಾಮಗಾರಿ ಅನುಷ್ಠಾನ ಪೂರ್ವದಲ್ಲಿ ಫಲಾನುಭವಿಗಳನ್ನು ಎಲ್ಲಾ ಗ್ರಾಮಗಳಿಂದ ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು.

ತಾಂತ್ರಿಕ ಸಹಾಯಕರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅನುಷ್ಠಾನ ನಿಯಾಮಾನುಸಾರ ದಾಖಲಾತಿಗಳನ್ನು ಫಲಾನುಭವಿಗಳಿಂದ ಪಡೆಯಲಾಯಿತು. ವೈಯಕ್ತಿಕ ಫಲಾನುಭವಿವಾರು ಕಡತ ನಿರ್ವಹಣೆ ಮಾಡಿ ಫಲಾನುಭವಿಗಳು ತಾವು ಅನುಷ್ಠಾನಗೊಳಿಸುವ ಕೃಷಿ ಹೊಂಡ ನಿರ್ಮಾಣದ ವಿಸ್ತೀರ್ಣಕ್ಕೆ ಅನುಗುಣವಾಗಿ ಅಂದಾಜು ಪಟ್ಟಿ ತಯಾರಿಸಿ ತಾಂತ್ರಿಕ ಸಂಯೋಜಕರು ತಾಂತ್ರಿಕ ಮಂಜೂರಾತಿ ನೀಡಿ ಆಡಳಿತಾತ್ಮಕ ಮಂಜೂರಾತಿಯನ್ನು ಗ್ರಾಮ ಪಂಚಾಯಿತಿಯಿಂದ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ಮುಧೋಳ ಗ್ರಾಮ ಪಂಚಾಯತಿಯಲ್ಲಿ ಸಣ್ಣ / ಅತೀಸಣ್ಣ ಹಾಗೂ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ರೈತರಿಗೆ ಅವರಿಗೆ ಇರುವ ಹಿಡುವಳಿಯಲ್ಲೇ ಕೃಷಿ ಹೊಂಡ ಕಾಮಗಾರಿಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಕೂಲಿ ಬಾಬ್ತು ಮತ್ತು ಸಾಮಾಗ್ರಿ ಬಾಬ್ತು ನೀಡುವ ಸೌಲಭ್ಯವು ಈ ಯೋಜನೆಯಲ್ಲಿ ಇರುವುದರಿಂದ ಗ್ರಾಮ ಪಂಚಾಯತಿ ಮಟ್ಟದಲ್ಲಿ ಬಹಳಷ್ಟು ಸಣ್ಣ ರೈತರು ಈ ಯೋಜನೆಯ ಲಾಭ ಪಡೆದಿರುತ್ತಾರೆ. ಪ್ರಸಕ್ತ ವರ್ಷದಲ್ಲಿ ಅನುಷ್ಠಾನಗೊಂಡಿರುವ ಕೃಷಿಹೊಂಡಗಳು ಮಳೆಗಾಲದಲ್ಲಿ ನೀರು ತುಂಬಿರುವುದರಿಂದ ಇದರ ಸವಲತ್ತು ಪಡೆಯಲು ಬಹಳಷ್ಟು ಜನ ಆಸಕ್ತಿಯಿಂದ ಮುನ್ನುಗ್ಗುತ್ತಿದ್ದು, ಕಚೇರಿಯಲ್ಲಿ ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ. ಇದರಿಂದಲೇ ಮುಧೋಳ ಗ್ರಾಮ ಪಂಚಾಯತಿಯಲ್ಲಿ ಕೃಷಿಹೊಂಡ ಕಾಮಗಾರಿ ಎಷ್ಟರ ಮಟ್ಟಿಗೆ ಸಹಾಯಕವಾಗಿದೆ ಹಾಗೂ ರೈತರ ಏಳಿಗೆಗೆ ಪರೋಕ್ಷವಾಗಿ ಕಾರಣವಾಗಿದೆ.



- ಒಂದು ಕೃಷಿಹೊಂಡದಲ್ಲಿ ಕನಿಷ್ಠವೆಂದರು 200 ಘನಮೀ. ನೀರು ಅಂದರೆ ಸುಮಾರು 2,00,000 ಲೀಟರ್ ನೀರನ್ನು ಸಂಗ್ರಹಿಸಬಹುದಾಗಿದ್ದು ಈಗ ಸಾಕಷ್ಟು ಮಳೆ ಆಗುತ್ತಿರುವುದರಿಂದ ಜಮೀನಿನಲ್ಲಿ ನೀರು ಸಂಗ್ರಹಣೆಯಾಗುವುದರಿಂದ ಬರುವ ದಿನಗಳಲ್ಲಿ ಅಂತರಜಲ ಹೆಚ್ಚಾಗುವುದರಲ್ಲಿ ಅನುಮಾನವೇ ಇಲ್ಲಾ ಎಂಬುದು ತಾಲೂಕ ತಾಂತ್ರಿಕ ಸಂಯೋಜಕರಾದ ವಿಶ್ವನಾಥ ಜಿನೂರು ಇವರ ಅಭಿಪ್ರಾಯಪಟ್ಟರು.
- ರೈತರು ತಮ್ಮ ಹೊಲಗಳಲ್ಲಿ ಸಾಂಪ್ರದಾಯಕ ಬೆಳೆಗಳ ಜೊತೆ ತರಕಾರಿ ಹಾಗು ಇತರೆ ಬೆಳೆಗಳನ್ನು ಸಹ ಬೆಳೆಯಲು ಸಜ್ಜಾಗುತ್ತಿದ್ದಾರೆ. ಇದೆಲ್ಲದಕ್ಕೂ ಕಾರಣವಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಾಕಷ್ಟು ರೈತರು ಹೊಗಳುತ್ತಿದ್ದಾರೆ ಮತ್ತು ಕೂಲಿ ಕಾರ್ಮಿಕರು ಇದರಿಂದ ಖುಷಿಯಾಗಿದ್ದಾರೆ. ತಾಲೂಕಿನ ಎಲ್ಲಾ ರೈತಬಾಂದವರು ಯಶಸ್ವಿ ಕೃಷಿಕರಾಗಲು ಇಂತಹ ಪ್ರಯತ್ನಗಳನ್ನು ಮಾಡಿ ಹರಿಯುವ ನೀರನ್ನು ತಡೆಯುವುದು, ತಡೆದ ನೀರನ್ನು ನಿಲ್ಲಿಸುವುದು, ನಿಂತ ನೀರನ್ನು ಇಂಗಿಸುವುದರಿಂದ ಭೂಮಿಯಲ್ಲಿ ತೇವಾಂಶ ಕಾಯ್ದುಕೊಂಡು ರೈತರು ಹೆಚ್ಚು ಇಳುವರಿಯನ್ನು ಪಡೆಯುತ್ತಿದ್ದಾರೆ. ■

ವರದಿ



**ಸುಬ್ಬರಾಜ ಅರಸ್ ವಿ ಆರ್**

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕಳ್ಳಂಬೆಳ್ಳ ಗ್ರಾಮ ಪಂಚಾಯಿತಿ
ಶಿರಾ ತಾಲ್ಲೂಕು, ತುಮಕೂರು
ಜಿಲ್ಲೆ–572125
ಮೊ.9480877410

**ಕೊಪ್ಪ ತಾಲ್ಲೂಕು ಪಂಚಾಯಿತಿಗೆ ಭೇಟಿ ನೀಡುತ್ತಿದ್ದಂತೆ ಅಲ್ಲಿನ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಮತ್ತು ಇತರೆ ಸಿಬ್ಬಂದಿ ವರ್ಗದವರು ತುಂಬು ಹೃದಯದಿಂದ ಎಲ್ಲಾ ಅಧ್ಯಕ್ಷ/ಉಪಾಧ್ಯಕ್ಷರನ್ನು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಮತ್ತು ಅನಸಾರಾಗ್ರಾಪಂ ಸಂಸ್ಥೆಯ ಬೋಧಕರುಗಳನ್ನು ಬರಮಾಡಿಕೊಂಡರು.**

# ಗಾಂಧಿ ಗ್ರಾಮ ಪುರಸ್ಕೃತ ಗ್ರಾ.ಪಂ.ಗಳಿಗೆ ಅಧ್ಯಕ್ಷ/ಉಪಾಧ್ಯಕ್ಷರು ಅಧ್ಯಯನ ಪ್ರವಾಸ

ತುಮಕೂರು ಜಿಲ್ಲೆಯ ಗಾಂಧಿ ಗ್ರಾಮ ಪುರಸ್ಕೃತ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೂರು ದಿನಗಳ ಅಧ್ಯಯನ ಪ್ರವಾಸದಡಿಯಲ್ಲಿ 10 ತಾಲ್ಲೂಕಿನ ತಲಾ 2 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಚಿಕ್ಕಮಗಳೂರಿನ ಕೊಪ್ಪ ತಾಲ್ಲೂಕು ಪಂಚಾಯಿತಿ, ಅಸಗೋಡು ಗ್ರಾಮ ಪಂಚಾಯಿತಿ ಮತ್ತು ಮೆಣಸೆ ಗ್ರಾಮ ಪಂಚಾಯಿತಿಯನ್ನು ಭೇಟಿ ನೀಡಿದ್ದು, ಕೊಪ್ಪ ತಾಲ್ಲೂಕು ಪಂಚಾಯಿತಿಗೆ ಭೇಟಿ ನೀಡುತ್ತಿದ್ದಂತೆ ಅಲ್ಲಿನ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ಅನಸಾರಾಗ್ರಾಪಂ ಸಂಸ್ಥೆಯ ಬೋಧಕರುಗಳನ್ನು ಬರಮಾಡಿಕೊಂಡರು. ಎಸ್ಕಾಂ ಅನುದಾನದ ಸದ್ಬಳಕೆ ಮತ್ತು ಬಿಲ್ ಪಾವತಿಯ ವಿಚಾರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬೀದಿ ದೀಪ ಮತ್ತು ಕುಡಿಯುವ ನೀರು ಸ್ಥಾವರಗಳ ವಿದ್ಯುತ್ ನಿರ್ವಹಣೆ ಮತ್ತು ಬಿಲ್ ಪಾವತಿಯ ವರದಿ ಮತ್ತು ತಮ್ಮ ಅಧಿಕಾರಿಗಳು ಎಸ್ಕಾಂ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಮನ್ವಯತೆ ಸಾಧಿಸಿ, ಎಸ್ಕಾಂ ಬಿಲ್ಲುಗಳನ್ನು ಪ್ರತಿ ಮಾಹೆಯು ಪಾವತಿಸುತ್ತಾ, ಉಳಿದ ಶಾಸನಬದ್ಧ ಹಣವನ್ನು ಮತ್ತು 14ನೇ ಹಣಕಾಸು ಅನುದಾನವನ್ನು ಗ್ರಾಮ ಪಂಚಾಯಿತಿಗಳ ತಮ್ಮ ಪಂಚಾಯಿತಿಗಳ ಆಡಳಿತ ಮತ್ತು ಅಭಿವೃದ್ಧಿಗೆ ಬಳಸಿಕೊಳ್ಳುತ್ತೇವೆಂದು ತಿಳಿಸಿದರು.

ಅಧ್ಯಕ್ಷರು ತಾವು ತಮ್ಮ ತಾಲ್ಲೂಕು ಪಂಚಾಯಿತಿಯ ಬಗ್ಗೆ ವಿವರಿಸುತ್ತಾ ಈ ಕೆಳಕಂಡ ವಿಚಾರಗಳಲ್ಲಿ ತಮ್ಮ ಸಾಧನೆಯ ವಿಚಾರವನ್ನು ಹಂಚಿಕೊಂಡರು.

- ಎಸ್ಕಾಂ ಬಿಲ್ ಪಾವತಿಯನ್ನು ಸಂಪೂರ್ಣವಾಗಿ ಮಾಡಿದ್ದಾಗ್ಯೂ ಅನುದಾನವನ್ನು ಉಳಿಸಿಕೊಂಡು ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು.
- ಶೇಕಡ 90 ಕ್ಕಿಂತ ಹೆಚ್ಚು ಕರವಸೂಲಿಯನ್ನು ಮಾಡುವ ಹಾಗೆ ಗ್ರಾಮ ಪಂಚಾಯಿತಿಯನ್ನು ಪ್ರೋತ್ಸಾಹಿಸುವುದು.
- ವಿಫುಲವಾದ ನೈಸರ್ಗಿಕ ಸಂಪನ್ಮೂಲವನ್ನು ಹೊಂದಿರುವುದರಿಂದ ದೇಶದಲ್ಲಿಯೇ ಉತ್ತಮವಾದ ಜೀವ ವೈವಿಧ್ಯ ಸಮಿತಿಯನ್ನು ರಚಿಸಿ ರಾಜ್ಯವನ್ನು ಪ್ರತಿನಿಧಿಸುವುದು.



- ಗ್ರಾಮ ವಿಕಾಸ, 14ನೇ ಹಣಕಾಸು ಮತ್ತು ಇತರೆ ಯೋಜನೆಗಳ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಹೆಚ್ಚಿನ ಅನುದಾನಕ್ಕೆ ಸರ್ಕಾರಕ್ಕೆ ಮನವಿ ಸಲ್ಲಿಸಿ ಅಭಿವೃದ್ಧಿ ಸಾಧಿಸುವುದು.

ತರಬೇತಿ ಸಂಯೋಜಕರು ಮತ್ತು ಭೋದಕರು ಆದ ಡಾ॥ ಎಚ್.ಎಮ್. ಸುದರ್ಶನ ಮತ್ತು ಶಿಬಿರಾರ್ಥಿಗಳ ಹೆಸರು ಮತ್ತು ಪರಿಚಯವನ್ನು ಮಾಡಿಕೊಟ್ಟರು. ಅಧ್ಯಯನ ಪ್ರವಾಸದ ನೀರಿಕ್ಷೆಗಳನ್ನು ಪಟ್ಟಿ ಮಾಡಿಸಲಾಗಿದ್ದು, ತರಬೇತಿಯನ್ನು ತಾಲ್ಲೋಕು ಪಂಚಾಯಿತಿ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಉದ್ಘಾಟಿಸಿ, ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತರಬೇತಿಯ ಉದ್ದೇಶಗಳ ಕುರಿತು ವಿವರಣೆ ನೀಡಿದರು. ಶಿಬಿರಾರ್ಥಿಗಳಿಗೆ ಪ್ರಸ್ತುತ ಅಧ್ಯಯನ ಪ್ರವಾಸದ/ಕ್ಷೇತ್ರ ಭೇಟಿ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಾವಳಿಗಳ ಕುರಿತಂತೆ ಶಿಬಿರಾರ್ಥಿಗಳಿಗೆ ತಿಳಿಸಿದರು. ಸಂಯೋಜಕರು ಸಂವಿಧಾನ ತಿದ್ದುಪಡಿ ಪೂರ್ವ ಪಂಚಾಯತ್ ವ್ಯವಸ್ಥೆ, 73ನೇ ಸಂವಿಧಾನ ತಿದ್ದುಪಡಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಮುಖ ಅಂಶಗಳ ಕುರಿತ ಮಾಹಿತಿಯನ್ನು ನೀಡಿದರು. ತುಮಕೂರು ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಅಧ್ಯಯನ ಪ್ರವಾಸದ ಸದುಪಯೋಗಪಡಿಸಿಕೊಳ್ಳಿ ಎಂಬ ನುಡಿಗಳನ್ನಾಡಿ ಹಸಿರು ನಿಶಾನೆ ತೋರಿಸುವುದರ ಮೂಲಕ ಅಧ್ಯಯನ ಪ್ರವಾಸಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿದರು.

ಅಂತರ ಜಿಲ್ಲಾ ಅಧ್ಯಯನ ಪ್ರವಾಸಕ್ಕೆ ತುಮಕೂರು ತಾಲ್ಲೂಕು ಪಂಚಾಯಿತಿಯಲ್ಲಿ ಎಲ್ಲರೂ ಪರಸ್ಪರ ಪರಿಚಯ ಮಾಡಿಕೊಂಡು ಹಲವಾರು ನಿರೀಕ್ಷೆ ಮತ್ತು ಪ್ರಶ್ನೆಗಳೊಂದಿಗೆ ಅಧ್ಯಯನ ಪ್ರವಾಸ ಇನ್ನೂ ಪರಿಣಾಮಕಾರಿಯಾಗಿ ಇನ್ನೊಬ್ಬರಿಗೆ ಮಾದರಿಯಾಗಲು ವಿಕೇಂದ್ರೀಕರಣ ಆಡಳಿತ ವ್ಯವಸ್ಥೆ, ಇನ್ನೂಸಮಾಜ ಮುಖಿ ಆಡಳಿತ ನಡೆಸಲು ಪ್ರೇರೇಪಿಸಲು, ಬೇರೆ ಜಿಲ್ಲೆಯಲ್ಲಿ ಉತ್ತಮ ಸಾಧನೆ ಮಾಡಿರುವ ಪಂಚಾಯಿತಿಗಳಿಗೆ ಭೇಟಿ, ಸಂವಾದ, ನಮಗೆ ಪ್ರೇರಣೆಯಾಗುವ ಸದಾಶಯದೊಂದಿಗೆ ಚಿಕ್ಕಮಗಳೂರು ಜಿಲ್ಲೆಗೆ ನಮ್ಮ ತುಮಕೂರು ಜಿಲ್ಲೆಯ 2015–16 ಮತ್ತು 2016–17ನೇ ಸಾಲಿನ 10 ತಾಲ್ಲೂಕಿನ ತಲಾ 2 ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮೂರು ದಿನಗಳ ಅಧ್ಯಯನ ಪ್ರವಾಸದಂತೆ ಚಿಕ್ಕಮಗಳೂರಿನ ಕೊಪ್ಪ ತಾಲ್ಲೂಕು ಪಂಚಾಯಿತಿ, ಅಸಗೋಡು ಗ್ರಾಮ ಪಂಚಾಯಿತಿ ಮತ್ತು ಶೃಂಗೇರಿ ತಾಲ್ಲೂಕಿನ ಮೆಣಸೆ ಗ್ರಾಮ ಪಂಚಾಯಿತಿಯನ್ನು ಭೇಟಿ ಮಾಡಿಸಲಾಯಿತು.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಪಂಚಾಯಿತಿಯು ಹಲವಾರು ವಿಷಯಗಳಲ್ಲಿ ರಾಜ್ಯದಲ್ಲಿಯೇ ಉತ್ತಮ ಆಡಳಿತ ನಿರ್ವಹಣೆಯ ಪ್ರಸಿದ್ಧಿ ಪಡೆದಿದೆ. ಕೆಲವು ದಶಕಗಳ ಹಿಂದೆ ಕೊಪ್ಪ ತಾಲ್ಲೂಕಿನಲ್ಲಿ ವಾಸಿಸುವುದೇ ಒಂದು ದುರ್ಗಮ ಸ್ಥಳದಲ್ಲಿ ವಾಸ ಮಾಡಿದ ಅನುಭವ ಎಂಬಂತೆ ಬಿಂಬಿಸಲಾಗಿತ್ತು. ಸುಂದರ ಮಲೆನಾಡಿನ ತಾಣವಾಗಿರುವ ಕೊಪ್ಪ ತಾಲ್ಲೂಕು ಯಾವುದೇ ಪ್ರವಾಸಿ ತಾಣಕ್ಕಿಂತ ಕಡಿಮೆ ಇಲ್ಲದಂತೆ ಕಾಫೀ ತೋಟ, ಟೀ ತೋಟ, ಸುಂದರವಾದ ಕಾಡು ಬೆಟ್ಟ ಗುಡ್ಡಗಳನ್ನೊಳಗೊಂಡಂತೆ ಉತ್ತಮವಾದ ಪ್ರಕೃತಿಯನ್ನು ಹೊಂದಿದ್ದು ಕಣ್ಮನ ತಣಿಸಿತು.

ಕೊಪ್ಪ ತಾಲ್ಲೂಕು ಪಂಚಾಯಿತಿಗೆ ಭೇಟಿ ನೀಡುತ್ತಿದ್ದಂತೆ ಅಲ್ಲಿನ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಮತ್ತು ಇತರೆ ಸಿಬ್ಬಂದಿ ವರ್ಗದವರು ತುಂಬು ಹೃದಯದಿಂದ ಎಲ್ಲಾ ಅಧ್ಯಕ್ಷ/ಉಪಾಧ್ಯಕ್ಷರನ್ನು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಮತ್ತು ಅನಸಾರಾಗ್ರಾಪಂ ಸಂಸ್ಥೆಯ ಬೋಧಕರುಗಳನ್ನು ಬರಮಾಡಿಕೊಂಡರು. ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲರನ್ನು ಸ್ವಾಗತಿಸುತ್ತಾ ಅತಿಥಿಗಳ ಪರಿಚಯವನ್ನು ಮಾಡಿಕೊಂಡರು. ಅಧ್ಯಕ್ಷರು ತಮ್ಮ ತಾಲ್ಲೂಕು ಪಂಚಾಯಿತಿ ಬೇರೆ ಗ್ರಾಮ ಪಂಚಾಯಿತಿಗಳಿಗಿಂತ ಹೇಗೆ ಭಿನ್ನವೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾ ಎಸ್ಕಾಂ ಅನುದಾನದ ಸದ್ಬಳಕೆ ಮತ್ತು ಬಿಲ್ ಪಾವತಿಯ ವಿಚಾರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬೀದಿ ದೀಪ ಮತ್ತು ಕುಡಿಯುವ ನೀರು ಸ್ಥಾವರಗಳ ವಿದ್ಯುತ್ ನಿರ್ವಹಣೆ ಮತ್ತು ಬಿಲ್ ಪಾವತಿಯ ವರದಿ ಮತ್ತು ತಮ್ಮ ಅಧಿಕಾರಿಗಳು ಎಸ್ಕಾಂ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಮನ್ವಯತೆ ಸಾಧಿಸಿ, ಎಸ್ಕಾಂ ಬಿಲ್ಲುಗಳನ್ನು ಪ್ರತಿ ಮಾಹೆಯು ಪಾವತಿಸುತ್ತಾ, ಉಳಿದ ಶಾಸನಬದ್ಧ ಹಣವನ್ನು ಮತ್ತು 14ನೇ ಹಣಕಾಸು ಅನುದಾನವನ್ನು ಗ್ರಾಮ ಪಂಚಾಯಿತಿಗಳ ತಮ್ಮ ಪಂಚಾಯಿತಿಗಳ ಆಡಳಿತ ಮತ್ತು ಅಭಿವೃದ್ಧಿಗೆ ಹೇಗೆ ಬಳಸಿಕೊಳ್ಳುತ್ತೇವೆಂದು ವಿವರಿಸಿದರು.

ಅಧ್ಯಕ್ಷರು ತಮ್ಮ ತಾಲ್ಲೂಕು ಪಂಚಾಯಿತಿಯ ಕಾರ್ಯ ವಿದಾನದ ಬಗ್ಗೆ ವಿವರಿಸುತ್ತಾ ಈ ಕೆಳಕಂಡ ವಿಚಾರಗಳಲ್ಲಿ ಹಂಚಿಕೊಂಡರು.

- ಎಸ್ಕಾಂ ಬಿಲ್ ಪಾವತಿಯನ್ನು ಸಂಪೂರ್ಣವಾಗಿ ಮಾಡಿದ್ದಾಗ್ಯೂ ಅನುದಾನವನ್ನು ಉಳಿಸಿಕೊಂಡು ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದು.
- ಶೇಕಡ 90 ಕ್ಕಿಂತ ಹೆಚ್ಚು ಕರವಸೂಲಿಯನ್ನು ಮಾಡುವ ಹಾಗೆ ಗ್ರಾಮ ಪಂಚಾಯಿತಿಯನ್ನು ಪ್ರೋತ್ಸಾಹಿಸುವುದು.

- ಗ್ರಾಮ ವಿಕಾಸ, 14ನೇ ಹಣಕಾಸು ಮತ್ತು ಇತರೆ ಯೋಜನೆಗಳ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಹೆಚ್ಚಿನ ಅನುದಾನಕ್ಕೆ ಸರ್ಕಾರಕ್ಕೆ ಮನವಿ ಸಲ್ಲಿಸಿ ಅಭಿವೃದ್ಧಿ ಸಾಧಿಸುವುದು.

## ಚಿಕ್ಕಮಗಳೂರಿನ ಕೊಪ್ಪ ತಾಲ್ಲೂಕಿನ ಅಸಗೋಡು ಗ್ರಾಮ ಪಂಚಾಯ್ತಿಯ ಭೇಟಿ ವರದಿ

ಚಿಕ್ಕಮಗಳೂರಿನ ಕೊಪ್ಪ ತಾಲ್ಲೂಕಿನ ಅಸಗೋಡು ಗ್ರಾಮ ಪಂಚಾಯ್ತಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಗ್ರಾಮ ಪಂಚಾಯ್ತಿಯು ಗಾಂಧಿ ಗ್ರಾಮ ಪುರಸ್ಕಾರ ತೆಗೆದುಕೊಳ್ಳಲು ತಾನು ಪಡೆದಿದ್ದ ವಿಶೇಷ ಅರ್ಹತೆಗಳ ಬಗ್ಗೆ ತಿಳಿಸಿದರು. ಅಧ್ಯಕ್ಷರಾದ ಡಿ.ವಿ.ಶ್ರೀನಿವಾಸನಾಯಕ ತಮ್ಮ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯರ ಭಾಗವಹಿಸುವಿಕೆಯು ಉತ್ತಮವಾಗಿರುವುದರಿಂದ ಸಾಧನೆಗೆ ಸುಲಭವಾಯಿತು.

ಅಸಗೋಡು ಗ್ರಾಮ ಪಂಚಾಯ್ತಿಯು 4 ಗ್ರಾಮಗಳನ್ನು ಹೊಂದಿದ್ದು, ಅದರ ಪ್ರತಿನಿಧಿಗಳಾಗಿ 7 ಜನ ಸದಸ್ಯರಿದ್ದಾರೆ. ಗ್ರಾಮ ಪಂಚಾಯ್ತಿಯು 664 ಕುಟುಂಬಗಳೊಂದಿಗೆ 2600 ಜನಸಂಖ್ಯೆಯನ್ನು ಹೊಂದಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೊಂದಿಗೆ ಹಲವರು ಕಾರ್ಯನಿರ್ವಹಿಸುತ್ತಾರೆ. ಅವರಲ್ಲಿ ಚುರುಕಾಗಿ ಕಾರ್ಯನಿರ್ವಹಿಸುವ ಕಂಪ್ಯೂಟರ್ ಆಪರೇಟರ್ ಮತ್ತು ಬಿಲ್‌ಕಲೆಕ್ಟರ್, ಎರಡೂ ಕಾರ್ಯವನ್ನು ಒಬ್ಬರೇ ನಿರ್ವಹಿಸುವ ಚೇತನ ಗಮನ ಸೆಳೆದರು ಅವರ ಚುರುಕಾದ ಬುದ್ಧಿ ಮತ್ತೆ ಗ್ರಾಮ ಪಂಚಾಯಿತಿಗೆ ಒಂದು ವರವಾಗಿದೆ ಎನಿಸಿತು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶೈಲಜರವರ ಮಾಹಿತಿಯಂತೆ ಗ್ರಾಮ ಪಂಚಾಯಿತಿಗೆ ಗಾಂಧಿ ಗ್ರಾಮ ಪುರಸ್ಕಾರ ದೊರೆಯಲು ಅದರ ಮಾನದಂಡದಂತೆ ಈ ಕೆಳಗಿನ ಅಂಶಗಳು ಸಹಾಯ ಮಾಡಿವೆ.

- ತೆರಿಗೆ ವಸೂಲಾತಿ ಡಿ.ಸಿ.ಬಿ 94% ಸಾಧನೆ
- MGNREGA ಯೋಜನೆಯಲ್ಲಿ 84% ಸಾಧನೆ
- ವಸತಿ ಯೋಜನೆಯಲ್ಲಿ 100% ಸಾಧನೆ
- 14ನೇ ಹಣಕಾಸು ಯೋಜನೆಯಲ್ಲಿ 89% ಸಾಧನೆ
- ಶೇಕಡ 100 ಶೌಚಾಲಯ ನಿರ್ಮಾಣ ಬಯಲು ಬಹಿರ್ದೆಸೆ ಮುಕ್ತ
- ವಿದ್ಯುಚ್ಛಕ್ತಿ ಬಿಲ್ 100% ಪಾವತಿ
- ಶೇಕಡ 25%ರ ಎಸ್.ಸಿ/ಎಸ್.ಟಿ ಅನುದಾನಕ್ಕೆ ಫಲಾನುಭವಿಗಳ ಆಯ್ಕೆಗೆ 90% ಅರ್ಜಿಯನ್ನು ಗ್ರಾಮ ಸಭೆಯಲ್ಲಿ ಪಡೆದವುಗಳಲ್ಲಿ ಆಯ್ಕೆ ಮಾಡುವುದು.
- ಗ್ರಾಮವಾರು ನೀರು ಮತ್ತು ನೈರ್ಮಲ್ಯ ಸಮಿತಿಗಳಿದ್ದು ಅವುಗಳು ಸಂಪೂರ್ಣ ಕಾರ್ಯೋನ್ಮುಖವಾಗಿರುವುದು.
- ಪ್ರತಿ ತಿಂಗಳು ಸ್ಥಾಯಿ ಸಮಿತಿಗಳ ಸಭೆ ನಡೆಸುವುದು.

ಮೆಣಸೆ ಗ್ರಾಮ ಪಂಚಾಯಿತಿ ನಾಡಿನ ಪ್ರಸಿದ್ಧ ಶ್ರದ್ಧಾ ಕೇಂದ್ರವಾದ ಆದಿಶಂಕರರು ಸ್ಥಾಪಿಸಿದ ಶ್ರೀಕ್ಷೇತ್ರ ಶೃಂಗೇರಿಯಿಂದ ಕೇವಲ 3 ಕಿ.ಮೀ. ದೂರದಲ್ಲಿ ತುಂಗಾನದಿ ದಡದಲ್ಲಿ ಮೆಣಸೆ ಗ್ರಾಮವಿದೆ. ಸದರಿ ಗ್ರಾಮ ಪಂಚಾಯಿತಿ ಸುಮಾರು 3961 ಹೆಕ್ಟೇರ್ ವಿಸ್ತೀರ್ಣವಿದ್ದು ಮಜಿರೆ ಗ್ರಾಮಗಳು ಸೇರಿದಂತೆ 7 ಗ್ರಾಮಗಳಿವೆ ಈ ಗ್ರಾಮ ಪಂಚಾಯಿತಿ ಒಟ್ಟು ಜನಸಂಖ್ಯೆ 6211 ಗಂಡು 3222 ಹೆಣ್ಣು 2981 ಇದೆ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಸಂಸ್ಕೃತ ವಿದ್ಯಾಪೀಠ, ಒಂದು ಪ್ರೌಢಶಾಲೆ,7 ಸರ್ಕಾರಿಹಿರಿಯ ಮತ್ತು ಕಿರಿಯ ಪಾಠಶಾಲೆಗಳಿವೆ, 15 ಅಂಗನವಾಡಿಗಳಿವೆ. ಈ ಗ್ರಾಮದಲ್ಲಿ ಪಂಚಾಯಿತಿಯಲ್ಲಿ ರಾಜ್ಯ ಮಟ್ಟದ ಕೆಸರು ಗದ್ದೆ, ಹಗ್ಗಜಗ್ಗಾಟ ಸ್ಪರ್ದೆ ವಿಶೇಷವಾಗಿದೆ.

ಅಭಿವೃದ್ಧಿ ಅಧಿಕಾರಿಗಳು ನೀಡಿದ ಮಾಹಿತಿಯಂತೆ ಬೇರೆ ಪಂಚಾಯಿತಿಗಳಿಗಿಂತ ವಿಭಿನ್ನ ವರದಿಯನ್ನು ತನ್ನ ಪ್ರಭುದ್ಧ ವಾಕ್ಚಾತುರ್ಯದಿಂದ ವಿವರಿಸಿದರು.

1. **ಪಂಚಾಯಿತಿ ವ್ಯಾಪ್ತಿಯಲ್ಲಿ ನೀರು ಮತ್ತು ಬೀದಿ ದೀಪ ಸ್ಥಾವರಗಳ ವಿದ್ಯುತ್ ಬಿಲ್ ನಿರ್ವಹಣೆ ಹಾಗೂ ನಿಯಮಿತವಾಗಿ ಮೀಟರ್‌ಗಳ ಲಾಂಗ್ ಬುಕ್‌ಗಳನ್ನು ನೀರು ನಿರ್ವಾಹಕರಿಂದ ಲಾಂಗ್ ಬುಕ್ ನಿರ್ವಹಣೆ.**
2. **ಪಟ್ಟಣಪಂಚಾಯಿತಿಯ ಸಹಯೋಗದೊಂದಿಗೆ ಘನ ತ್ಯಾಜ್ಯ ನಿರ್ವಹಣೆ**
3. **ಪ್ರತಿ ವರ್ಷ ಶೇ 90% ಮತ್ತು ಅದಕ್ಕಿಂತ ಹೆಚ್ಚು ಕರ ವಸೂಲಿ.**
4. **ಗ್ರಾಮ ಸಭೆಯಲ್ಲಿಯೇ ಫಲಾನುಭವಿಗಳ ಆಯ್ಕೆ**
5. **ಆಡಿಟ್ ವರದಿಯ ಆಕ್ಷೇಪಣೆ ಮತ್ತು ವಸೂಲಿಗಳ ಬಹು ಪಾಲು ತೀರುವಳಿ.**
6. **ಸರ್ಕಾರಿ ಕಾರ್ಯಕ್ರಮ ಅತ್ಯುತ್ತಮ ಸಂವಹನ ಮತ್ತು ಮಾಧ್ಯಮಗಳಲ್ಲಿ ಪ್ರಚಾರ**
7. **ಗ್ರಾಮ ಸಭೆ, ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆ, ಜಮಾ ಬಂದಿ ಮತ್ತಿತರ ಕಾರ್ಯಕ್ರಮಗಳ ಮೂಲಕ ಸಮಾಜಕ್ಕೆ ಉತ್ತರದಾಯಿತ್ವ**
8. **ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ ಸಕ್ರೀಯ ನಿರ್ವಹಣೆ**
9. **ಪಂಚಾಯಿತಿ ಮೇಲಿನ ಕೇಸ್‌ಗಳ ಸಮರ್ಥ ನಿರ್ವಹಣೆ ಮತ್ತು ವಿಲೇವಾರಿ.**
10. **ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಅನುದಾನ ದೊರಕಿಸಿಕೊಂಡು ಉತ್ತಮ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ.** ■

ವರದಿ



ಜಿ. ಮಲ್ಲಿಕಾರ್ಜುನ ಸ್ವಾಮಿ

ಬೋಧಕರು (ಗ್ರಾಮೀಣಾಭಿವೃದ್ಧಿ)
ಅ.ನ.ಸಾ.ರಾ.ಗ್ರಾ.&ಪಂ.ರಾ. ಸಂಸ್ಥೆ
ಮೈಸೂರು

**ಶಿವಮೊಗ್ಗ ಜಿಲ್ಲೆಯ 17 ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಫೆಬ್ರವರಿ 20, 2018 ರಿಂದ ಮೂರು ದಿನಗಳ ಅಧ್ಯಯನ ಪ್ರವಾಸಕ್ಕಾಗಿ ದಾವಣಗೆರೆ ಜಿಲ್ಲಾ ವ್ಯಾಪ್ತಿಯ ಆಯ್ದ ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗೆ ಭೇಟಿ ನೀಡಿ, ವಿಚಾರ ವಿನಿಮಯಗಳ ಮೂಲಕ ಜ್ಞಾನಾರ್ಜನೆಯ ವೇದಿಕೆಯನ್ನು ಸಿದ್ಧಪಡಿಸಲಾಗಿತ್ತು.**

# ಇದಿರ ಹಳಿಯಲು ಬೇಡ...

**ಶಿವಮೊಗ್ಗ ಜಿಲ್ಲೆಯ ಗಾಂಧಿ ಗ್ರಾಮ ಪುರಸ್ಕೃತ 15 ಗ್ರಾಮ ಪಂಚಾಯತಿಗಳ ಮೂರು ದಿನದ ಅಧ್ಯಯನ ಪ್ರವಾಸದ ಅನುಭವಾತ್ಮಕ ಕಲಿಕಾ ವರದಿ.**

ಸಾಮಾನ್ಯ ಮನುಷ್ಯರಲ್ಲಿ ಆಲೋಚನೆ ಹೇಗಿರುತ್ತದೆಂದರೆ ನಾನೇ ಅಥವಾ ನಾವೇ ಸರಿ, ಎಲ್ಲವೂ ನನಗೆ ತಿಳಿದಿದೆ. ನಾನೇಕೆ ಬೇರೆಯವರಿಂದ ಕಲಿಯಬೇಕು ಎನ್ನುವ ಒಣಪ್ರತಿಷ್ಠೆ ಇರುತ್ತದೆ. ಅಂತಹವರಿಗೆ ನಿಜಕ್ಕೂ ತಿಳಿಯಬಯಸುವುದೇನೆಂದರೆ, ಕಲಿಕೆ ಎನ್ನುವುದು ಹೆಮ್ಮರವಲ್ಲ ಕೆಲವೊಮ್ಮೆ ಸಣ್ಣ ಸಣ್ಣ ವಿಚಾರಗಳೂ ಸಹಾ ದೊಡ್ಡ ಪ್ರಮಾಣದ ಬದಲಾವಣೆಗೆ ನಾಂದಿಯಾಗುತ್ತದೆ. ಒಂದು ದೂರದ ಪಯಣ ಪ್ರಾರಂಭವಾಗುವುದು ಕೂಡಾ ಮೊದಲ ಹೆಜ್ಜೆಯಿಂದಲೇ ಎನ್ನುವುದನ್ನು ನಾವು ಮರೆಯಬಾರದು. ಕಲಿಕಾ ಪ್ರಕ್ರಿಯೆಯು ತನ್ನಷ್ಟಕ್ಕೆ ತಾನೇ ಆಗುವುದಿಲ್ಲ, ಅದಕ್ಕಾಗಿ ಕೆಲವಷ್ಟಾದರೂ ಪ್ರಯತ್ನ ಮಾಡಬೇಕಿರುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಈ ಪ್ರಯತ್ನ ಇನ್ನೂ ಕಬ್ಬಿಣದ ಕಡಲೆ. ಸಾರ್ವಜನಿಕರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಸಮಯೋಚಿತವಾಗಿ ಒದಗಿಸುವುದು ಕಷ್ಟ ಸಾಧ್ಯ. ಜನ ಸಾಮಾನ್ಯರ ಬೇಡಿಕೆಯನ್ನಾಧರಿಸಿ, ಲಭ್ಯವಿರುವ ನಿಗಧಿತ ಅನುದಾನವನ್ನು ಗಮನದಲ್ಲಿರಿಸಿಕೊಂಡು ಉತ್ತಮ ಸೇವೆಗಳನ್ನು ಒದಗಿಸುವುದು ನಿಜಕ್ಕೂ ಸವಾಲೇ ಸರಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅದರಲ್ಲಿಯೂ ಗ್ರಾಮ ಪಂಚಾಯತಿಗಳು ಈ ನಿಟ್ಟಿನಲ್ಲಿ ಕಳೆದ ಒಂದಷ್ಟು ವರ್ಷಗಳಿಂದ ಮಾಡಿರುವ ಸಾಧನೆ, ವಿವರಣೆಗೆ ನಿಲುಕದಂತಹ ಪ್ರಯತ್ನ.

ಇಂತಹ ಗ್ರಾಮ ಪಂಚಾಯತಿಗಳು ಬಾವಿ ಕಪ್ಪೆಯಂತಾಗದೇ ಅಲ್ಲಿಂದ ಹೊರಬಂದು, ತಮ್ಮದೇ ಜಿಲ್ಲೆಯೊಳಗಿನ ಬೇರೆ ಬೇರೆ ಗ್ರಾಮ ಪಂಚಾಯತಿಗಳು ಮತ್ತು ಸಮೀಪದ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತಿಗಳು ತಮ್ಮ ನಿಗಧಿತ ಭೌಗೋಳಿಕ ಪ್ರದೇಶದಲ್ಲಿ, ಲಭ್ಯವಿರುವ ಅನುದಾನವನ್ನು ಬಳಸಿಕೊಂಡು, ಸೃಜನಾತ್ಮಕವಾಗಿ ಚಿಂತಿಸಿ ಕೈಗೊಂಡಿರುವ ಚಟುವಟಿಕೆಗಳ ಪ್ರಯತ್ನ ಹಾಗೂ ಸಾಧನೆಯ ಬಗ್ಗೆ ತಿಳಿದುಕೊಂಡು, ಕೆಲವನ್ನಾದರೂ ಅನುಕರಿಸುವ ಮೂಲಕ ಗ್ರಾಮೀಣ ಪ್ರದೇಶದ ಜನರ ಜೀವನದ ಗುಣಮಟ್ಟವನ್ನು ಉತ್ತಮಪಡಿಸಲು ಸಾಧ್ಯವಾಗಲೆಂದು ಭಾವಿಸಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳ ಒಳಪಟ್ಟು ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾದ ಗ್ರಾಮ ಪಂಚಾಯತಿಗಳನ್ನು ಗುರುತಿಸಿ, ಅವುಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಅಧ್ಯಯನ ಪ್ರವಾಸಕ್ಕೆ ಕರೆದೊಯ್ದು, ಅವುಗಳ ಪರಿಚಯಿಸುವ ಮತ್ತು ಅನುಭವಾತ್ಮಕ ಕಲಿಕೆಗೆ ಒಂದು ಮುನ್ನುಡಿ ಬರೆದಿದೆ.

ಈ ದಿಸೆಯಲ್ಲಿ ಶಿವಮೊಗ್ಗ ಜಿಲ್ಲೆಯ 17 ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಫೆಬ್ರವರಿ 20, 2018 ರಿಂದ ಮೂರು ದಿನಗಳ ಅಧ್ಯಯನ ಪ್ರವಾಸಕ್ಕಾಗಿ ದಾವಣಗೆರೆ ಜಿಲ್ಲಾ ವ್ಯಾಪ್ತಿಯ ಆಯ್ದ ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗೆ ಭೇಟಿ ನೀಡಿ, ವಿಚಾರ ವಿನಿಮಯಗಳ ಮೂಲಕ ಜ್ಞಾನಾರ್ಜನೆಯ ವೇದಿಕೆಯನ್ನು ಸಿದ್ಧಪಡಿಸಲಾಗಿತ್ತು.

## ಅಧ್ಯಯನ ಪ್ರವಾಸದ ಉದ್ದೇಶಗಳು

- ಸಮವರ್ತಿ ಗುಂಪಿನ ಸದಸ್ಯರುಗಳಿಂದ ಅವರ ಗ್ರಾಮ ಪಂಚಾಯತಿಯಲ್ಲಿ ಮಾಡಿರುವ ಸಾಧನೆ ಮತ್ತು ಉತ್ತಮ ಅಭ್ಯಾಸಗಳನ್ನು ಪರಸ್ಪರ ಹಂಚಿಕೊಳ್ಳುವುದು

- ನೆರೆಯ ಜಿಲ್ಲೆಯಾದ ದಾವಣಗೆರೆ ಜಿಲ್ಲೆಯ ವ್ಯಾಪ್ತಿಯ ಆಯ್ದ ಗ್ರಾಮ ಪಂಚಾಯತಿಗಳು ಕೈಗೊಂಡಿರುವ ಯಶೋಗಾಥೆಗಳು ಮತ್ತು ಉತ್ತಮ ಅಭ್ಯಾಸಗಳನ್ನು ಪರಿಚಯಿಸುವ ಪ್ರಯತ್ನ
- ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ನಡುವಿನ ಸಮನ್ವಯತೆಯನ್ನು ಹೆಚ್ಚಿಸಲು ಮತ್ತು ಕಾಪಾಡಲು ಅಗತ್ಯ ವಿಚಾರಗಳ ಚರ್ಚೆ.

ಮೊದಲ ದಿನದಂದು ಶಿವಮೊಗ್ಗ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ಎಲ್ಲರೂ ಸೇರಲು ತಿಳಿಸಲಾಗಿತ್ತು. ಅದರಂತೆ ಆರು ತಾಲ್ಲೂಕಿನ (ಸಾಂಕ್ರಾಮಿಕ ರೋಗ ಹರಡಿರುವ ಕಾರಣ ಭದ್ರಾವತಿ ತಾಲ್ಲೂಕನ್ನು ಹೊರತುಪಡಿಸಿ) 15 ಗ್ರಾಮ ಪಂಚಾಯತಿಗಳಿಂದ ಒಟ್ಟು 25 ಜನರು ಭಾಗವಹಿಸಿದ್ದರು ಅವರುಗಳಲ್ಲಿ ಅಧ್ಯಕ್ಷರು ಅಥವಾ ಅವರು ಸೂಚಿಸಿದ ಇತರೆ ಸದಸ್ಯರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅಥವಾ ಇತರೆ ಸಿಬ್ಬಂದಿಗಳು ಸೇರಿದ್ದಾರೆ. ಸದರಿ ಜಿಲ್ಲೆಯಲ್ಲಿನ ಸಂಸ್ಥೆಯ ಒಬ್ಬ ವಿಕೇಂದ್ರೀಕೃತ ತರಬೇತಿ ಸಂಯೋಜಕರು ಭಾಗವಹಿಸಿದ್ದರು. 7 ಮಹಿಳಾ ಸದಸ್ಯರಿದ್ದರೆ ಉಳಿಕೆ 18 ಪುರುಷರಿದ್ದರು. ಸಂಸ್ಥೆಯ ಪ್ರತಿನಿಧಿಗಳಾಗಿ ಮತ್ತು ಅಧ್ಯಯನ ಪ್ರವಾಸದ ಸಂಯೋಜಕರಾದ ಶ್ರೀ ಜಿ. ಮಲ್ಲಿಕಾರ್ಜುನ ಸ್ವಾಮಿ ಮತ್ತು ಸಹ ಸಂಯೋಜಕರಾಗಿ ಶ್ರೀ ಎಂ. ಟಿ. ರಹಮಾನ್‌ರವರು ಅಧ್ಯಯನ ಪ್ರವಾಸದ ಸುಗಮಗಾರಿಕೆ ಮಾಡಿರುತ್ತಾರೆ.

## ಆ ಮೂರು ದಿನಗಳು...

ನೋಂದಣಿಯ ನಂತರ, ಕಾರ್ಯಕ್ರಮಕ್ಕೆ ಔಪಚಾರಿಕವಾಗಿ ಚಾಲನೆಯನ್ನು ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ (ಅಭಿವೃದ್ಧಿ) ಗಳಾದ ಡಾ. ರಂಗಸ್ವಾಮಿಯವರು ನೀಡಿದರು. ಭಾಗವಹಿಸಿದ್ದ ಎಲ್ಲರನ್ನೂ ಉದ್ದೇಶಿಸಿ ಮಾತನಾಡುತ್ತಾ, ಅಧ್ಯಯನ ಪ್ರವಾಸ ಅನುಕೂಲತೆಗಳನ್ನು ವಿವರಿಸಿದರು. ಹಿರಿಯರು ಹೇಳಿರುವ 'ದೇಶ ಸುತ್ತಬೇಕು ಮತ್ತು ಕೋಶ ಓದಬೇಕು' ಎಂಬ ನಾಣ್ನುಡಿಯನ್ನು ನೆನಪಿಸಿದರು. ಕ್ಷೇತ್ರಭೇಟಿ ನೀಡುವ ಸ್ಥಳದಲ್ಲಿನ ಅಭ್ಯಾಸಗಳನ್ನು ಕಲಿತು, ನಿಮ್ಮ ನಿಮ್ಮ ಪಂಚಾಯತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಿ ಎಂದು ಹೇಳಿದರು. ಈ ಸುಯೋಗವನ್ನು ಮಾಡಿಕೊಟ್ಟಿರುವ ಅ.ನ.ಸಾ.ರಾ.ಗ್ರಾ.ಪಂ.ರಾ. ಸಂಸ್ಥೆಗೆ ಕೃತಜ್ಞತೆಯನ್ನು ತಿಳಿಸಿದರು. ಅಧ್ಯಯನ ಪ್ರವಾಸದ ಸಂದರ್ಭ ಎಲ್ಲವೂ ಸುಲಲಿತವಾಗಿ ಜರುಗಲಿ ಎಂದು ಹಾರೈಸಿದರು.

ಅಧ್ಯಯನ ಪ್ರವಾಸ ಕಾರ್ಯಕ್ರಮದ ಸಂಯೋಜಕರು ಕ್ಷೇತ್ರಭೇಟಿಯ ಉದ್ದೇಶ ಮತ್ತು ಮೂರುದಿನಗಳ ದಿನಚರಿಯನ್ನು ವಿವರಿಸಿದರು. ಸದರಿ ಭೇಟಿಯ



ಸಂದರ್ಭದಲ್ಲಿ ಎಲ್ಲರೂ ನಡೆದುಕೊಳ್ಳಬೇಕಿರುವ ವಿಚಾರಗಳ ಬಗ್ಗೆ ಮನವರಿಕೆ ಮಾಡಿದರು. ಶ್ರೀ ಸಸಿಗೊಳ್ಳಿ ರವೀಂದ್ರ, ವಿಕೇಂದ್ರೀಕೃತ ತರಬೇತಿ ಸಂಯೋಜಕರು 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993' ಗೆ ಸಂಬಂಧಿಸಿದ ಕೆಲವು ಆಯ್ದ ಪ್ರಕರಣಗಳನ್ನು ಸಂವಾದದ ಮೂಲಕ ಚರ್ಚಿಸಲಾಯಿತು. ಅಪರಾಹ್ನದ ಅವಧಿಯಲ್ಲಿ ಭಾಗವಹಿಸಿರುವ ಗ್ರಾಮ ಪಂಚಾಯತಿಗಳು ಕೈಗೊಂಡಿರುವ ಉತ್ತಮ ಅಭ್ಯಾಸಗಳು ಮತ್ತು ಸಾಧನೆಗಳ ಬಗ್ಗೆ ಒಬ್ಬರ ನಂತರ ಒಬ್ಬರಂತೆ ವಿಷಯ ಮಂಡನೆ ಮಾಡಲು ತಿಳಿಸಲಾಗಿ, ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿ ಮತ್ತು ಅಧಿಕಾರಿಯವರು ನಡೆಸಿಕೊಟ್ಟಿರುತ್ತಾರೆ.

**ಒಟ್ಟಾರೆ ಜಿಲ್ಲೆಯಿಂದ ಸಂಗ್ರಹಿಸಿದ ಉತ್ತಮ ಅಭ್ಯಾಸಗಳು ಅಥವಾ ಯಶೋಗಾಥೆಗಳ ಸಂಕ್ಷಿಪ್ತ ಮಾಹಿತಿ ಈ ಕೆಳಗಿನಂತಿದೆ.**

- ತೆರಿಗೆ ಸಂಗ್ರಹಣೆಯ ಪ್ರಮಾಣ ಸರಾಸರಿ 85% ಯಿಂದ 100% (ಕಳೆದ ವರ್ಷಗಳ ಬಾಕಿಯನ್ನು ಪರಿಗಣಿಸಿದೆ)
- ಬೀದಿದೀಪಗಳ ವಾರ್ಷಿಕ ನಿರ್ವಹಣೆಯ ಉಸ್ತುವಾರಿಯನ್ನು ಟೆಂಡರ್ ಮೂಲಕ ಗುರುತಿಸಿ ನಿರ್ವಹಿಸುತ್ತಿರುವುದು.
- ಧ್ವನಿ ವಾಹಕವನ್ನು ಪಂಚಾಯತಿಯಿಂದ ಖರೀದಿಸಿ, ಕಡಿಮೆ ವೆಚ್ಚದಲ್ಲಿ ಗ್ರಾಮ ಪಂಚಾಯತಿಯ ಸಾರ್ವಜನಿಕ ಪ್ರಚಾರಗಳನ್ನು ಕೈಗೊಂಡಿರುವುದು.
- ಪಾರದರ್ಶಕತೆಯನ್ನು ಎತ್ತಿ ಹಿಡಿಯುವ ಪ್ರಯತ್ನದಲ್ಲಿ, ಸ್ವಂತ ಸಂಪನ್ಮೂಲ ಸಂಗ್ರಹಣೆಯ ಮಾಹಿತಿಯನ್ನು ಸಂಬಂಧಿಸಿದ ಪಾವತಿದಾರರ ಮೊಬೈಲ್‌ಗೆ ಮೆಸೆಜ್ ಕಳುಹಿಸುವ ಆ್ಯಪ್ ಸಿದ್ಧಪಡಿಸಿದೆ.
- 2016–17ನೇ ಸಾಲಿನಲ್ಲಿ 51000 ಮಾನವ ದಿನಗಳನ್ನು ಪೂರೈಸಿದ ಗ್ರಾಮ ಪಂಚಾಯತಿಯು ರೋಜ್‌ಗಾರ್



ದಿನಾಚರಣೆಯನ್ನು ಕೆಲಸದ ಸ್ಥಳದಲ್ಲೇ ಮಾಡಿ ಕೂಲಿಕಾರರನ್ನು ತೊಡಗಿಸಿರುವುದು. ದಾಖಲೆ ನಿರ್ವಹಣೆಗೂ ಅಷ್ಟೇ ಮಹತ್ವ ನೀಡಿರುವುದು ಮತ್ತೊಂದು ಮೈಲಿಗಲ್ಲು.

- ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಗಳೇ ಗ್ರಾಮದ ಕುಡಿಯುವ ನೀರಿನ ಸರಬರಾಜಿನ ನಿರ್ವಹಣೆ ಮಾಡುತ್ತಿರುವುದು.

ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳದ್ವಯರ ಸಹಕಾರದೊಂದಿಗೆ ಪ್ರಯಾಣಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು. ಅಲ್ಲಿಂದ ನೇರವಾಗಿ ದಾವಣಗೆರೆಯ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗೆ ತಲುಪಿದರು.

ಎರಡನೆಯ ದಿನದಂದು ಬೆಳಗಿನ ಸಿದ್ಧತೆಗಳ ನಂತರದಲ್ಲಿ ಜಿಲ್ಲಾ ಪಂಚಾಯತಿಯಿಂದ ನೋಡಲ್ ಅಧಿಕಾರಿಯಾಗಿ ಬಂದಿದ್ದ ಶ್ರೀ ರಾಮುಭೋವಿಯವರು ತಂಡವನ್ನು ಮೊದಲಿಗೆ ಹರಿಹರ ತಾಲ್ಲೂಕಿನ ವಾಸನ ಗ್ರಾಮ ಪಂಚಾಯತಿಗೆ ಭೇಟಿ ನೀಡಲಾಯಿತು. ಸುಮಾರು 5264 ಜನಸಂಖ್ಯೆಯ 1300ಕ್ಕೂ ಹೆಚ್ಚು ಕುಟುಂಬಗಳಿರುವ ಎರಡು ಕಂದಾಯ ಗ್ರಾಮದ ಪಂಚಾಯತಿಯದು. 13 ಸದಸ್ಯರಿರುವ ಮತ್ತು 7 ಸಿಬ್ಬಂದಿವರ್ಗವಿರುವ ಗ್ರಾಮ ಪಂಚಾಯತಿ, 2015-16ರಲ್ಲಿ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾಗಿದೆ. ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಹೃದಯಪೂರ್ವಕವಾಗಿ ಪಂಚಾಯತಿಗೆ ಬರಮಾಡಿಕೊಂಡರು. ಗ್ರಾಮ ಪಂಚಾಯತಿಯ ಸಂಪೂರ್ಣ ಪರಿಚಯವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಾಮನೂರು ರಾಮನಗೌಡರವರು ನೀಡಿದರು. ಗ್ರಾಮ ಪಂಚಾಯತಿ ನಿರ್ವಹಿಸಿರುವ ಯೋಜನೆ ತಯಾರಿಕೆ ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕಡತ ಮತ್ತು ಇತರೆ ದಾಖಲೆಗಳನ್ನು ತೋರಿಸುತ್ತಾ ವಿವರಿಸಿದರು. ಅಳತೆ ಪುಸ್ತಕಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮತ್ತು ದಾಖಲಾತಿ ನಿರ್ವಹಣೆಯ ಉತ್ತಮ ಅಭ್ಯಾಸವನ್ನು ಶಿವಮೊಗ್ಗ ಜಿಲ್ಲೆಯ ತಂಡವು ಮನಪೂರ್ವಕವಾಗಿ ಪ್ರಶಂಸಿಸಿದರು ಮತ್ತು ತಮ್ಮ ಜಿಲ್ಲೆಯಲ್ಲಿಯೂ ಇದರ ಬಗ್ಗೆ ಚರ್ಚಿಸಿ ಅನುಷ್ಠಾನಕ್ಕೆ ಕ್ರಮವಹಿಸುವುದಾಗಿ ತಿಳಿಸಿದರು.

ಮುಂದೆ, ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿ ಗ್ರಾಮ ಪಂಚಾಯತಿಗೆ ಭೇಟಿ ನೀಡಲಾಯಿತು. ಇದು ಒಂದೇ ಗ್ರಾಮದ ಗ್ರಾಮ ಪಂಚಾಯತಿ, ಸುಮಾರು 4264 ಜನಸಂಖ್ಯೆ ಹೊಂದಿದೆ. ದುಗ್ಗಮ ಎಂಬ ಗ್ರಾಮದೇವತೆಯ ಜಾತ್ರೆಯಿದ್ದ ಕಾರಣ ಸದರಿ ದಿನದಂದು ಚುನಾಯಿತ ಜನಪ್ರತಿನಿಧಿಗಳನ್ನು ಸಂಪರ್ಕಿಸಲು ಸಾಧ್ಯವಾಗಲ್ಲಿಲ್ಲ. ಗ್ರಾಮ ಪಂಚಾಯತಿಯ ಅಧಿಕಾರಿ ಮತ್ತು ಸಿಬ್ಬಂದಿಗಳು ತಂಡವನ್ನು ಸ್ವಾಗತಿಸಿದರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಹೆಚ್. ಸಂಗಪ್ಪರವರು ವಿವರಣೆಯನ್ನು ನೀಡಿದರು. ಪಂಚಾಯತಿ ವ್ಯಾಪ್ತಿಯ ಜನರು ಹೆಚ್ಚು ಕೃಷಿ ಮತ್ತು ವ್ಯವಹಾರಗಳಲ್ಲಿ ಹೆಚ್ಚು ತೊಡಗಿಸಿಕೊಂಡಿರುವುದಾಗಿ ತಿಳಿಸಿದರು. ಹತ್ತಿರದಲ್ಲಿ ಸಕ್ಕರೆ ಕಾರ್ಖಾನೆ ಮತ್ತು ಹೆಚ್ಚಿನ ಸಂಖ್ಯೆಯ ಇಟ್ಟಿಗೆ ತಯಾರಿಕಾ ಘಟಕಗಳಿರುವುದುರಿಂದ ಸಾಮಾನ್ಯವಾಗಿ ದಿನಗೂಲಿಯು ಹೆಚ್ಚಿದ್ದು, ಉದ್ಯೋಗ ಖಾತರಿ ಯೋಜನೆಗೆ ಅಷ್ಟೊಂದು ಒತ್ತು ನೀಡಲು ಸಾಧ್ಯವಾಗಿರುವುದಿಲ್ಲವೆಂದು ಹಂಚಿಕೊಂಡರು. ಗ್ರಾಮದಲ್ಲಿರುವ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಅದರ ಸದ್ಬಳಕೆಗೆ ಜನರಲ್ಲಿ ಅರಿವು ಮೂಡಿಸುವುದರ ಕುರಿತು



ತಿಳಿಸಿದರು. ಗ್ರಾಮ ಪಂಚಾಯತಿಯು ಮುಂದಿನ ದಿನಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಆಡಳಿತ ಮಂಡಳಿ ಆಲೋಚಿಸಿರುವುದರ ಬಗ್ಗೆ ಹಂಚಿಕೊಂಡರು. ಸಂತ ಸಂಪನ್ಮೂಲದ ಸಂಗ್ರಹಣೆಯ ಪ್ರಯತ್ನವನ್ನು ಶಿವಮೊಗ್ಗ ತಂಡವು ಮೆಚ್ಚುಗೆ ವ್ಯಕ್ತಪಡಿಸಿದರು.

ದಿನದಾಂತ್ಯಕ್ಕೆ ಹೊಯ್ಸಳ ರಾಜರು ನಿರ್ಮಿಸಿದ ಹರಿಹರೇಶ್ವರ ದೇವಾಲಯಕ್ಕೆ ಭೇಟಿ ನೀಡಿದರು. ಅಲ್ಲಿರುವ ಕೆತ್ತನೆ ಮತ್ತು ಶಿಲ್ಪಕಲೆಯ ಸೌಂದರ್ಯಕ್ಕೆ ಮೂಕವಿಸ್ಮಿತರನ್ನಾಗಿಸಿತು. ದೇವಾಲಯದ ಪ್ರಾಂಗಣ ವನ್ನು ನೋಡುತ್ತಾ ಹೋದವರಿಗೆ ಗರ್ಭಗುಡಿ ಪ್ರವೇಶಿದ ಮೇಲಂತೂ ಎಲ್ಲಾ ಸದಸ್ಯರುಗಳು ಅಲ್ಲಿದ್ದ ದೇವರ ಮೂರ್ತಿಯನ್ನು ದಿಟ್ಟಿಸಿ ನೋಡಿದಷ್ಟು ವಿಶೇಷ, ಅರ್ಧನಾರಿಶ್ವರನನ್ನು ಕೇಳಿದ್ದ ಮತ್ತು ನೋಡಿದ್ದವರಿಗೆ ಇದೊಂದು ಅದ್ಭುತವೇ. ಒಂದೇ ವಿಗ್ರಹದಲ್ಲಿ "ಅರ್ಧ ಹರಿ ಮತ್ತು ಅರ್ಧ ಹರ" ರನ್ನು ಬಿತ್ತರಿಸುವ ದೇವರಗುಡಿ. ದರ್ಶನ ಮತ್ತು ಪ್ರಸಾದದ ನಂತರ ಎಲ್ಲರೂ ಜೊತೆಗೆ ಕುಳಿತು ಅದರ ವಿಶೇಷತೆಯ ಬಗ್ಗೆ ಚರ್ಚಿಸಿ ತುಸು ಕಾಲ ವಿಶ್ರಮಿಸಿ ಆ ನಂತರ ದಾವಣಗೆರೆಯತ್ತ ಪ್ರಯಾಣ ಮುಂದುವರೆಸಿದರು.

ಮೂರನೇ ಮತ್ತು ಅಂತಿಮ ದಿನದಂದು ಬೆಳಗ್ಗೆ ದಾವಣಗೆರೆಯ ತಾಲ್ಲೂಕು ಪಂಚಾಯತಿಯಲ್ಲಿ ಆಯೋಜಿಸಲಾದ ಚರ್ಚಾ ವೇದಿಕೆ, ತಾಲ್ಲೂಕಿನ ಆಯ್ದ ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಸದಸ್ಯರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಚುನಾಯಿತ ಪ್ರತಿನಿಧಿಗಳು ಹಾಜರಿದ್ದರು. ವೇದಿಕೆಯಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿಗಳಾದ ಶ್ರೀ ಬಸನಗೌಡರವರು, ಸಂಸ್ಥೆಯ ಬೋಧಕರಾದ ಶ್ರೀ ಜಿ. ಮಲ್ಲಿಕಾರ್ಜುನ ಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಪ್ರಭುದೇವ ಮತ್ತು ಸ್ಥಾಯಿ ಸಮಿತಿ ಸದಸ್ಯರಾದ ಶ್ರೀ ಪಿ.ಕೆ. ಅಶೋಕ್, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ತಾ. ಪಂ. ಸದಸ್ಯರು ಉಪಸ್ಥಿತರಿದ್ದರು. ಸರ್ಕಾರದ ಪ್ರಮುಖ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಅದರಲ್ಲಿನ ಸೂಕ್ಷ್ಮತೆಯ ಬಗ್ಗೆ ಅಂದರೆ ಇ-ಸ್ವತ್ತು, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ಸ್ವಚ್ಛ ಭಾರತ ಅಭಿಯಾನ, ಇತ್ಯಾದಿಗಳ ಕುರಿತು ಚರ್ಚೆ ಪ್ರಾರಂಭವಾಯಿತು. ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನದ ಕ್ರಿಯಾ ಯೋಜನೆ ತಯಾರಿಕೆ ಬಗ್ಗೆ, ಗ್ರಾ. ಪಂ. ಮತ್ತು ತಾ.ಪಂ.ಗಳ ನಡುವಿನ ಸಮನ್ವಯತೆ ಕಾಪಾಡಲು ಅಧಿನಿಯಮ ಮತ್ತು ಯೋಜನಾ ತಯಾರಿಕೆ ಪ್ರಕ್ರಿಯೆಯಲ್ಲಿ ಸರ್ಕಾರ ನೀಡಿರುವ ಅವಕಾಶಗಳನ್ನು ಹಂಚಿಕೊಳ್ಳಲಾಯಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಪ್ರಮುಖ ಜವಾಬ್ದಾರಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೇವೆ ಒದಗಿಸುವುದು ಮತ್ತು ಮುಂದಿನ ಪೀಳಿಗೆಗೂ ಅದನ್ನು ಸಂರಕ್ಷಿಸುವುದು. ಇದರ ನಿದರ್ಶನವನ್ನು ತೋರಿಸುವ ಸಲುವಾಗಿ ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಸುಮಾರು 1000 ಎಕ್ಕರೆ ವಿಸ್ತೀರ್ಣದ ಕೆರೆಯೊಂದನ್ನು ನೋಡಲು ಹೋದರು. ಕಣ್ಣಾಯಿಸಿದಷ್ಟು ದೂರವೂ ನೀರೇ..... ಅದನ್ನು "ಶಾಂತಿಸಾಗರ" ಎನ್ನುವರು. ಹೆಸರು ಹೇಳುವಂತೆ ಬಹಳ ಶಾಂತಿಯಿಂದ ಸಾಗರದಂತೆ ವಿಸ್ತಾರವಾಗಿದ್ದ ಆ ಕೆರೆಯ ಹಿಂದಿನ ಕಥೆಯನ್ನು ಅಲ್ಲಿಂದ ಹಿರಿಯರು ಹಂಚಿಕೊಂಡರು.

ಅಧ್ಯಯನ ಪ್ರವಾಸದ ಅಂತಿಮ ಭೇಟಿ ಹೊನ್ನಾಳಿ ತಾಲ್ಲೂಕಿನ ಚೀಲೂರು ಗ್ರಾಮ ಪಂಚಾಯತಿ. ಬರಬೇಕಿದ್ದ ಸಮಯಕ್ಕಿಂತ ಸ್ವಲ್ಪ ತಡವಾಗಿ ಸ್ಥಳಕ್ಕೆ ತಲುಪಿದ ಕಾರಣವೇನೋ, ಗ್ರಾಮ ಪಂಚಾಯತಿಯ ಎಲ್ಲಾ ಸದಸ್ಯರುಗಳು ಮತ್ತು ಅಧಿಕಾರಿಗಳು ಪಂಚಾಯತಿ ಕಟ್ಟಡದ ಮುಂದೆಯೇ ತಂಡವನ್ನು ಸ್ವಾಗತಿಸಲು ಕಾದಿದ್ದರು. ನೇರವಾಗಿ ಸಭಾಂಗಣಕ್ಕೆ ಕರೆದ್ಯೊಯ್ದರು. ಚೊಕ್ಕವಾದ ಮತ್ತು ಉತ್ತಮವಾಗಿ ಅಲಂಕೃತವಾದ ಕಛೇರಿ. ಎಲ್ಲವೂ ಸಿದ್ಧವೆಂಬಂತೆ ಪ್ರವೇಶಿಸಿದ ತಕ್ಷಣವೇ ಸಿಬ್ಬಂದಿಗಳು ತಂಡದ ಸದಸ್ಯರುಗಳ ದನಿವಾರಿಸಲು ಪಾನೀಯದ ವ್ಯವಸ್ಥೆ ಮಾಡಿದ್ದರು. ಸದರಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರು ತಂಡವನ್ನು ಸೇರಿದರು. ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀಮತಿ ವೇದಾವತಿಯವರು ಗ್ರಾ.ಪಂ. ಯ ಪರಿಚಯ ಮತ್ತು ಅವರು ಕೈಗೊಂಡಿರುವ ವಿಶೇಷ ಅಂಶಗಳನ್ನು ಎಲ್ಲರೊಂದಿಗೂ ಹಂಚಿಕೊಂಡರು. ಅದರಲ್ಲಿ ಬೀದಿದೀಪದ ವಾರ್ಷಿಕ ನಿರ್ವಹಣೆ, ಸೋಲಾರ್ ದೀಪಗಳ ಬಳಕೆ, ನೈರ್ಮಲೀಕರಣ ವ್ಯವಸ್ಥೆ, ಕಛೇರಿ ಕಟ್ಟಡದಲ್ಲಿ

ಸಭಾಂಗಣ ನಿರ್ಮಿಸುತ್ತಿರುವುದರ ಬಗ್ಗೆ ಹೀಗೆ ಹಲವಾರು ಅಂಶಗಳನ್ನು ವ್ಯಕ್ತಪಡಿಸಿದರು. ಗ್ರಾ.ಪಂ.ಯ ಸದಸ್ಯರೊಬ್ಬರು ತಮ್ಮ ಮನೆಯಿಂದ ಹತ್ತಿರವಿರುವ ಕೈಪಂಪು ಮಳೆ ನೀರು ಮರುಪೂರಣ ವ್ಯವಸ್ಥೆಯನ್ನು ಸ್ವತಃ ಮಾಡಿರುವುದರ ಬಗ್ಗೆ ತಿಳಿಸಿದರು.

ದಾವಣಗೆರೆಯ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿ, ನೇರವಾಗಿ ಶಿವಮೊಗ್ಗ ಜಿಲ್ಲಾ ಪಂಚಾಯತಿಗೆ ಬಂದು ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೆ ಮೂರು ದಿನದ ಒಟ್ಟಾರೆ ಅಭಿಪ್ರಾಯವನ್ನು ಮತ್ತು ಹಿಮ್ಮಾಯಿತಿಯನ್ನು ನೀಡಲು ಕಾಲಾವಕಾಶ ನೀಡಲಾಯಿತು.

ಅಧ್ಯಕ್ಷರೊಬ್ಬರು ಮಾತನಾಡಿ, ಹಿಂದಿನ ಬೇರೆ ಪ್ರಯಾಣದ ಕಹಿ ಘಟನೆಯಿಂದಾಗಿ ಮೊದಲಿಗೆ ಈ ಪ್ರವಾಸಕ್ಕೆ ಬರಲು ಒಲ್ಲದಾ ಮನಸ್ಸಿನಲ್ಲಿ ಬಂದೆ, ಈಗ ನನಗನ್ನಿಸುತ್ತಿದೆ, ಎಂತಹ ಅದ್ಬುತ ಅನುಭವವನ್ನು ಮತ್ತು ಸಂಯೋಜನೆಯನ್ನು ನಾನು ಕಳೆದುಕೊಳ್ಳುತ್ತಿದ್ದೆ ಎಂದು. ಅಧ್ಯಯನ ಪ್ರವಾಸವನ್ನು ಬಹಳ ಉತ್ತಮವಾಗಿ ಅ.ನ.ಸಾ. ರಾ.ಗ್ರಾ.ಪಂ.ರಾ. ಸಂಸ್ಥೆ ಆಯೋಜಿಸಿದೆ, ಅದಕ್ಕಾಗಿ ಸಂಸ್ಥೆಗೆ ಮತ್ತು ಜಿಲ್ಲಾ ಪಂಚಾಯತಿಗೆ ಧನ್ಯವಾದಗಳು. ಪಂಚಾಯತ್ ಅಭಿವೃದ್ಧಿ ಅಧಿಕಾರಿಯೊಬ್ಬರು ತಮ್ಮ ಅಭಿಪ್ರಾಯ ಮಂಡಿಸುತ್ತಾ, ಪ್ರತಿಯೊಂದು ಅಂಶವು ನಮ್ಮಂತೆಯೇ ಅಲ್ಲಿಯೂ ನಡೆಯುತ್ತಿದೆ. ಆದರೆ ಕೆಲವು ವಿಚಾರಗಳಲ್ಲಿ ಸಂದರ್ಭಾನುಸಾರ ಕೆಲವು ಬದಲಾವಣೆಗಳನ್ನು ಗಮನಿಸಿದೆವು. ಅಲ್ಲಿಂದ್ದ 'ಅಳತೆ ಪುಸ್ತಕ'ದ ಮಾದರಿ ನಾವು ಅಳವಡಿಸಿಕೊಳ್ಳಬೇಕು, ಸ್ವಂತ ಸಂಪನ್ಮೂಲ ಸಂಗ್ರಹಕ್ಕೆ ಹೆಚ್ಚು ಒತ್ತು ನೀಡಬೇಕು ಮತ್ತು ಪರಿಷ್ಕರಣೆಗೆ ಎಲ್ಲರೂ ಒಮ್ಮತದಿಂದ ಪ್ರಯತ್ನಿಸಬೇಕು ಎಂದು ವ್ಯಕ್ತಪಡಿಸಿದರು. ಅಂತಿಮವಾಗಿ ಉಪಕಾರ್ಯದರ್ಶಿ(ಅಭಿವೃದ್ಧಿ) ಯವರ ಸಮ್ಮುಖದಲ್ಲಿ ಅಧ್ಯಯನ ಪ್ರವಾಸದ ಪ್ರಮಾಣ ಪತ್ರ ಮತ್ತು ಗುಂಪು ಛಾಯಚಿತ್ರವನ್ನು ಹಸ್ತಾಂತರಿಸಿ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ವ್ಯಕ್ತಿಪಡಿಸುವುದರ ಮೂಲಕ ಅಂತಿಮಗೊಳಿಸಲಾಯಿತು. ಪ್ರವಾಸದ ಕುರಿತು ಪ್ರಶಿಕ್ಷಣಾರ್ಥಿ ಒಬ್ಬರು ಹಂಚಿಕೊಂಡ ಅಭಿಪ್ರಾಯವನ್ನು https://youtu.be/hOhk1GVDI1U ಯೂಟ್ಯೂಬ್ ಮೂಲಕ ವೀಕ್ಷಿಸಬಹುದು.



ಯಶೋಗಾಥೆ



ಡಾ॥ ಎಂ.ಎಸ್.ರಾಮಚಂದ್ರ

ಕಾರ್ಯನಿರ್ವಾಹಕ ಅಧಿಕಾರಿ,
ಹೊಸನಗರ ತಾಲ್ಲೂಕು ಪಂಚಾಯತಿ,
ಶಿವಮೊಗ್ಗ

**ಗ್ರಾಮೀಣ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಹೊಸನಗರ ತಾಲ್ಲೂಕಿನ ಎಲ್ಲಾ ಗ್ರಾಮೀಣ ಪ್ರದೇಶಗಳ ಗ್ರಾಮಗಳ ಜನರಿಗೆ ಉತ್ತಮ ಮತ್ತು ಶುದ್ಧ ಕುಡಿಯುವ ನೀರು ಒದಗಿಸುವಲ್ಲಿ ಕಾಲ ಕಾಲಕ್ಕೆ ನಿರ್ಣಯಿಸಿ ಅಗತ್ಯವಿದ್ದಲ್ಲಿ ಟ್ಯಾಂಕರ್‌ಗಳ ಮೂಲಕವೂ ನೀರು ಸರಬರಾಜು ಮಾಡಲಾಗುತ್ತಿದೆ. ಎಲ್ಲಾ 30 ಗ್ರಾಮ ಪಂಚಾಯತಿಗಳಲ್ಲಿ ಶೌಚಾಲಯ ನಿರ್ಮಿಸುವ ಗುರಿಯನ್ನು ಸಾಧಿಸಲಾಗಿದೆ.**

# ಸರ್ಕಾರದ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಪ್ರಶಸ್ತಿಯ ಗರಿ

## ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ತಾಲ್ಲೂಕು ಪಂಚಾಯತಿ ಪಾತ್ರ:

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ಮಲೆನಾಡು ಪ್ರದೇಶವಾಗಿದ್ದು, ಶಿವಮೊಗ್ಗ ಜಿಲ್ಲಾ ಕೇಂದ್ರದಿಂದ 75 ಕಿ.ಮೀ ದೂರದಲ್ಲಿದೆ. ಇಲ್ಲಿಯ ಬಹುತೇಕ ಪ್ರದೇಶವು ಬೆಟ್ಟ, ಗುಡ್ಡ, ನದಿ, ಕೆರೆ, ತೊರೆ, ಹಳ್ಳ-ಕೊಳ್ಳಗಳಿಂದ ಕೂಡಿದ್ದು ಸುಂದರ ಪ್ರಕೃತಿಯ ಸೌಂದರ್ಯದ ನೆಲೆಬೀಡಾಗಿದೆ.

ಇಂತಹ ಪ್ರದೇಶದಲ್ಲಿ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ-1993 ರಲ್ಲಿ ತಿಳಿಸಿರುವಂತೆ ಹೊಸನಗರ ತಾಲ್ಲೂಕು ಪಂಚಾಯಿತಿಯಲ್ಲಿ 2016-17ನೇ ಸಾಲಿನಲ್ಲಿ ಪ್ರತಿ ಸ್ಥಾಯಿ ಸಮಿತಿಯು ತಲಾ ಮೂರರಂತೆ ಇಲ್ಲಿಯವರೆಗೆ ಒಟ್ಟು ಒಂಬತ್ತು ಸಭೆಗಳನ್ನು ನಡೆಸಲಾಗಿರುತ್ತದೆ. ಈ ಸಭೆಗಳಲ್ಲಿ ಸದಸ್ಯರು ಬಹು ಆಸಕ್ತಿಯಿಂದ ಭಾಗವಹಿಸುತ್ತಿದ್ದು, ಅಭಿವೃದ್ಧಿ ಕಾರ್ಯಕ್ರಮಗಳ ನಿರಂತರ ಪ್ರಗತಿ ಪರಿಶೀಲನೆ, ಸಹಕಾರದೊಂದಿಗೆ ಇಲ್ಲಿನ ತಾಲ್ಲೂಕು ಪಂಚಾಯಿತಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಜನಪ್ರತಿನಿಧಿಗಳ ಶ್ರಮಕ್ಕೆ ದೊರೆತ ದೊಡ್ಡ ಪ್ರತಿಫಲವೇ 'ದೀನದಯಾಳು ಉಪಾಧ್ಯಾಯ ರಾಷ್ಟ್ರೀಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ'. ಸ್ಥಾಯಿ ಸಮಿತಿಗಳ ಕ್ರಿಯಾಶೀಲ ಅನುಸರಣೆ: ಸ್ಥಾಯಿ ಸಮಿತಿ ಸಭೆಗಳಲ್ಲಿ ಕುಡಿಯುವ ನೀರು, ಕೃಷಿ, ಶೈಕ್ಷಣಿಕ, ಆರೋಗ್ಯ ಮತ್ತು ಪೌಷ್ಟಿಕ ಆಹಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪ.ಜಾ ಮತ್ತು ಪ.ಪಂ.ಗಳಿಗೆ ಸಂಬಂಧಿಸಿದ ವಿಷಯಗಳು, ನೈರ್ಮಲ್ಯ, ಗ್ರಾಮೀಣ ರಸ್ತೆಗಳು, ಬೀದಿ ದೀಪ ಗ್ರಾಮೀಣ ಜನರ ಜೀವನೋಪಾಯಕ್ಕೆ ಸಂಬಂಧಿಸಿದ ವಿಷಯಗಳ ಸಮಗ್ರವಾದ ಚರ್ಚೆ ನಡೆಸಿ ಈ ಸಮಸ್ಯೆಗಳಿಗೆ ಬಹಳಷ್ಟು ಪರಿಹಾರ ಕಂಡುಕೊಳ್ಳಲಾಗಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಪುನಃ ಸೇರಿಸುವ ವಿಷಯ, ಗರ್ಭಿಣಿ ಸ್ತ್ರೀಯರ ಆರೋಗ್ಯ ಮತ್ತು ಮಕ್ಕಳ ಅಪೌಷ್ಟಿಕತೆ ಬಗ್ಗೆ ವಿವಿಧ ಸಭೆಗಳಲ್ಲಿ ಚರ್ಚಿಸಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ಧರಿಸಲಾಗುತ್ತದೆ. ತಾಲ್ಲೂಕು ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಮತ್ತು ಸರ್ಕಾರಿ ಅಧಿಕಾರಿಗಳು ಸ್ಪಂದಿಸಿ







**ಕೇಂದ್ರ ತಂಡದಿಂದ ಹೊಸನಗರ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳ ಭೇಟಿ.**

ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಗೊಳಿಸುವಲ್ಲಿ ಹೆಚ್ಚಿನ ಶ್ರಮವಹಿಸುತ್ತಿದ್ದು, ಇತರರಿಗೆ ಮಾದರಿಯಾಗಿದ್ದಾರೆ.

## ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ತಾಲ್ಲೂಕು ಪಂಚಾಯತಿ ಪಾತ್ರ:

ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತಾಲ್ಲೂಕು ಪಂಚಾಯತಿಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆ.ಡಿ.ಪಿ) ಸಭೆಗಳಲ್ಲಿ ಚರ್ಚಿಸಲಾಗುತ್ತದೆ. ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಮಗ್ರವಾಗಿ ಚರ್ಚಿಸಿ ತೀರ್ಮಾನಿಸಲಾಗುತ್ತದೆ ಹಾಗೂ ಕೈಗೊಂಡ ಕಾಮಗಾರಿಗಳಲ್ಲಿನ ಲೋಪದೋಷಗಳ ಬಗ್ಗೆ ಚರ್ಚಿಸಿ ಸರಿಯಾದ ಮಾರ್ಗದರ್ಶನ ನೀಡಿ ಕಾಮಗಾರಿಯು ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ಅನುಷ್ಠಾನಗೊಳಿಸಲು ಶ್ರಮಿಸಲಾಗುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗನವಾಡಿ ಮಕ್ಕಳಿಗೆ ನೀಡುವ ಪೌಷ್ಠಿಕ ಆಹಾರ ಮತ್ತು ಅಂಗನವಾಡಿ ವಾತಾವರಣದ ಬಗ್ಗೆ ತಾ.ಪಂನಲ್ಲಿ ನಡೆಯುವ ಸಭೆಗಳಲ್ಲಿ ಹೆಚ್ಚಿನ ಗಮನಕೊಟ್ಟು ಮಕ್ಕಳ ಪೋಷಣೆ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ತಾಲ್ಲೂಕಿನ ಹಲವು ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಕಲ್ಪಿಸುವಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ತಾಲ್ಲೂಕು ಪಂಚಾಯತಿ ಅನುದಾನ ಬಳಸಿಕೊಂಡು ಸಾಕಷ್ಟು ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗಿದೆ.

ಮಹಿಳಾ ದೌರ್ಜನ್ಯ, ಮಹಿಳಾ ಮತ್ತು ಮಕ್ಕಳ ಸಾಗಾಣಿಕೆ, ಬಾಲ್ಯವಿವಾಹ, ಅಸ್ಪೃಶ್ಯತೆ ಮತ್ತು ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವ ಬಗ್ಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆಗಳಲ್ಲಿ ಮತ್ತು ಸಾಮಾನ್ಯ ಗ್ರಾಮ ಸಭೆಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯುವ ತಾಲ್ಲೂಕು ಪಂಚಾಯತಿ ಸಾಮಾನ್ಯ ಸಭೆಗಳಲ್ಲಿ ಮತ್ತು ಸ್ಥಾಯಿ ಸಮಿತಿ ಸಭೆಗಳಲ್ಲಿ ಚರ್ಚಿಸಿ ಮಹತ್ವ ಪೂರ್ಣ ನಿರ್ಣಯಗಳನ್ನು ಕಾಲ ಕಾಲಕ್ಕೆ ತೆಗೆದುಕೊಳ್ಳಲಾಗಿದೆ. ಗ್ರಾಮೀಣ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಎಲ್ಲಾ ಗ್ರಾಮೀಣ ಪ್ರದೇಶಗಳ ಗ್ರಾಮಗಳ ಜನರಿಗೆ ಉತ್ತಮ ಮತ್ತು ಶುದ್ಧ ಕುಡಿಯುವ ನೀರು ಒದಗಿಸುವಲ್ಲಿ ಕಾಲ ಕಾಲಕ್ಕೆ ನಿರ್ಣಯಿಸಿ ಅಗತ್ಯವಿದ್ದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತದೆ. ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಶೌಚಾಲಯ ನಿರ್ಮಿಸುವ ಗುರಿಯನ್ನು ಸಾಧಿಸಲಾಗಿದ್ದು, ಎಲ್ಲಾ 30 ಗ್ರಾಮ ಪಂಚಾಯಿತಿಗಳನ್ನು ಬಯಲು ಶೌಚಮುಕ್ತ ಗ್ರಾಮ ಪಂಚಾಯಿತಿಗಳನ್ನಾಗಿ ಘೋಷಣೆ ಮಾಡಲಾಗಿದೆ.

ಈ ಎಲ್ಲಾ ಯೋಜನೆಗಳ ಯಶಸ್ವಿ ಅನುಷ್ಠಾನದಲ್ಲಿ ತಾಲ್ಲೂಕು ಪಂಚಾಯತಿ ಆಡಳಿತ ಮಂಡಳಿ ಮತ್ತು ಅಧಿಕಾರಿ ವರ್ಗ ಹಾಗೂ ಸಿಬ್ಬಂದಿ ವರ್ಗ ಸಾಕಷ್ಟು ಶ್ರಮವಹಿಸಿದ್ದಾರೆ.

ಹೊಸನಗರ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಾದ ಜಲ ಸಂರಕ್ಷಣೆ ಮತ್ತು ನೀರಿನ ಕೊಯ್ಲು ಕಾಮಗಾರಿ, ಅರಣ್ಯೀಕರಣ ಮತ್ತು ನೆಡುತೋಪುಗಳನ್ನೊಳಗೊಂಡ ಬರ ತಡೆಯುವ ಕಾಮಗಾರಿಗಳು ಸಮುದಾಯ ಜಮೀನು ಅಭಿವೃದ್ಧಿ, ನೆರೆ/ಪ್ರವಾಹ ನಿಯಂತ್ರಣ ಮತ್ತು ಜವಳು ಪ್ರದೇಶಗಳಲ್ಲಿ ಚರಂಡಿ/ತೋಡು/ಕಾಲುವೆಗಳಂತಹ ಕಾಮಗಾರಿಗಳು, ಗ್ರಾಮೀಣ ಸಂಪರ್ಕ ರಸ್ತೆ/ ರೈತರ ಹೊಲಗಳಿಗೆ ಹೋಗುವ ರಸ್ತೆ ನಿರ್ಮಾಣ ಕಾಮಗಾರಿಗಳು, ರೈತರಿಗೆ ಒಕ್ಕಲು ಕಣ, ಭಾರತ್ ನಿರ್ಮಾಣ ರಾಜೀವ್‌ಗಾಂಧಿ ಸೇವಾ ಕೇಂದ್ರಗಳ ನಿರ್ಮಾಣ, ಆಟದ ಮೈದಾನ ನಿರ್ಮಾಣ, ಕಾಲುಸಂಕಗಳು, ಕೃಷಿ ಬಾವಿಗಳು, ಸಾರ್ವಜನಿಕ ಕುಡಿಯುವ ನೀರಿನ ಬಾವಿಗಳು, ಜಾನುವಾರು ಕೊಟ್ಟಿಗೆಗಳು, ಜಾನುವಾರು



ಕುಡಿಯುವ ನೀರಿನ ತೊಟ್ಟಿಗಳು ಇನ್ನೂ ಹಲವಾರು ಅಭಿವೃದ್ಧಿ ಪೂರಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಗ್ರಾಮ ಪಂಚಾಯತಿಗಳಿಗೆ ಹೊಸನಗರ ತಾಲ್ಲೂಕು ಪಂಚಾಯಿತಿಯು ಬೆನ್ನೆಲುಬಾಗಿ ನಿಂತು ಅಗತ್ಯ ಸಲಹೆ ಸೂಚನೆಗಳನ್ನು ಕಾಮಗಾರಿಗಳ ಅನುಷ್ಠಾನದ ಉಸ್ತುವಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆ. ಗ್ರಾಮ ಪಂಚಾಯಿತಿಗಳಿಗೆ ಬೆನ್ನೆಲುಬಾಗಿ ತಾಲ್ಲೂಕು ಪಂಚಾಯಿತಿಯ ಸಹಕಾರ ತಾಲ್ಲೂಕು ಪಂಚಾಯಿತಿಯ ಸಹಕಾರದಿಂದ ಸಮರ್ಪಕ ಮತ್ತು ಪಾರದರ್ಶಕ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಬ್ಯಾಂಕ್ ಖಾತೆಗಳನ್ನು ತೆರೆಯಲು ಆಂದೋಲನ ರೀತಿಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಸ್ಥಳೀಯ ಶಾಖೆಗಳ ಸಹಯೋಗದೊಂದಿಗೆ ಗ್ರಾಮ ಮಟ್ಟದಲ್ಲಿ ಶಿಬಿರಗಳನ್ನು ಆಯೋಜಿಸಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಜಾಬ್ ಕಾರ್ಡ್‌ದಾರರಿಗೆ ವೈಯಕ್ತಿಕ ಬ್ಯಾಂಕ್ ಖಾತೆಗಳನ್ನು ತೆರೆಸಿರುವುದು ವಿಶೇಷ ಸಾಧನೆಯಾಗಿರುತ್ತದೆ. ಪ್ರತಿ ಗ್ರಾಮ ಸಭೆಗಳಲ್ಲಿ ನಿರ್ಣಯಿಸಿದ ಕಾಮಗಾರಿಗಳನ್ನು ಪಂಚಾಯತಿ ಸಾಮಾನ್ಯ ಸಭೆಗಳಲ್ಲಿ ಅನುಮೋದಿಸಿ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಲಾಗುತ್ತದೆ. ಇಂತಹ ಗ್ರಾಮ ಸಭೆಗಳಲ್ಲಿ ಮಕ್ಕಳ ಮತ್ತು ಮಹಿಳೆಯ ಅರೋಗ್ಯದ ಬಗ್ಗೆ ಗ್ರಾಮ ಸಭಾ ಸದಸ್ಯರುಗಳಿಗೆ ಮಾಹಿತಿ ನೀಡುವಲ್ಲಿ ತಾಲ್ಲೂಕು ಪಂಚಾಯಿತಿ ಪ್ರಮುಖ ಪಾತ್ರ ವಹಿಸುತ್ತಿದೆ.

ತಾಲ್ಲೂಕು ಪಂಚಾಯಿತಿ ಆಡಳಿತದಡಿ ಬರುವ ಸಹ ಇಲಾಖೆಗಳಾದ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಮೀನುಗಾರಿಕೆ ಇಲಾಖೆ, ಅರಣ್ಯ ಇಲಾಖೆ, ಪಶುಸಂಗೋಪನೆ ಹಾಗೂ ಪಶುವೈದ್ಯ ಸೇವಾ ಇಲಾಖೆ ಮತ್ತು ಇತರೆ ಇಲಾಖೆಗಳು ತಮ್ಮ ವ್ಯಾಪ್ತಿಗೆ ಬರುವ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ತಾಲ್ಲೂಕು ಪಂಚಾಯತಿ ಆಡಳಿತ ಮಂಡಳಿಯ ಸಾಮಾನ್ಯ ಸಭೆಗಳಲ್ಲಿ ಮತ್ತು ಸ್ಥಾಯಿ ಸಮಿತಿ ಸಭೆಗಳಲ್ಲಿ ಚರ್ಚಿಸಿ ಪ್ರಗತಿ ಪರಿಶೀಲನೆ ಮಾಡಲಾಗುತ್ತಿರುತ್ತದೆ. ಒಂದು ಯಶಸ್ಸಿನ ಹಿಂದೆ ಹಲವರ ಶ್ರಮ ಇರುತ್ತದೆ. ಅದರಂತೆ ಹೊಸನಗರ ತಾಲ್ಲೂಕು ಪಂಚಾಯತಿ ಇಂದು 'ದೀನದಯಾಳು ಉಪಾಧ್ಯಾಯ ರಾಷ್ಟ್ರೀಯ ಪಂಚಾಯತಿ ಸಶಕ್ತೀಕರಣ ಪುರಸ್ಕಾರ' ಪಡೆಯಲು ಈ ಹಿಂದೆ 2010 ರಿಂದ 2015 ರ ವರೆಗೆ ಕಾರ್ಯನಿರ್ವಹಿಸಿದ ತಾಲ್ಲೂಕು ಪಂಚಾಯತಿ ಆಡಳಿತ ಮಂಡಳಿ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಸರ್ವಸದಸ್ಯರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಅದರಲ್ಲೂ ಮುಖ್ಯವಾಗಿ ಈ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಯುತ ಶ್ರೀಧರ ವಿ. ಭಟ್‌ರವರು ಮತ್ತು ಸಿಬ್ಬಂದಿ ವರ್ಗದವರು ಒಂದು ಕುಟುಂಬದಂತೆ ಕಾರ್ಯನಿರ್ವಹಿಸಿ ತಾಲ್ಲೂಕಿನ ಅಭಿವೃದ್ಧಿಯ ಕುರಿತು ಹಾಗೂ ಸರ್ಕಾರದ ಯೋಜನೆಗಳನ್ನು ಯಶಸ್ವಿ ಹಾಗೂ ಮಾದರಿಯಾಗಿ ಅನುಷ್ಠಾನಗೊಳಿಸಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ■



ಯಶೋಗಾಥೆ



ಪ್ರಮೋದ.ಮೋ.ಚಾಂದಕವಟೆ

ಬೋಧಕರು (ಭೂ ಮತ್ತು ಜಲ ಸಂಪನ್ಮೂಲ)
ಅ.ನ.ಸಾ.ರಾ.ಗ್ರಾ. & ಪಂ.ರಾ ಸಂಸ್ಥೆ
ಮೈಸೂರು

**ಕೊಪ್ಪಳ ಜಿಲ್ಲಾ ಪಂಚಾಯತಿಯು ತಾಲ್ಲೂಕು ಪಂಚಾಯತಿಯ ಸಹಕಾರದೊಂದಿಗೆ ವಿವಿಧ ಗ್ರಾಮ ಪಂಚಾಯತಿಗಳ ಜಂಟಿ ಸಮಿತಿಯ ಮೂಲಕ (ಪ್ರಕರಣ 79) ಶ್ರೀ ಜನಾರ್ಧನ, ಅವರ ನೇತ್ರತ್ವದಲ್ಲಿ ಬಹುಗ್ರಾಮಗಳ ಆಧಾರಿತ ಘನತಾಜ್ಯ ಸಂಗ್ರಹಣೆ ಹಾಗೂ ಸಂಸ್ಕರಣ ಘಟಕವನ್ನು ಸ್ಥಾಪಿಸಲಾಯಿತು.**

# ನಿರಂತರ ಕಲಿಕೆಯೇ ಬದಲಾವಣೆಯ ಮೂಲ...

ರಾಜ್ಯದ ವಿವಿಧ ಜಿಲ್ಲೆಯ ಗ್ರಾಮ ಪಂಚಾಯಿತಿಗಳು ಉತ್ತಮ ಜನ ಸ್ಪಂದನೆ ಮತ್ತು ಆಡಳಿತ ನಿರ್ವಹಣೆ ಮಾಡಿರುವ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ಕರ್ನಾಟಕ ಸರ್ಕಾರ ವತಿಯಿಂದ ರಾಜ್ಯದ ಎಲ್ಲಾ ಜಿಲ್ಲೆಯ ಪ್ರತಿ ತಾಲ್ಲೂಕಿನಿಂದ ಒಂದೊಂದು ಗ್ರಾಮ ಪಂಚಾಯತಿಗೆ ಗಾಂಧಿ ಗ್ರಾಮ ಪುರಸ್ಕಾರ ನೀಡಿ ಗೌರವಿಸಿದೆ. ಬಾಗಲಕೋಟೆ ಜಿಲ್ಲೆಯ ಹಲವಾರು ಗ್ರಾಮ ಪಂಚಾಯತಿಗಳು ಉತ್ತಮ ಜನ ಸ್ಪಂದನೆ ಮತ್ತು ಆಡಳಿತ ನಿರ್ವಹಣೆಯನ್ನು ನೀಡಿ ಗಾಂಧಿ ಗ್ರಾಮ ಪುರಸ್ಕಾರವನ್ನು ಪಡೆದಿರುತ್ತವೆ. ಗಾಂಧಿ ಗ್ರಾಮ ಪುರಸ್ಕೃತ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೈಸೂರು ವತಿಯಿಂದ ಇನ್ನು ಹೆಚ್ಚಿನ ಸಾಧನೆ ಮಾಡುವ ನಿಟ್ಟಿನಲ್ಲಿ ಕೆಳಗಿನ ಉದ್ದೇಶ ಈಡೇರಿಸುವ ನಿಟ್ಟಿನಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

1. ಕೊಪ್ಪಳ ಮತ್ತು ಗದಗ ಜಿಲ್ಲೆಗಳ ಗ್ರಾಮ ಪಂಚಾಯತಿಗಳ ಸಾಧನೆಗಳು ಮತ್ತು ಆಡಳಿತ ವೈಖರಿ ಪರಿಚಯಿಸುವ ಪ್ರಯತ್ನ
2. ಕೊಪ್ಪಳ ಮತ್ತು ಗದಗ ಜಿಲ್ಲೆಗಳ ಗ್ರಾಮ ಪಂಚಾಯತಿಗಳು ಸ್ಥಳೀಯ ಸರ್ಕಾರ ನಿರ್ವಹಣೆಯಲ್ಲಿ ಅಳವಡಿಸಿಕೊಂಡಿರುವ ಹೊಸ ಕಾರ್ಯತಂತ್ರಗಳು ಮತ್ತು ಪದ್ಧತಿಗಳ ಕುರಿತು ಅರಿಯುವುದು
3. ಸಮತಲ ಗುಂಪಿನ (ಸ್ವಂತ ಜಿಲ್ಲೆಯ ಇತರೆ ಪಂಚಾಯತಿಯ) ಸದಸ್ಯರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ಅವರವರ ಗ್ರಾಮ ಪಂಚಾಯತಿಯಲ್ಲಿ ಮಾಡಿರುವ ಮಾದರಿ ಅಭ್ಯಾಸಗಳನ್ನು ಪರಸ್ಪರ ಹಂಚಿಕೊಳ್ಳುವುದು.

ಸಂಯೋಜಕರಾದ ಶ್ರೀ. ಪ್ರಮೋದ ಎಂ ಚಾಂದಕವಟೆ ತರಬೇತಿಯನ್ನು ಉದ್ಘಾಟಿಸಿ, ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತರಬೇತಿಯ ಉದ್ದೇಶಗಳ ಕುರಿತು ವಿವರಣೆ ನೀಡಿದರು.

ಸಂಯೋಜಕರು ಸಂವಿಧಾನ ತಿದ್ದುಪಡಿ ಪೂರ್ವ ಪಂಚಾಯತ್ ವ್ಯವಸ್ಥೆ, 73ನೇ ಸಂವಿಧಾನ ತಿದ್ದುಪಡಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಮುಖ ಅಂಶಗಳ ಕುರಿತ ಮಾಹಿತಿಯನ್ನು ನೀಡಿದರು. ನಂತರದಲ್ಲಿ ಬಾಗಲಕೋಟೆ ಜಿಲ್ಲೆಯ, ಉಪಕಾರ್ಯದರ್ಶಿ ಆಧಿಕಾರಿಗಳಾದ ಶ್ರೀ. ಅಮರೇಶ ನಾಯಕ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಅಧ್ಯಯನ ಪ್ರವಾಸ ಸದುಪಯೋಗಪಡಿಸಿಕೊಳ್ಳಿ ಎಂದು ಹೇಳಿದರು.

## ಬಾಗಲಕೋಟೆ ಜಿಲ್ಲೆ

ಶ್ರೀ ರುದ್ರಯ್ಯ ಕೋಮಲಯ್ಯ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹುಲಗಿ, ಗ್ರಾಮ ಪಂಚಾಯತಿ ಮತ್ತು ಕೊಪ್ಪಳ ಜಿಲ್ಲೆಯ ಶ್ರೀ ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಶ್ರೀ ಜನಾರ್ಧನವರುಗಳ (ಬಹುಗ್ರಾಮ ಘನತಾಜ್ಯ ನಿರ್ವಹಣೆ ಮತ್ತು ಸಂಸ್ಕರಣೆ ಘಟಕದ ರುವಾರಿ) ನೇತೃತ್ವದಲ್ಲಿ ಹುಲಗಿ ಗ್ರಾಮ ಪಂಚಾಯತಿಯ ಕುರಿತು ಮಾಹಿತಿ ಪಡೆದು, ಹುಲಗಿ ಗ್ರಾಮವು ಒಂದು ಪ್ರವಾಸ ತಾಣವಾಗಿದ್ದು ಮತ್ತು ಅಲ್ಲಿರುವ ಜನರಲ್ಲಿ ಸ್ವಚ್ಚತೆಯ ಮಹತ್ವದ  ಕುರಿತು ಅರಿವನ್ನು ಮೂಡಿಸಲು ಹೈಟೆಕ್ ಶೌಚಾಲಯವನ್ನು ನಿರ್ಮಾಣ ಮಾಡಿದ್ದು, ಹೈಟೆಕ್ ಶೌಚಾಲಯದ ಬಗ್ಗೆ ಕೊಪ್ಪಳ ಜಿಲ್ಲಾ ಪಂಚಾಯತಿಯ, ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಶ್ರೀ ಜನಾರ್ಧನವರು ಮಾಹಿತಿ ನೀಡಿದರು.


ಜೈವಿಕ ವಸ್ತುಗಳ (ವಿವಿಧ ಗಿಡ ಮರಗಳ-ಎಲೆಗಳು ಮತ್ತು ರೆಂಬೆ(ತೆಂಗು))ನ್ನು ಪುಡಿ ಮಾಡುವ ಯಂತ್ರ (ಗೊಬ್ಬರ ಪ್ರಕ್ರಿಯೆಗೆ ಸಹಾಯ ಮಾಡುವ ಯಂತ್ರ).

ಕೊಪ್ಪಳ ಜಿಲ್ಲಾ ಪಂಚಾಯತಿಯು ತಾಲ್ಲೂಕು ಪಂಚಾಯತಿಯ ಸಹಕಾರದೊಂದಿಗೆ ವಿವಿಧ ಗ್ರಾಮ ಪಂಚಾಯತಿಗಳ ಜಂಟಿ ಸಮಿತಿಯ ಮೂಲಕ (ಪ್ರಕರಣ 79) ಶ್ರೀ ಜನಾರ್ಧನ, ಅವರ ನೇತ್ರತ್ವದಲ್ಲಿ ಬಹುಗ್ರಾಮಗಳ ಆಧಾರಿತ ಘನತಾಜ್ಯ ಸಂಗ್ರಹಣೆ ಹಾಗೂ ಸಂಸ್ಕರಣ ಘಟಕವನ್ನು ಸ್ಥಾಪಿಸಲಾಯಿತು. ಈ ಬಹುಗ್ರಾಮಗಳ ಆಧಾರಿತ ಘನತಾಜ್ಯ ಸಂಗ್ರಹಣೆ ಹಾಗೂ ಸಂಸ್ಕರಣ ಘಟಕವು ಒಂಭತ್ತು ಗ್ರಾಮ ಪಂಚಾಯಿತಿಗಳಿಂದ ತಾಜ್ಯ ಸಂಗ್ರಹಣೆ ಮಾಡುತ್ತಿದೆ. ಪ್ರತಿ ಗ್ರಾಮ ಪಂಚಾಯಿತಿದಿಂದ 20 ಲಕ್ಷ ರೂಗಳನ್ನು ಸಂಗ್ರಹಿಸಿ ಈ ಘಟಕ ನಿರ್ಮಾಣ ಮಾಡಲಾಗಿದೆ.

## ಹುಲಗಿ ಗ್ರಾಮ ಪಂಚಾಯತಿಯ ಉತ್ತಮ ಅಭ್ಯಾಸಗಳು ಮತ್ತು ಸಾಧನೆಗಳು

### 1. ಹೈಟೆಕ್ ಶೌಚಾಲಯದ ಪ್ರಮುಖ ಅಂಶಗಳು:

ಸುಮಾರು ರೂ.85.00 ಲಕ್ಷ ಅಂದಾಜು ವೆಚ್ಚದಲ್ಲಿ ಅಂದರೆ ವಿವಿಧ ಯೋಜನೆಗಳ ಮೂಲಗಳಿಂದ ಹೈಟೆಕ್ ಶೌಚಾಲಯವನ್ನು ನಿರ್ಮಿಸಿದ್ದು, ಈ ಅತ್ಯಾಧುನಿಕ ಶೌಚಾಲಯದಲ್ಲಿ ಮಹಿಳೆಯರಿಗೆ & ಪುರುಷರಿಗೆ ಪ್ರತ್ಯೇಕವಾದ ಶೌಚಾಲಯ, ಸ್ನಾನಗ್ರಹ (ಟಬ್), ಬ್ಯೂಟಿಪಾರ್ಲರ್, ಬಟ್ಟೆ ಒಗೆಯುವಯಂತ್ರ/ವಾಷಿಂಗ್ ಮಶಿನ್, ಬೂಟ್‌ಪಾಲಿಸ್, ಟಿ.ವಿ ಮತ್ತು ಸಿಸಿ ಕ್ಯಾಮರಾ & ಹೇರಡ್ರಾಯರ್, ಮಕ್ಕಳ ಉದ್ಯಾನವನ ಮತ್ತು ಶೌಚಾಲಯ ನಿರ್ವಹಣೆಗಾರರಿಗೆ ವಸತಿ ಗೃಹವನ್ನು ನಿರ್ಮಿಸಿರುತ್ತಾರೆ ಮತ್ತು ಈ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿ ಇರುತ್ತದೆ. ಇದರ ಸುತ್ತಮುತ್ತಲು ಬಯಲು ಶೌಚಮಾಡುವ ತಡೆಗಟ್ಟಲು ಸಿ.ಸಿ.ಕ್ಯಾಮರಾ ಅಳವಡಿಕೆ ಮತ್ತು ಧ್ವನಿವರ್ಧಕಗಳ ಮೂಲಕ ಎಚ್ಚರಿಕೆ ನೀಡುವುದು ಉತ್ತಮವಾಗಿರುತ್ತದೆ. ಈ ಹೈಟೆಕ್ ಶೌಚಾಲಯವು ವ್ಯೆಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಪ್ರೇರಣೆ ನೀಡುತ್ತಿದ್ದು ಸ್ವಚ್ಚತೆಯ ಮಹತ್ವವನ್ನು ಜನರಿಗೆ ತಿಳಿಯಪಡಿಸುತ್ತಿದೆ.

ಸುಮಾರು 5 ಘಂಟೆಗೆ ಹೈಟೆಕ್ ಶೌಚಾಲಯದ ವೀಕ್ಷಣೆ ನಂತರ ಹುಲಗಿ ಗ್ರಾಮ ಪಂಚಾಯತಿಯ ಕುರಿತು ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಶ್ರೀ ಜನಾರ್ಧನವರು ನೇತ್ರತ್ವದಲ್ಲಿ ಹುಲಗಿ ಗ್ರಾಮದ ಅಂದರೆ "ಬಹುಗಾಮ್ರಗಳ ಆಧಾರಿತ ಘನತಾಜ್ಯ ಸಂಗ್ರಹಣೆ ಹಾಗೂ ಸಂಸ್ಕರಣ ಘಟಕ"ಕ್ಕೆ ಭೇಟಿ ನೀಡಿ, ವೀಕ್ಷಿಸಿ, ಚರ್ಚಿಸಿ ಈ ಕೆಳಗಿನಂತೆ ಮಾಹಿತಿ ಪಡೆದಿರುತ್ತಾರೆ. (Reduce, Recycle and Reuse and Resale)

- ಸದರಿ ಘಟಕವು 9 ಗ್ರಾಮ ಪಂಚಾಯಿತಿಗಳು ಸೇರಿ ಈ ಘಟಕವನ್ನು ನಿರ್ಮಿಸಿದ್ದಾರೆ ಮತ್ತು 9 ಗ್ರಾಮ ಪಂಚಾಯಿತಿಗಳ ಜಂಟಿ ಸಮಿತಿ (ಪ್ರಕರಣ-79) ಗಳನ್ನು ನಿರ್ಮಿಸಲಾಗಿದೆ.
- ಒಟ್ಟು 9 ಗ್ರಾಮ ಪಂಚಾಯಿತಿಗಳಿಂದ ರೂ.2, 00,000 ರಂತೆ*9=1,80, 000.00 ಸಂಗ್ರಹ ಮಾಡಿರುತ್ತಾರೆ.
- ಇತರೆ ಅನುದಾನದಲ್ಲಿ ವಾಹನ ಖರೀದಿ, ಬುಟ್ಟಿ/ಡಸ್ಟ್‌ಬಿನಗಳನ್ನು ಖರೀದಿಸಲು ಉಪಯೋಗಿಸಿರುತ್ತಾರೆ.
- ಸದರಿ ಯೋಜನೆಯಲ್ಲಿ ಅಳವಡಿಸಿದ 9 ಗ್ರಾಮ ಪಂಚಾಯತಿಯ ಎಲ್ಲ ಗ್ರಾಮಗಳಲ್ಲಿಯ ಪ್ರತಿ ಮನೆಗೆ ಹಸಿರು ಮತ್ತು ನೀಲಿ ಬುಟ್ಟಿಗಳನ್ನು ಹಸಿಕಸ ಮತ್ತು ಪ್ಲಾಸ್ಟಿಕ್ ಕಸಗಳನ್ನು ವಿಂಗಡನೆ ಮಾಡಿ ಕಸ ವಿಲೇವಾರಿ ವಾಹನದಲ್ಲಿ ಈ ಘಟಕಕ್ಕೆ ವಿಲೇವಾರಿ ಮಾಡಲಾಗುತ್ತದೆ.
- ಸದರಿ ತಾಜ್ಯ ಘಟಕದಲ್ಲಿ ಸಂಗ್ರಹಿಸಿದ ಘನ ತಾಜ್ಯಕ್ಕೆ ಮೈಸೂರಿನಿಂದ ತರಿಸಿದ ಕಲ್ಚರ್(ಸೂಕ್ಷ್ಮಾಣು ಜೀವಿಗಳ ಕಲ್ಚರ್) ಸಿಂಪರಣೆ ಮಾಡಿ ವಾಸನೆ ಬಾರದ ಹಾಗೆ ನೋಡಿಕೊಂಡಿರುತ್ತಾರೆ
- ಸಂಗ್ರಹ ಮಾಡಿದ ಕಸದ ವಿಂಗಡನೆಯ ಯಂತ್ರವನ್ನು ಅಳವಡಿಸಲಾಗಿದೆ: ಈ ಯಂತ್ರವು ಪ್ಲಾಸ್ಟಿಕ್ ಮತ್ತು ಇತರೆ ಕಸವನ್ನು ವಿಂಗಡಿಸುವ ಮಶಿನ್ ಇರುತ್ತದೆ ಇದರಿಂದ ಪ್ಲಾಸ್ಟಿಕ್ ಕಸ, ಕಲ್ಲುಜಲ್ಲಿ/ಉಸುಕು ಮಿಶ್ರಿತ ಕಸ ಮತ್ತು ಮಣ್ಣುಮಿಶ್ರಿತ ಕಸವನ್ನು ಬೇರ್ಪಡಿಸುತ್ತಾರೆ.
- ಕಸದಲ್ಲಿರುವ ಟಾಯರ, ಚಪ್ಪಲ, ಪ್ಲಾಸ್ಟಿಕ್ ಕಪ್ಪು ಮತ್ತು ಟ್ಯುಬಲಾಯಟ್‌ಗಳನ್ನು ಬೇರ್ಪಡಿಸುತ್ತಾರೆ
- ಎರಡು ಪ್ರಕಾರದಲ್ಲಿ ಕಸ ವಿಂಗಡಣೆಯನ್ನು ಮಾಡುತ್ತಾರೆ

(ಕೊಳೆಯುವ ಕಸ ಮತ್ತು ಕೊಳೆಯಲಾರದದ ಕಸ

- ಮಣ್ಣುಮಿಶ್ರಿತ ಮಣ್ಣಿನ ತಾಜ್ಯವನ್ನು ಎರೆಹುಳು ಘಟಕಕ್ಕೆ ಹಸ್ತಾಂತರ ಮಾಡಿ ಗೊಬ್ಬರವನ್ನು ತಯಾರಿಸುತ್ತಾರೆ ಮತ್ತು ಈ ಎರೆಹುಳ ತೊಟ್ಟಿಯಲ್ಲಿ 30%ರಷ್ಟು ಸಗಣಿ ಗೊಬ್ಬರವನ್ನು ಸೇರಿಸುತ್ತಾರೆ.
- ಎರೆಹುಳು ಘಟಕದಿಂದ ಹೊರಬಂದಂತಾ ದ್ರಾವಣವನ್ನು ಸಂಗ್ರಹಿಸಿ ಇದನ್ನು ಸಸಿಗಿಡಗಳಿಗೆ ಉಪಯೋಗಿಸುತ್ತಾರೆ
- ಪ್ಲಾಸ್ಟಿಕ, ರಬ್ಬರ್/ಟಾಯರ್ಸ, ಹವಾಯಿ ಚಪ್ಪಲ್‌ಗಳನ್ನು ವಿಂಗಡನೆಯ ಪ್ರಕಾರ ಒಂದು ಸ್ಥಳದಲ್ಲಿ ಕೂಡಿ ಹಾಕಿ, ಈ ಘನತಾಜ್ಯವನ್ನು ಹಾಳು ಮಾಡದೆ ವಿವಿಧ ರೀತಿಯ ರಟ್ಟು ಮತ್ತು ಪ್ಲಾಸ್ಟಿಕ್‌ಗಳನ್ನು ಬೆಲಿಂಗ್-ಮಶಿನ್‌ನಿಂದ ಪ್ಯಾಕ್ ಮಾಡುತ್ತಾರೆ. ಇದರಿಂದ ಸಾಗಾಣಿಕೆಗೆ ಅನುಕೂಲವಾಗುತ್ತದೆ.
- ಬೆಲಿಂಗ್-ಮಶಿನ್‌ನಲ್ಲಿ (ಬೈಂಡಿಂಗ್) ಪ್ರೆಸ್‌ಮಾಡಿ ಮಾರಾಟಮಾಡುವ ಉದ್ದೇಶವನ್ನು ಹೊಂದಿರುತ್ತಾರೆ
- ಚಾಪರ ಮಶಿನ್‌ನಿಂದ ಕಸವನ್ನು ತುಂಡರಿಸಿ/ಪುಡಿಮಾಡಿ ಎರೆಹುಳುಗಳಿರುವ ತೊಟ್ಟಿಗೆ ಹಾಕುತ್ತಾರೆ ಈ ತೊಟ್ಟಿಯಲ್ಲಿ ಸುಮಾರು 45 ದಿನಗಳಲ್ಲಿ ಗೊಬ್ಬರ ತಯರಾಗುತ್ತದೆ.
- ಕಸದ ವಿಂಗಡನೆಯಾದ ಒಣಕಸವನ್ನು (ಎಲೆ/ರೆಂಬೆ/ಕೊಂಬೆ) ಮಶಿನ್ ಮುಖಾಂತರ ಪುಡಿಮಾಡಿ ಎರೆಹುಳು ಘಟಕಕ್ಕೆ ಹಾಕುತ್ತಾರೆ
- ಪ್ಲಾಸ್ಟಿಕ ವಸ್ತುಗಳನ್ನು ಕರಗಿಸಿ ಗಟ್ಟಿಕಲ್ಲಿನಂತೆ ಮಾಡುವ ಯಂತ್ರ (ಘಟ್ಟಾ ಮಶಿನ್)ವನ್ನು ಅಳವಡಿಸಿರುತ್ತಾರೆ ಮತ್ತು ಇದರಿಂದ ದಾರ ಹಗ್ಗ ಮತ್ತು ಇನ್ನಿತರ ಸಾಮಗ್ರಿಗಳನ್ನು ತಯಾರಿಸುತ್ತಾರೆ
- ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಆರೋಗ್ಯ ರಕ್ಷಣೆ ಸಲಕರಣೆಗಳನ್ನು ನೀಡಿರುತ್ತಾರೆ ಹಾಗೂ ಶೌಚಾಲಯಗಳನ್ನು ನಿರ್ಮಿಸಿರುತ್ತಾರೆ.
- ಈ ಘಟಕದ ಮುಂಭಾಗದಲ್ಲಿ ತರಬೇತಿಯ ಕೊಠಡಿಯನ್ನು ನಿರ್ಮಿಸುತ್ತಿದ್ದಾರೆ. ಈ ಕೊಠಡಿಯಲ್ಲಿ ಸುಮಾರು ಒಂದು ದಿನಕ್ಕೆ 100 ಜನರಿಗೆ ಮಹಿಳೆಯರಿಗೆ, ಪುರುಷರಿಗೆ ಮತ್ತು ಶಾಲಾ ಕಾಲೇಜು ಮಕ್ಕಳಿಗೆ ವ್ಯಯಕ್ತಿಕ ಶೌಚಾಲಯಗಳ ಬಳಕೆ ಹಾಗೂ ಕಸವಿಂಗಡಣೆ ತರಬೇತಿಯನ್ನು ನೀಡುವ ಉದ್ದೇಶವನ್ನು ಹೊಂದಿರುತ್ತಾರೆ ಮತ್ತು ಇಂತಹ ತರಬೇತಿ ಕೇಂದ್ರ ರಾಜ್ಯದಲ್ಲಿ ಪ್ರಥಮದ್ದಾಗಿದೆ.
- ಅಲ್ಲಿರುವ ಖಾಲಿ ಸ್ಥಳಗಳಲ್ಲಿ ನರ್ಸರಿಯನ್ನು ಬೆಳೆಸುವ ಯೋಜನೆಯನ್ನು ಹೊಂದಿರುತ್ತಾರೆ.
- ಈ ಎಲ್ಲಾ ಪ್ರಕ್ರಿಯೆಗಳಿಗೆ ಸುಮಾರು 4 ಎಕರೆ ಜಮೀನನ್ನು ಹೊಂದಿರುತ್ತಾರೆ.

ಹುಲಿಕೋಟೆ ಗ್ರಾಮ ಪಂಚಾಯತಿ ಪ್ರಾರಂಭವಾದಾಗಿನಿಂದ ಗ್ರಾಮ ಪಂಚಾಯತಿ ಸದಸ್ಯರ ಚುನಾವಣೆ ಆಗಿರುವದಿಲ್ಲ (ಸದಸ್ಯರುಗಳು ಅವಿರೋಧವಾಗಿ ಆಯ್ಕೆ ಆಗಿರುತ್ತಾರೆ) ಮತ್ತು ಸದರಿ ಗ್ರಾಮ ಪಂಚಾಯಿತಿಯಿಂದ ಪ್ರತಿ ದಿನ 3100 ಅಂಗನವಾಡಿ/ಶಾಲೆ/ಕಾಲೇಜು ವಿದ್ಯಾರ್ಥಿಗಳಿಗೆ ವಾಹನದ ಮೂಲಕ ಶುದ್ಧನೀರನ್ನು (ಕುಡಿಯುವ) ಉಚಿತವಾಗಿ ಪೂರೈಸುತ್ತಾರೆ.

- ಸಾರ್ವಜನಿಕರಿಂದ ವಂತಿಗೆ ಸಂಗ್ರಹಣೆ ಮಾಡಿ 9 ಎಕರೆ ವಿಸ್ತೀರ್ಣದ ಮುಕ್ತಿವನ ನಿರ್ಮಾಣ ಮಾಡಿರುತ್ತಾರೆ. ಸದರಿ ನಿರ್ಮಾಣ ಕಾರ್ಯಕ್ಕೆ ಗ್ರಾಮದ ಪ್ರತಿಯೊಂದು ಮನೆಯಿಂದ ಶ್ರಮದಾನ ಮತ್ತು ಸ್ವಇಚ್ಛೆಯಿಂದ ವಾಹನ ಸೌಲಭ್ಯವನ್ನು ಒದಗಿಸಿ ಉದ್ಯಾನವನದಂತಿರುವ ಸುಸಜ್ಜಿತ ಸಲಕರಣೆಗಳಿಂದ ಕೂಡಿದ ಸ್ಮಶಾನವನ್ನು (ಮುಕ್ತಿವನ) ನಿರ್ಮಿಸಿರುತ್ತಾರೆ ಇದು ರಾಜ್ಯಕ್ಕೆ ಮಾದರಿಯಾದ ಮುಕ್ತಿವನವಾಗಿದೆ.

ಮುಕ್ತಿವನಕ್ಕೆ ಹೊಂದಿಕೊಂಡಂತೆ ಇರುವ 4 ಎಕರೆ ಜಾಗದಲ್ಲಿ ಎಸ್‌ಟಿಪಿ (Sewage water treatment plant) ನಿರ್ಮಾಣ ಮಾಡಿದ್ದು ಗ್ರಾಮದಲ್ಲಿ ಬಳಕೆಯಾದ ನೀರು (ಎಲ್ಲ ರೀತಿಯ) ಒಳಚರಂಡಿ ಮೂಲಕ ಸದರಿ ಘಟಕಕ್ಕೆ ಬಂದು ಇಲ್ಲಿ ಇರುವ 5 ರೀತಿಯ ಹೊಂಡಗಳಲ್ಲಿ ತಾಜ್ಯ ವಿಂಗಡನೆಯಾಗಿ ಕೊನೆಗೆ ತೋಟಗಾರಿಕೆ ಹಾಗೂ ಕೃಷಿಗೆ ಬಳಕೆಯಾಗುವ ನೀರು ಲಭ್ಯವಾಗುತ್ತದೆ.

ಈ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಗ್ರಾಮದ ಜನರ ಸಹಕಾರದಿಂದ ಸದರಿ ಗ್ರಾಮ ಪಂಚಾಯಿತಿಯಿಂದ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕಾರಿಯಾಗಿದೆ ಎಂಬ ಅಂಶವು ಚರ್ಚೆಯ ಮೂಲಕ ತಿಳಿಯಲಾಗಿದ್ದು, ಗ್ರಾಮ ಪಂಚಾಯತಿಯಲ್ಲಿ ಗ್ರಾಮದಲ್ಲಿ ಶೇಕಡಾ 100% ರಷ್ಟು ಸಿಸಿ ರಸ್ತೆ ನಿರ್ಮಾಣವಾಗಿರುತ್ತದೆ ಮತ್ತು ಗ್ರಾಮ ಪಂಚಾಯಿತಿಯಿಂದ 3 ಪ್ರತ್ಯೇಕ ಸ್ಥಳಗಳಲ್ಲಿ ಉದ್ಯಾನವನ ನಿರ್ಮಾಣಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿರುತ್ತಾರೆ.

## ಹುಲಕೋಟಿ ಗ್ರಾಮ ಪಂಚಾಯತಿ, ಉತ್ತಮ ಅಭ್ಯಾಸಗಳು ಮತ್ತು ಸಾಧನೆಗಳು:

- ಸದರಿ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಪಂಚಾಯಿತಿ ಪ್ರಾರಂಭವಾದಾಗಿನಿಂದ ಗ್ರಾಮ ಪಂಚಾಯಿತಿ ಸದಸ್ಯರ ಚುನಾವಣೆ ಆಗಿರುವದಿಲ್ಲ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.
- 30 ವರ್ಷಗಳಿಂದ ಅವಿರೋಧ ಆಯ್ಕೆ (ಮೀಸಲಾತಿ ಪ್ರಕಾರ), ಚುನಾವಣೆ ಅನುದಾನವನ್ನು ಗ್ರಾಮದ ಅಭಿವೃದ್ಧಿಗೆ ಬಳಕೆ ಮಾಡಲಾಗಿರುತ್ತದೆ.

- ಮೇಲ್ಕಂಡ ಅಂಶದಿಂದ ನಮಗೆ ಕಂಡು ಬರುವುದೇನೆಂದರೆ ಗ್ರಾಮಸ್ಥರ ಸಹಕಾರ ಹಾಗೂ ಪಕ್ಷ, ಜಾತಿ ಮತ್ತು ಧರ್ಮ ಮೀರಿ ನೀಡಿದ ಸಹಕಾರದಿಂದ ಗ್ರಾಮಸ್ಥರ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದೆ.
- ಸದರಿ ಗ್ರಾಮದಲ್ಲಿ ಶೇಕಡಾ 100% ರಷ್ಟು ಸಿಸಿರಸ್ತೆ ಚರಂಡಿ ನಿರ್ಮಾಣವಾಗಿದ್ದು & ಸುಮಾರು 13 ವರ್ಷಗಳ ಹಿಂದೆಯೇ ಯು.ಜಿ.ಡಿ ಕಾಮಗಾರಿಯನ್ನು ಅಳವಡಿಸಿಕೊಂಡಿರುತ್ತಾರೆ.
- ರಾಜ್ಯದಲ್ಲಿ ಮೊದಲ ಬಾರಿಗೆ ಆರ್.ಓ ಘಟಕ ಪ್ರಾರಭವಾಗಿರುತ್ತದೆ– ಈ ಆರ್.ಓ ಘಟಕದಿಂದ ಸದರಿ ಗ್ರಾಮ ಪಂಚಾಯಿತಿಯಿಂದ ಪ್ರತಿ ದಿನ 3100 ಲೀಟರ್‌ನಷ್ಟು ಅಂಗನವಾಡಿ/ಶಾಲೆ/ಕಾಲೇಜು ವಿದ್ಯಾರ್ಥಿಗಳಿಗೆ ಪಂಚಾಯತಿಯ ಸ್ವಂತ ವಾಹನದ ಮೂಲಕ ಉಚಿತವಾಗಿ ಶುದ್ದನೀರನ್ನು (ಕುಡಿಯುವ) ಪೂರೈಸುತ್ತಾರೆ
- 1000 ಬೀದಿ ದೀಪಗಳಿಗೆ ಸೋಲಾರ ಅಳವಡಿಕೆ
- ಗ್ರಾಮ ಪಂಚಾಯಿತಿಯಿಂದ 3 ಪ್ರತೇಕ ಸ್ಥಳಗಳಲ್ಲಿ ಉದ್ಯಾನ ವನ ನಿರ್ಮಾಣಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿರುತ್ತಾರೆ.
- ಗ್ರಾಮ ಪಂಚಾಯಿತಿಯು ಮುಕ್ತಿವನದ ವಾಹನ, ಕಸದ ಸಂಗ್ರಹಣೆ ವಾಹನ, ಯುಜಿಡಿ ನಿರ್ವಹಣೆ, ಶುದ್ದ ಕುಡಿಯುವ ನೀರು ಸರಬರಾಜು ವಾಹನಗಳನ್ನು ಹೊಂದಿರುತ್ತಾರೆ.

## ಮುಕ್ತಿವನ:–

- ಸಾರ್ವಜನಿಕರಿಂದ ಸುಮಾರು 42,00,000 ರೂಪಾಯಿಗಳನ್ನು ವಂತಿಕೆ ರೂಪದಲ್ಲಿ ಸಂಗ್ರಹಣೆ ಮಾಡಿ 9 ಎಕರೆ ವಿಸ್ತೀರ್ಣದ ಮುಕ್ತಿವನ ನಿರ್ಮಾಣ ಮಾಡಿರುತ್ತಾರೆ. ಸದರಿ ನಿರ್ಮಾಣ ಕಾರ್ಯಕ್ಕೆ ಗ್ರಾಮದ ಪ್ರತಿಯೊಂದು ಮನೆಯಿಂದ ಹೆಚ್ಚುವರಿಯಾಗಿ ಶ್ರಮದಾನ ಮತ್ತು ಸ್ವಇಚ್ಚೆಯಿಂದ ವಾಹನ ಸೌಲಭ್ಯವನ್ನು ಒದಗಿಸಿ ಉದ್ಯಾನವನವಿರುವಂತೆ ಸುಸಜ್ಜಿತ ಸಲಕರಣೆಗಳಿಂದ ಕೂಡಿದ ಸ್ಮಶಾನವನ್ನು (ಮುಕ್ತಿವನ) ನಿರ್ಮಿಸಿರುತ್ತಾರೆ ಇದು ರಾಜ್ಯಕ್ಕೆ ಮಾದರಿಯಾದ ಮುಕ್ತಿವನವಾಗಿದೆ.
- ಮುಕ್ತಿಧಾಮ (ಸ್ಮಶಾನ) ಸರ್ವಧರ್ಮಗಳ ಏಕತೆ ಮತ್ತು ಸಹಕಾರದ ಜೊತೆ ಸಾರ್ವಜನಿಕರ ಸಹಭಾಗಿತ್ವ ಮತ್ತು ಶ್ರಮದಾನ ಮತ್ತು ವಂತಿಕೆ ನೀಡುವುದನ್ನು ಶ್ಲಾಘಿಸಬೇಕಾದ ಮತ್ತು ಅಳವಡಿಸಬೇಕಾದ ವಿಷಯ.
- ಈ ಮುಕ್ತಿಧಾಮವನ್ನು ಸಮಾರು 5 ಎಕರೆ ಜಮಿನನಲ್ಲಿ ನಿರ್ಮಿಸಿರುತ್ತಾರೆ.
- ಈ ಮುಕ್ತಿವನದಲ್ಲಿ ಬೇರೆ ಬೇರೆ ಜಾತಿಯ ಜನಾಂಗದವರಿಗೆ ಶವ ಸಂಸ್ಕಾರಕ್ಕೆ ಸ್ಥಳವನ್ನು ನಿಗದಿಪಡಿಸಿರುತ್ತಾರೆ.
- ಶವ–ಸಂಸ್ಕಾರ ವಿಧಿವಿಧಾನವನ್ನು ಆಚರಣೆ ಮಾಡಲು ಎಲ್ಲ ರೀತಿಯ ಸಾಮಗ್ರಿಗಳನ್ನು ಪೂರೈಸುತ್ತಾರೆ.
- ಮುಕ್ತಿವನ ಕಾರ್ಯಾಲಯದಲ್ಲಿ ನಿಧನ ಹೊಂದಿದವರ ಎಲ್ಲ ಮಾಹಿತಿನ್ನು ರಿಜಿಷ್ಟರ್‌ನಲ್ಲಿ ದಾಖಲಿಸುತ್ತಾರೆ.
- ಈ ಮುಕ್ತಿವನದಲ್ಲಿ ಗೋರಿಗಳನ್ನು ನಿರ್ಮಿಸಲು ಅವಕಾಶಗಳು ಇರುವುದಿಲ್ಲ.
- ಈ ಮುಕ್ತಿವನದಲ್ಲಿ ಎರಡು–ಚಿತಾಗಾರವನ್ನು ಅಳವಡಿಸಿದ್ದಾರೆ ಮತ್ತು ಶವಗಳನ್ನು ಸುಡಲು ಸಾಮಗ್ರಿಗಳನ್ನು ನೀಡುತ್ತಾರೆ.
- ಈ ಮುಕ್ತಿವನದಲ್ಲಿ ಚರಂಡಿ ವ್ಯವಸ್ತೆ, ರಸ್ತೆಯ ವ್ಯವಸ್ಥೆ ಶೌಚಾಲಯದ ವ್ಯವಸ್ಥೆ ಹಾಗೂ ನೀರಿನ ವ್ಯವಸ್ಥೆ , ಬೆಳಕಿನ ವ್ಯವಸ್ಥೆ ಮತ್ತು ಉದ್ಯಾನವನ್ನು ಮಾಡಿರುತ್ತಾರೆ.

## ದ್ರವ ತಾಜ್ಯ ನಿರ್ವಹಣೆ ಘಟಕ/Sewage Water Treatment Plant (STP)

- ಮುಕ್ತಿವನಕ್ಕೆ ಹೊಂದಿಕೊಂಡಂತೆ ಇರುವ 4 ಎಕರೆ ಜಾಗದಲ್ಲಿ ಎಸ್‌ಟಿಪಿ(Sewage water treatment plant) ನಿರ್ಮಾಣ ಮಾಡಿರುತ್ತಾರೆ
- ದ್ರವ ತಾಜ್ಯ ನಿರ್ವಹಣೆ (ಯು.ಜಿ.ಡಿ)ಯಿಂದ ಸಂಗ್ರಹ – ದ್ರವ ತಾಜ್ಯವನ್ನು ಆಧುನಿಕ ತಂತ್ರಜ್ಞಾನದ (Sewage water treatment plant) ಮೂಲಕ ನಿರ್ವಹಿಸುವುದು ಉತ್ತಮವಾಗಿದೆ
- ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಈ ಗ್ರಾಮ ಪಂಚಾಯತಿ ಮಟ್ಟದಲ್ಲಿ ವರ್ಡ ಬ್ಯಾಂಕ್‌ನ ಸಹಾಯದಿಂದ ಯು.ಜಿ.ಡಿ ಮಾಡಿರುತ್ತಾರೆ
- ಗ್ರಾಮದಲ್ಲಿ ಬಳಕೆಯಾದ ನೀರು (ಎಲ್ಲರೀತಿಯ) ಒಳಚರಂಡಿ ಮೂಲಕ ಸದರಿ ಘಟಕಕ್ಕೆ ಬಂದು ಇಲ್ಲಿ ಇರುವ 5 ರೀತಿಯ ಹೊಂಡಗಳಲ್ಲಿ ದ್ರವ ತಾಜ್ಯವನ್ನು ಸಂಸ್ಕರಿಸಿದ ನಂತರ ಕೊನೆಗೆ ಹಣ್ಣುಗಳನ್ನು(ಚಿಕ್ಕು/ಮಾವು/ತೆಂಗು) ಬೆಳೆಯುವ ರೈತರಿಗೆ ಪೈಪಲೈನ್ ಮುಖಾಂತರ ಸಂಸ್ಕರಿಸಿದ ನೀರನ್ನು ಒದಗಿಸುತ್ತಿದ್ದಾರೆ
- ಮುಂದಿನ ದಿನಗಳಲ್ಲಿ ಮೀನನ್ನು ಸಾಕುವ ಯೋಜನೆಯನ್ನು ರೂಪಿಸಲಿದ್ದಾರೆ

ಬಿಂಕದಕಟ್ಟೆ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ, ಶ್ರೀ ಕೃಷ್ಣಪ್ಪ ನಡುವಿನಮಠ ಮಾತನಾಡಿ ಗ್ರಾಮ ಪಂಚಾಯತಿಗಳ ಆಡಳಿತ ಕಾರ್ಯ ವೈಖರಿ, ಗ್ರಾಮ ಪಂಚಾಯತಿಯ ಸ್ಥಳೀಯ ಸರ್ಕಾರ ನಿರ್ವಹಣೆಯಲ್ಲಿ ಅಳವಡಿಸಿಕೊಂಡಿರುವ ಹೊಸ ಕಾರ್ಯತಂತ್ರಗಳು ಮತ್ತು ಪದ್ಧತಿಗಳ ಕುರಿತು ಮತ್ತು ಪಂಚಾಯತಿಗೆ ಗ್ರಾಮದ ಹಿರಿಯರನ್ನು ಒಳಗೊಂಡ ಸಲಹಾ ಸಮಿತಿಯ ಪೂರಕ ಸಹಕಾರದ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು. ನಂತರದಲ್ಲಿ ಶಿಬಿರಾರ್ಥಿಗಳೊಂದಿಗೆ ಗ್ರಾಮದಲ್ಲಿರುವ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವೀಕ್ಷಣೆಗೆ ಹೊರಟವು.

ಮಹಾತ್ಮ ಗಾಂಧಿ ಎನ್‌ಆರ್‌ಜಿಎ ಯೋಜನೆಯಡಿ ನಿರ್ಮಿಸಿದ ಕೆರೆ ಕಮ್ ಪಾರ್ಕ (ಸಂಜೆ ಗ್ರಾಮಸ್ಥರು

ವಿಹಾರಕ್ಕಾಗಿ ಪಾರ್ಕ್‌ಗೆ ಬರುತ್ತಿರುತ್ತಾರೆ) ವಿಕ್ಷೀಸಿದೆವು ನಂತರದಲ್ಲಿ ಡಿಜಿಟಲ್ ಗ್ರಂಥಾಲಯ, ಕಾಂಕ್ರೀಟ್ ರಸ್ತೆಗಳು (ಸ್ವಚ್ಛತೆಯಿಂದ) ಮಹಿಳೆಯರಿಗೆ ಸಾಮೂಹಿಕ ಶೌಚಾಲಯ, ಸಮುದಾಯ ಭವನ (ಮದುವೆ ಸಮಾರಂಭಗಳಿಗೆ), ಶುದ್ಧ ಕುಡಿಯುವ ನೀರಿನ ಘಟಕ ಮತ್ತು ಗ್ರಾಮೀಣ ಗೌರವ ಘಟಕ (ಮಹಿಳೆ ಮತ್ತು ಪುರುಷರಿಗಾಗಿ)ವನ್ನು ವೀಕ್ಷಿಸಿ ಗ್ರಾಮ ಪಂಚಾಯತಿಯ ಅಧ್ಯಕ್ಷರುಗಳು, ಪಿ.ಡಿ.ಒ ಮತ್ತು ಸದಸ್ಯರು ಹಾಗೂ ಗ್ರಾಮಸ್ಥರೊಂದಿಗೆ ಚರ್ಚಿಸುತ್ತಾ ಮಾಹಿತಿಯನ್ನು ಪಡೆದರು.

## ಬಿಂಕದಕಟ್ಟಿ ಗ್ರಾಮ ಪಂಚಾಯತಿ ಉತ್ತಮ ಅಭ್ಯಾಸಗಳು ಮತ್ತು ಸಾಧನೆಗಳು

- ಗ್ರಾಮಕ್ಕೆ ಹುಬ್ಬಳ್ಳಿ ಗದಗ ಹೆದ್ದಾರಿಯಿಂದ ಇರುವ ರಸ್ತೆಗೆ ನಾಮಫಲಕ ಅಳವಡಿಸಿ ಗ್ರಾಮದಲ್ಲಿ ಪ್ರತಿಯೊಂದು ಕಛೇರಿಗಳಿಗೆ ಹೋಗುವ ಸೂಚನಾ ಫಲಕವನ್ನು ಹಾಕಿರುತ್ತಾರೆ
- ಗ್ರಾಮ ಪ್ರತಿ ರಸ್ತೆಯು ಸಿಸಿ/ಡಾಂಬರ/ಪೆವರ್ಸಕಲ್ಲುಗಳಿಂದ ನಿರ್ಮಾಣ ಮಾಡಿದ್ದು ಎಲ್ಲ ರಸ್ತೆಗಳು ನೋಡಲು ಸ್ವಚವಾಗಿ ಗೋಚರಿಸುತ್ತವೆ.
- ಗ್ರಾಮದ ಎಲ್ಲ ರಸ್ತೆಗಳಿಗೆ (ಒಳ) ಚರಂಡಿಗಳನ್ನು ನಿರ್ಮಿಸಿರುವವರಿಂದ ರಸ್ತಯ ಮೇಲೆ ನೀರು ನೋಡಲು ಸಿಗುವುದಿಲ್ಲ.
- ಗ್ರಾಮ ಪಂಚಾಯಿತಿ ಎನ್‌ಆರ್‌ಇಜಿಎ ಅನುದಾನ 9 ಲಕ್ಷ, ಎಂಎಲ್‌ಎ ಫಂಡ್/ಅನುದಾನ 17 ಲಕ್ಷ ಮತ್ತು 14ನೇ ಹಣಕಾಸು ಯೋಜನೆಯಡಿಯ 5 ಲಕ್ಷದಲ್ಲಿ (ಒಟ್ಟು 31 ಲಕ್ಷಗಳಲ್ಲಿ) ಪಾಳು ಬಿದ್ದ ತಿಪ್ಪೆ ಗುಂಡಿಗಳನ್ನು ಬಯಲು ಮಲ ವಿಸರ್ಜನೆ ತಾಣವಾದ ಊರ ಮುಂದಿನ ಇಲ್ಲಿನ ಕೆರೆಯನ್ನು ಕೆರೆ, ಉದ್ಯಾನವನ ಹಾಗೂ ಕೆರೆಯಲ್ಲಿ ಕಾರಂಜಿ ಉದ್ಯಾನವನ್ನಾಗಿ ಪರಿವರ್ತಿಸಿದ್ದು. ಈಗ ಇದೊಂದು ಒಳ್ಳೆಯ ಪ್ರವಾಸಿ ತಾಣವಾಗಿ ನಿರ್ಮಾಣ ಮಾಡಿರುತ್ತಾರೆ. ಈ ಕೆರೆಯ ಮೇಲ್ಭಾಗದಲ್ಲಿ ವಾಯು ವಿಹಾರಕ್ಕಾಗಿ ಬೆಳಿಗ್ಗೆ ಹಾಗೂ ಸಂಜೆ ಜನರು ಬರುತ್ತಾರೆ.
- ಗ್ರಾಮದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಕಾಲೋನಿಯಲ್ಲಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಗ್ರಾಮೀಣ ಗೌರವಘಟಕ ನಿರ್ಮಾಣ ಮಾಡಿ ವ್ಯವಸ್ಥಿತವಾಗಿ ನಿರ್ವಹಣೆ ಮಾಡುತ್ತಿದ್ದಾರೆ. ಈ ಘಟಕವು ಸ್ನಾನದ ಗೃಹಗಳನ್ನು ಒಳಗೊಂಡಿರುತ್ತದೆ. ಇದು ದೇವಸ್ಥಾನದ ಪಕ್ಕದಲ್ಲಿ ಇರುತ್ತದೆ ಈ ಮೂಲಕ ಸಮಾಜದ ಕೆಳವರ್ಗದ ಜನತೆಯಲ್ಲಿ ಸ್ವಚ್ಛತೆಯ ಅರಿವು ಮೂಡಿಸುವದರೊಂದಿಗೆ ದೇವಸ್ಥಾನಕ್ಕಿಂತ ಶೌಚಾಲಯದ ಮಹತ್ವ ಸಾರಿದ್ದು ತಿಳಿಯಪಡಿಸಿತ್ತದೆ.
- ಗ್ರಾಮದಲ್ಲಿ ಮಹಿಳೆಯರಿಗೆ ಸಮುದಾಯ ಆಧಾರಿತ ಶೌಚಾಲಯ 2011ರಲ್ಲಿ ನಿರ್ಮಾಣಮಾಡಿ ಇಲ್ಲಿಯವರೆಗೆ ನಿರ್ವಹಿಸುತ್ತಾ ಬಂದಿದ್ದಾರೆ.
- ಗ್ರಾಮದ ಗ್ರಂಥಾಲಯವನ್ನು ರೂ.85000 ಅನುದಾನ ಗಳಲ್ಲಿ ಇ-ಗ್ರಂಥಾಲಯ (ಇ-ಲೈಬ್ರರಿ)ವಾಗಿ ಪರಿವರ್ತಿಸಿದ್ದು 4 ಟ್ಯಾಬಗಳನ್ನು ಇಟ್ಟು ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಲೈಬ್ರರಿಸೇವೆಯನ್ನು ನೀಡುತ್ತಿದ್ದಾರೆ ಹಾಗೂ ಟ್ಯಾಬ್ ಮುಖಾಂತರ ಪುಸ್ತಕಗಳನ್ನು ಓದಲು ಉಪಯೋಗಿಸುತ್ತಾರೆ.
- ಗ್ರಾಮ ಪಂಚಾಯತಿ & ಗ್ರಾಮಸ್ಥರ ನಡುವೆ ಹೊಂದಾಣಿಕೆ ಉದ್ದೇಶದಿಂದ ಹಿರಿಯರ ಒಂದು ಸಲಹಾ ಸಮಿತಿ ರಚನೆ ಮಾಡಿರುತ್ತಾರೆ. ಈ ಸಮಿತಿಯು ಗ್ರಾಮಸ್ಥರು ಮತ್ತು ಗ್ರಾಮ ಪಂಚಾಯತಿಯ ಮಧ್ಯೆ ಸಮನ್ವಯತೆಯಿಂದ ಕಾರ್ಯನಿರ್ವಹಿಸುತ್ತಿದೆ.
- ಸುಮಾರು 16 ಕೋಟಿ ವೆಚ್ಚದಲ್ಲಿ 5000 ಹೆಕ್ಟೇರ್ ಪ್ರದೇಶದಲ್ಲಿ (ಹಿರೆಹಂದಿಗೋಳ ಮತ್ತು ಬಿಂಕದಕಟ್ಟಿ ಗ್ರಾಮಗಳು) ಸಮಗ್ರ ಜಲಾನಯನ ಅಭಿವೃದ್ದಿಗಾಗಿ (Ridge to valley conept) ಶ್ರೀ.ರಾಜೇಂದ್ರಸಿಂಗ್ (ಮಾಗೆಸ್ಸೆ ಪುರಸ್ಕೃತರು) ಇವರ ಮಾರ್ಗದರ್ಶನದಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸಿರುತ್ತಾರೆ. ಈ ಯೋಜನೆಯಲ್ಲಿ ಬದು ನಿರ್ಮಾಣ, ಒಳಗಟ್ಟಿ, ಮತ್ತು ಕೃಷಿ ಹೊಂಡಗಳನ್ನು ನಿರ್ಮಿಸುತ್ತಿದ್ದಾರೆ ಹಾಗೂ ಈ ಪ್ರದೇಶವನ್ನು ಅರಣ್ಯೀಕರಣಗೊಳಿಸುತ್ತಿದ್ದಾರೆ.
- ಈ ಗ್ರಾಮದಲ್ಲಿ ಶಾಸಕರಿಂದ, ಜಿಲ್ಲಾ ಪಂಚಾಯತಿಯಿಂದ ಮತ್ತು ತಾಲ್ಲೂಕು ಪಂಚಾಯಿತಿಗಳಿಂದ ಅನುದಾನವನ್ನು ಉಪಯೋಗಿಸಿಕೊಂಡಿರುತ್ತಾರೆ.
- ಪ್ರಮುಖವಾಗಿ ಈ ಗ್ರಾಮದಲ್ಲಿರುವ ಎಲ್ಲ ರಸ್ತೆಗಳು ಸ್ವಚ್ಛವಾ ಗಿರುತ್ತವೆ. ಎಲ್ಲಿಯೂ ಕೂಡಾ ಒತ್ತುವರಿ ಇರುವುದಿಲ್ಲ
- ಸಹಕಾರ ಸಂಘಗಳ ಮುಖಾಂತರ ಯುವಕರಿಗೆ ಯುವತಿ ಯರಿಗೆ ಉಚಿತ ಕಂಪ್ಯೂಟರ್ ತರಬೇತಿಯನ್ನು ನೀಡುತ್ತಾರೆ.
- ಗ್ರಾಮ ಮಧ್ಯದಲ್ಲಿ ಮಂಗಲ ಕಾರ್ಯಾಲಯವನ್ನು ನಿರ್ಮಿಸಿರುತ್ತಾರೆ. ಈ ಕಾರ್ಯಾಲಯದಲ್ಲಿ ಮದುವೆ ಮಾಡುವವರು ಕೇವಲ 2500ರೂಗಳನ್ನು ಮಾತ್ರ ನೀಡಿ ಬಾಡಿಗೆ ಪಡೆಯುತ್ತಾರೆ.
- ಎಲ್ಲ ರೈತರು ಜಮೀನುಗಳಿಗೆ ರಸ್ತೆಯನ್ನು ಮಾಡಿರುತ್ತಾರೆ (ಮಹಾತ್ಮ ಗಾಂಧಿ ಎನ್ ಆರ್ ಜಿ,.ಎ ಯೋಜನೆಯ ನಮ್ಮ ಹೊಲ ನಮ್ಮ ದಾರಿ) ಹಾಗೂ ಜಲಾನಯನ ಇಲಾಖೆಯಿಂದ ಪ್ರತಿಯೊಂದು ಹೊಲಗಳನ್ನು ಅಭಿವೃದ್ಧಿಪಡಿಸಿಕೊಂಡಿರುತ್ತಾರೆ.
- ಈ ಗ್ರಾಮದಲ್ಲಿರುವ ಎಲ್ಲಾ ಬೀದಿದೀಪಗಳಿಗೆ ಟೈಮರ್ ಅಳವಡಿಸಲಾಗಿದೆ.
- ಪಂಚಾಯತಿಯ ಮುಂಭಾಗದಲ್ಲಿ Display Board ಅಳವಡಿಸಿದ್ದು. ಅದರ ಮೂಲಕ ಸರ್ಕಾರದ ಯೋಜನೆಗಳನ್ನು ಜನರಿಗೆ ತಿಳಿಸುವುದಾಗಿದೆ. ■

ವರದಿ



ಡಿ.ವ್ಹಿ.ಅಂಗೂರ

ಐ.ಇ.ಸಿ ಸಂಯೋಜಕರು
ನರೇಗಾ ತಾಲೂಕಾ ಪಂಚಾಯತ
ರಾಣೇಬೆನ್ನೂರ.
ಜಿಲ್ಲಾ ಪಂಚಾಯತ ಹಾವೇರಿ.
ಮೊ. 9342383870

**ಅಂಗನವಾಡಿ ಕಲಿಕಾ ಕೇಂದ್ರ ಮಕ್ಕಳ ಕಲಿಕಾ ಸೇವಾ ಕೇಂದ್ರಗಳು. ರಾಷ್ಟ್ರದ ಹಾಗೂ ರಾಜ್ಯದ ಯೋಜನೆಗಳನ್ನು ಪರಿಚಯಿಸುವ ಕಲಿಕಾ ಕೇಂದ್ರವಾಗಿದೆ. ಸಾರ್ವಜನಿಕರ ಹಾಗೂ ಜನಪ್ರತಿನಿಧಿಗಳ ಕನಸು ನನಸಾಗುವ ಹಲವು ಮಾಹಿತಿಗಳ ಕೋಶವನ್ನು ಒಳಗೊಂಡ ಸೇವಾ ಕೇಂದ್ರಗಳು. ಪಂಚಾಯತಿ ಮಟ್ಟದಲ್ಲಿ ಇಂತಹ ಕೇಂದ್ರಗಳು ಸರ್ಕಾರದ ಅಭಿವೃದ್ಧಿಪರ ಚಟುವಟಿಕೆಗಳನ್ನು ತಿಳಿಸುವ ತಾಣವಾಗಿ ಕಾರ್ಯ ನಿರ್ವಹಿಸಬೇಕು.**

# ಬಾಲ ಮಕ್ಕಳ ಕಲಿಕಾ ಕೇಂದ್ರ

ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅಂತರವಳ್ಳಿ ಗ್ರಾಮ ಪಂಚಾಯತಿಯು ಆಲದಕಟ್ಟಿ, ನಂದಿಹಳ್ಳಿ ಮತ್ತು ಅಂತರವಳ್ಳಿ ಗ್ರಾಮಗಳನ್ನು ಒಳಗೊಂಡಿದ್ದು. ಶಿಕ್ಷಣ ಸಂಸ್ಥೆಗಳಾದ ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗಳನ್ನು ಹೊಂದಿದೆ. ಸುಮಾರು 1103 ಕುಟುಂಬಗಳನ್ನು ಹೊಂದಿದ್ದು ಗ್ರಾಮ ಪಂಚಾಯತಿಯಲ್ಲಿ 3 ಗ್ರಾಮಗಳಿಂದ 6 ಅಂಗನವಾಡಿ ಕೇಂದ್ರಗಳಿವೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅಂಗನವಾಡಿ ಕಲಿಕಾ ಕೇಂದ್ರ ನಿರ್ಮಾಣ ಮಾಡಲು ಅವಕಾಶ ಮಾಡಿದ್ದು 2016–17 ರಲ್ಲಿ ಪ್ರಾರಂಭಿಸಲಾಯಿತು. 2017–18 ರಲ್ಲಿ ಕಾಮಗಾರಿ ಪೂರ್ಣಗೊಂಡು ಮಕ್ಕಳಿಗೆ ಉತ್ತಮ ವಾತಾವರಣ ಹಾಗೂ ಕಲಿಕಾ ಕೇಂದ್ರ ಮಕ್ಕಳಿಗೆ ಕಲ್ಪಿಸಿದಂತಾಗಿದೆ. ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಹಮಿದಾಬೇಗಂ ಕಿಲೆದಾರ ಹಾಗೂ ಸರ್ವಸದಸ್ಯರ ಸಹಕಾರದೊಂದಿಗೆ ಅಂಗನವಾಡಿ ಕಲಿಕಾ ಕೇಂದ್ರ ಸಜ್ಜುಗೊಂಡಿದೆ.

## ಜನರಲ್ಲಿ ಜಾಗೃತಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನವು ಈ ಗ್ರಾಮಕ್ಕೆ ವರದಾನವಾಗಿದೆ. ಇದರ ಮಹತ್ವವನ್ನು ರೋಜಗಾರ್ ದಿನಾಚರಣೆ ಮೂಲಕ ಜನರಿಗೆ ತಿಳಿಸಿಕೊಡುವುದರ ಮೂಲಕ ಹಾಗೂ ಮನೆ ಮನೆ ಭೇಟಿ ಮಾಡಿ ಜನರಿಗೆ ಈ ಯೋಜನೆಯಲ್ಲಿರುವ 21 ವಲಯ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಲಾಯಿತು. ಜನರಿಗೆ ರೋಜ್‌ಗಾರ್ ದಿನಚಾರಣೆಯ ಮೂಲಕ ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗಿದೆ.

ಶಿಶು ಅಭಿವೃದ್ಧಿ ಯೋಜನೆಯಲ್ಲಿ ಮಕ್ಕಳಿಗೆ ಉತ್ತಮ ಭವಿಷ್ಯ ಭಾರತದ ಭವಿಷ್ಯ ಎಂಬ ದೂರದೃಷ್ಟಿಯ ಹಿನ್ನೆಲೆ ಇದೆ. ಮಕ್ಕಳ ಕಲ್ಯಾಣ ಮತ್ತು ಅಭಿವೃದ್ಧಿ ಇಲಾಖೆಯಲ್ಲಿ ಜಾರಿಯಲ್ಲಿರುವ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಿ ಶ್ರಮಿಸುತ್ತಿದೆ. ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲಾಗಿರುವ ಗರ್ಭಿಣಿ, ಬಾಣಂತಿ ಕಿಶೋರಿಯರು ಮತ್ತು 6 ವರ್ಷ ಒಳಪಟ್ಟ ಮಕ್ಕಳ ಕಲ್ಯಾಣ ಯೋಜನೆಯು ಮುಖ್ಯ ಗುರಿಯಾಗಿರುತ್ತದೆ.

## ಯೋಜನೆ ಅನುಷ್ಠಾನ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಮುಖ ಅಂಶವಾಗಿರುವ ಅಂಗನವಾಡಿ ಕಲಿಕಾ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಅನುವು ಮಾಡಿ ಕೊಟ್ಟಿದ್ದು, ಪ್ರಾರಂಭದಲ್ಲಿ ಸಾಮಾಗ್ರಿ ವೆಚ್ಚ ಜಾಸ್ತಿ, ಕೂಲಿ ಅಂಶ ಕಡಿಮೆಯೆಂದು ಭಾವಿಸಿದ್ದ ಜನರಿಗೆ ಕಟ್ಟಡ ನಿರ್ಮಾಣ ಹಂತದಲ್ಲಿ ಇದರ ವಾಸ್ತವದ ಬಗ್ಗೆ ಮನದಟ್ಟಾಯಿತು. ಹಾಗೆಯೇ ವಾಸ್ತವವಾಗಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಶೇಕಡ 60:40 ಕೂಲಿ ಮತ್ತು ಸಾಮಾಗ್ರಿ ವೆಚ್ಚಕ್ಕಾಗಿ ಉಪಯೋಗಿಸಲು ಅವಕಾಶವಿರುವುದನ್ನು ತಿಳಿದುಕೊಂಡರು.

ಈ ಕಟ್ಟಡ ನಿರ್ಮಾಣದ ಒಟ್ಟು ವೆಚ್ಚ ರೂ. 8.00 ಲಕ್ಷಗಳನ್ನು ನಿಗದಿ ಮಾಡಿದ್ದು, ಉದ್ಯೋಗ ಖಾತರಿ ಯೋಜನೆಯಡಿ 5.00 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 3.00 ಲಕ್ಷ ಅಂತರವಳ್ಳಿ ಗ್ರಾಮ ಪಂಚಾಯತಿಯಲ್ಲಿ 3 ಅಂಗನವಾಡಿ ಕಲಿಕಾ ಕೇಂದ್ರ ನಿರ್ಮಾಣವಾಗಿದೆ. ಈ ಅವಕಾಶದಿಂದ ಬಾಲ ಮಕ್ಕಳಿಗೆ ಕಲಿಕಾ



## ಯೋಜನೆ ಉದ್ದೇಶ

1. 6 ವರ್ಷದವರೆಗಿನ ಮಕ್ಕಳ ಆರೋಗ್ಯ, ಪೌಷ್ಟಿಕ ಮಟ್ಟವನ್ನು ವೃದ್ಧಿಸುವುದು.
2. ಮಗುವಿನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವುದು.
3. ಮಕ್ಕಳಲ್ಲಿ ಸಾವು, ಅನಾರೋಗ್ಯ, ಅಪೌಷ್ಟಿಕತೆ ಮತ್ತು ಶಾಲಾ ಬಿಡುವಿಕೆಯನ್ನು ಕಡಿಮೆಗೊಳಿಸುವುದು.
4. ಶಿಶು ಅಭಿವೃದ್ಧಿ ಕಾರ್ಯಕ್ರಮವನ್ನು ಉತ್ತಮಗೊಳಿಸುವ ಕಾರ್ಯನೀತಿ ಮತ್ತು ಅನುಷ್ಠಾನಗೊಳಿಸುವ ದಿಸೆಯಲ್ಲಿ ಪರಿಣಾಮಕಾರಿಯಾದ ಸಮನ್ವಯತೆಯನ್ನು ಸಾಧಿಸುವುದು.
5. ಆರೋಗ್ಯ ಮತ್ತು ಪೌಷ್ಠಿಕತೆಯ ಶಿಕ್ಷಣವನ್ನು ನೀಡುವುದರ ಮೂಲಕ ತಾಯಂದಿರಲ್ಲಿ ತಮ್ಮ ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆಯ ಅಗತ್ಯಗಳನ್ನು ಸರಿಯಾಗಿ ನೋಡಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು.
6. ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ಶಾಲಾ ಪೂರ್ವ ಚಟುವಟಿಕೆಯಲ್ಲಿ ತೊಡಗಿರುವ ದೃಶ್ಯ.

## ಐ.ಸಿ.ಡಿ.ಎಸ್ ಸೇವೆಗಳು

1. ಪೂರಕ ಪೌಷ್ಠಿಕ ಆಹಾರ
2. ಚುಚ್ಚುಮದ್ದು,
3. ಆರೋಗ್ಯ ತಪಾಸಣೆ.
4. ಮಾಹಿತಿ ಸೇವೆ
5. ಶಾಲಾಪೂರ್ವ ಶಿಕ್ಷಣ.
6. ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣ.




ವಾತವರಣಕ್ಕೆ ನೆರಳು ಮಾಡಿದ್ದರಿಂದ ತುಂಬಾ ಅನುಕೂಲವಾಗಿದೆ. ಮನಸ್ಸಿದ್ದರೆ ಮಾರ್ಗ ಎಂಬ ಗಾದೆಯಂತೆ ಎಲ್ಲರೂ ಫಣ ತೊಟ್ಟು ಕೆಲಸ ನಿರ್ವಹಿಸಿದರೆ ಹಿಡಿದ ಕೆಲಸವನ್ನು ಮಾಡಿ ತೋರಿಸಿದಂತೆ ಎಂಬ ನುಡಿಗೆ ಅಂತರವಳ್ಳಿ ಗ್ರಾಮ ಪಂಚಾಯತಿ ಸಾಕ್ಷಿಯಾಗಿದೆ.

ಅಂಗನವಾಡಿ ಕಲಿಕಾ ಕೇಂದ್ರ ಮಕ್ಕಳ ಕಲಿಕಾ ಸೇವಾ ಕೇಂದ್ರಗಳು. ರಾಷ್ಟ್ರದ ಹಾಗೂ ರಾಜ್ಯದ ಯೋಜನೆಗಳನ್ನು ಪರಿಚಯಿಸುವ ಕಲಿಕಾ ಕೇಂದ್ರವಾಗಿದೆ. ಸಾರ್ವಜನಿಕರ ಹಾಗೂ ಜನಪ್ರತಿನಿಧಿಗಳ ಕನಸು ನನಸಾಗುವ ಹಲವು ಮಾಹಿತಿಗಳ ಕೋಶವನ್ನು ಒಳಗೊಂಡ ಸೇವಾ ಕೇಂದ್ರಗಳು. ಪಂಚಾಯತಿ ಮಟ್ಟದಲ್ಲಿ ಇಂತಹ ಕೇಂದ್ರಗಳು ಸರ್ಕಾರದ ಅಭಿವೃದ್ಧಿಪರ ಚಟುವಟಿಕೆಗಳನ್ನು ತಿಳಿಸುವ ತಾಣವಾಗಿ ಕಾರ್ಯ ನಿರ್ವಹಿಸಬೇಕು. ಇಂತಹ ಕೇಂದ್ರಗಳ ಬಗ್ಗೆ ನಮ್ಮ ಗ್ರಾಮ ಸಮುದಾಯಕ್ಕೆ ಹಲವು ನಿರೀಕ್ಷೆಗಳು ಇರುತ್ತವೆ. ಅವುಗಳನ್ನು ಸಾಕಾರಗೊಳಿಸುವ ಸಂಕಲ್ಪದಲ್ಲಿ ಸರ್ಕಾರವು ಅಂಗನವಾಡಿ ಕಲಿಕಾ ಕೇಂದ್ರವನ್ನು ನಿರ್ಮಿಸಿದೆ. ಇವುಗಳನ್ನು ಉಳಿಸಿ, ಬೆಳೆಸಿ ಗ್ರಾಮೀಣ ಜನರು ಇವುಗಳ ಸೇವೆಯನ್ನು ಬಳಸಿಕೊಂಡು ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆದುಕೊಳ್ಳಲಿ.

### ಸಮುದಾಯದ ಅಭಿಪ್ರಾಯ.

ಈ ಕಾಮಗಾರಿಯಿಂದ ಜನಪ್ರತಿನಿಧಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಾರ್ವಜನಿಕರು ಬಹಳ ಸಂತೋಷಗೊಂಡು ಸರ್ಕಾರದ ಯೋಜನೆಯನ್ನು ಸಮುದಾಯದ ಅಗತ್ಯತೆಗೆ ತಕ್ಕಂತೆ ಉಪಯೋಗಿಸಿಕೊಂಡಿದ್ದು ಸ್ಥಳೀಯರು ಈ ಕಾಮಗಾರಿಯ ಗುಣಮಟ್ಟದ ಬಗ್ಗೆ ಹರ್ಷ ವ್ಯಕ್ತ ಪಡಿಸಿರುತ್ತಾರೆ. ಉದ್ಯೋಗ ಖಾತರಿ ಯೋಜನೆಯಿಂದ ಬಹುದಿನದ ಕನಸು ನನಸು ಮಾಡಿದೆ ಎಂಬುದು ಗ್ರಾಮಸ್ಥರ ಅಭಿಪ್ರಾಯವಾಗಿದೆ. ■

ಕವಿಯ(ಕ್ಷ) ಪ್ರಶ್ನೆ



# ಸ್ಥಳೀಯ ಮಾರಾಟಗಾರರ ಬಳಿ ಚೌಕಶಿ ಏಕೆ?

ನಮ್ಮ ಮನಸ್ಥಿತಿಯೇ ಹಾಗೇ ಅನಿಸುತ್ತದೆ. ಬಲಿಷ್ಠರೆದುರು ಬಗ್ಗುತ್ತೇವೆ. ಅಸಹಾಯಕರ ಬಳಿ ಅನವಶ್ಯಕ ಬಲಿಷ್ಠರಾಗುತ್ತೇವೆ. ಎದುರಿಸಲಾಗದ ಕಡೆ ಬಾಲ ಮುದುರಿ, ಅಶಕ್ತರಿಗೆ ವಿನಾಕಾರಣ ಚಾಟಿ ಬೀಸಲು ಮುಂದಾಗುವುದು ಮನುಷ್ಯನ ಸಹಜ ಗುಣವೇನೋ ಎಂಬಂತಾಗಿದೆ. ಇದಕ್ಕೆ ಸ್ಪಷ್ಟ ಉದಾಹರಣೆ ಇಲ್ಲಿದೆ ನೋಡಿ.

ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಅಥವಾ ಬೃಹತ್ ಮಾರುಕಟ್ಟೆಗಳಲ್ಲಿನ ಪಾಶ್ಚಾತ್ಯ ಮಾರುಕಟ್ಟೆ ಸಂಸ್ಕೃತಿಗೆ ಶರಣಾಗಿ, ಅಲ್ಲಿನ ಮೋಸ ಜಾಲದ ಅರಿವಿಲ್ಲದೇ, ಎಂದೋ ಕೋಯ್ದ ತರಕಾರಿ ಸೊಪ್ಪುಗಳನ್ನು ಶೀತಲೀಕರಣಗೊಳಿಸಿ, ಅಂದವಾಗಿ ಅಲಂಕರಿಸಿ, ಅವುಗಳ ಮೇಲೆ ಬೆಲೆ ಪಟ್ಟಿಯನ್ನು ಅಂಟಿಸಿ, ಇಂದೇ ಕೋಯ್ಲಾದ ತರಕಾರಿ/ಸೊಪ್ಪಿನಂತೆ ಜೋಡಿಸಿಟ್ಟ ಪರಿಗೆ ಬೆರಗಾಗಿ, ಅಂಟಿಸಿದ ಬೆಲೆಪಟ್ಟಿಯ ಬಗ್ಗೆ ಚೌಕಾಶಿ ಮಾಡಿದಲ್ಲಿ ಸುತ್ತಮುತ್ತಲಿನವರು ನಮ್ಮನ್ನೆಲ್ಲಿ ತಪ್ಪಾಗಿ ತಿಳಿದುಬಿಡುವರೋ ಎಂಬ ಆತಂಕದಿಂದ ಮರುಮಾತನಾಡದೆ ಹಣವನ್ನು ತೆತ್ತು ಹೊರಗೆ ಬಂದು ತಂಗಳಿನ ತರಕಾರಿ/ಸೊಪ್ಪನ್ನು ತಿನ್ನುವ ಜಾಯಮಾನಕ್ಕೆ ಅನಿವಾರ್ಯತೆಯಿಂದ ಒಗ್ಗಿಕೊಳ್ಳುವ ಪರಿಸ್ಥಿತಿಗೆ ನಾವೆಲ್ಲ ಬಂದಿದ್ದೇವೆ.

ಮತ್ತೊಂದು ಉದಾಹರಣೆಯನ್ನು ಗಮನಿಸಿ. ನಮ್ಮ ನಮ್ಮ ಮನೆಗಳ ಮುಂದೆಯೇ ತಾಜಾ ತರಕಾರಿ ಸೊಪ್ಪನ್ನು ಹೊತ್ತು ತಂದು ಮಾರಲೆತ್ನಿಸುವ ಮಾರಾಟಗಾರರ ಬಳಿ ಅಸಂಬದ್ಧವಾಗಿ ಚೌಕಾಶಿ ಮಾಡಿ ಬುದ್ಧಿವಂತತನ ಮೆರೆಯುತ್ತೇವೆ. ವಿನಾಕಾರಣ ಆ ಸಣ್ಣ ಪುಟ್ಟ ಮಾರಾಟಗಾರನ ದೈನಂದಿನ ಸಂಪಾದನೆಯನ್ನು ತಗ್ಗಿಸುತ್ತೇವೆ.

## ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ಮನೆಗಳ ಮುಂದೆಯೇ ತಾಜಾ ತರಕಾರಿ ಸೊಪ್ಪನ್ನು ತಂದು ಮಾರಲೆತ್ನಿಸುವ ಮಾರಾಟಗಾರರ ದೈನಂದಿನ ಸಂಪಾದನೆ ದೊಡ್ಡ ಮಾಲ್‌ಗಳಲ್ಲಿ ಅಥವಾ ಬೃಹತ್ ಮಾರುಕಟ್ಟೆಗಳಲ್ಲಿನ ದೈನಂದಿನ ಸಂಪಾದನೆಗೆ ಪೈಪೋಟಿ ನೀಡಬಲ್ಲದೆ?
2. ಸ್ಥಳೀಯ ಮಾರಾಟಗಾರರ ಬಳಿ ಅಸಂಬದ್ಧವಾಗಿ ಚೌಕಾಶಿ ಮಾಡಿ ಬುದ್ಧಿವಂತತನ ಪ್ರದರ್ಶಿಸುವುದು ಉಚಿತವೇ?
3. ಇಂತಹ ಅನವಶ್ಯಕ ಚೌಕಾಶಿ ಸ್ಥಳೀಯ ಮಾರಾಟಗಾರರ ಹೊಟ್ಟೆಪಾಡಿಗೆ ದೊಡ್ಡ ಹೊಡೆತವಲ್ಲವೆ?
4. ಮನೆಗಳ ಮುಂದೆಯೇ ತಾಜಾ ತರಕಾರಿ ಸೊಪ್ಪನ್ನು ಕೊಂಡು ಆರೋಗ್ಯವಂತರಾಗಿರುವ ಬದಲು ಎಂದೋ ಕೋಯ್ದ ತರಕಾರಿ ಸೊಪ್ಪುಗಳನ್ನು ಶೀತಲೀಕರಣಗೊಳಿಸಿ ತಿನ್ನುವುದು ಆರೋಗ್ಯಕ್ಕೆ ಹಾನಿಕಾರಕವಲ್ಲವೆ?
5. ಇನ್ನು ಮುಂದಾದರೂ ಇಂತಹ ಅನವಶ್ಯಕ ಚೌಕಾಶಿಗೆ ಕಡಿವಾಣ ಹಾಕಬಹುದಲ್ಲವೆ?

**ಡಾ. ಎಂ.ಎಸ್.ಮಂಜುನಾಥ**
ನಂ.12, 3ನೇ ಮುಖ್ಯ ರಸ್ತೆ, ಐಟಿಐ ಬಡಾವಣೆ,
ಮಲ್ಲತ್ತಹಳ್ಳಿ, ಬೆಂಗಳೂರು. 560 056.

ಕಾವ್ಯ
ವಿಕಾಸ

# ಸ್ವಚ್ಛತೆಯೆಡೆಗೆ ನಮ್ಮ ನಡೆ

ಬನ್ನಿ ಬನ್ನಿರಿ ಕಸವನು ಗುಡಿಸಿ
ಸ್ವಚ್ಛವ ಮಾಡೋಣ ನಮ್ಮೂರ ಕೇರಿ
ಹಾದಿ ಬೀದಿಯ ಕಸಮುಕ್ತಗೊಳಿಸಿ
ಮನೆ ಮನೆಯಲಿ ಆರೋಗ್ಯವ ಗಳಿಸಿ ॥1॥



ಕೇಂದ್ರ ಸರ್ಕಾರದ ಕರೆಗೆ ಓಗೊಟ್ಟು
ಸ್ವಚ್ಛ ಭಾರತದ ಸಂಕಲ್ಪ ತೊಟ್ಟು
ಗ್ರಾಮ ನೈರ್ಮಲ್ಯದ ಗುರಿಯನು ಇಟ್ಟು
ಬನ್ನಿರಿ ಸಾಗೋಣ ಮುಂದಡಿಯಿಟ್ಟು ॥2॥

ಬಯಲು ಶೌಚಕ ನಿಷೇಧ ಇಟ್ಟು
ಮನೆ ಮನೆಯಲಿ ಶೌಚಾಲಯ ಕಟ್ಟು
ಪರಿಸರ ಉಳಿಸು ಗಿಡಮರ ನೆಟ್ಟು
ಸ್ವಚ್ಛ ಜೀವನವೆ ಆರೋಗ್ಯದ ಗುಟ್ಟು ॥3॥

ಗ್ರಾಮೋದ್ದಾರವೆ ಬಾಪೂಜಿ ಕನಸು
ಮಾಡೋಣ ನಾವೆಲ್ಲರೂ ನನಸು
ಅಭಿವೃದ್ಧಿ ಪಥದೊಳು ಸಾಗುವ ತಂತ್ರ
ಮೊಳಗಲಿ ಎಲ್ಲೆಡೆ ಸ್ವಚ್ಛತೆ ಮಂತ್ರ ॥4॥

ಇದು ಸ್ವಚ್ಛ ಭಾರತದ ಅಭಿಯಾನ
ಗ್ರಾಮ ನೈರ್ಮಲ್ಯದ ಆಂದೋಲನ
ಸ್ವಚ್ಛತೆ ಜಾಗೃತಿ ಸಾರುವ ಶುಭಗಾನ
ಬನ್ನಿ ಬನ್ನಿರಿ ಕೈ ಜೋಡಿಸೋಣ ॥5॥

**ಬಾಲಕೃಷ್ಣ ಹೆಗ್ಡೆ ಬನ್ನಾ**
#153, ಬೃಂದಾವನ ಅಪಾರ್ಟ್‌ಮೆಂಟ್,
15ನೇ ಮುಖ್ಯರಸ್ತೆ ಎನ್.ಎಚ್.ಸಿಎಸ್ ಬಡಾವಣೆ,
ಬಸವೇಶ್ವರ ನಗರ,
ಬೆಂಗಳೂರು 560079
9663216571



## ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯ ವಿವಿಧ ಕಾರ್ಯಕ್ರಮಗಳ ಒಂದು ನೋಟ





# KARNATAKA VIKAS : MAY- JUNE 2018

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2018-20, License to Post "without Prepayment" WPP - 32
Date of Publication : 8th of Every Month.
RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru
on 11th, 19th, 23rd of every month.




Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Gagan A.S.**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00